

ರಂಜನೆ ಬೋಧನೆ ಪ್ರಚೋದನೆ


ಲಂಕೇಶ್


ಜುಲೈ 6, 2011 ಪುಟ 20 ರೂ. 14/-




ಚಿವಿವಿ-75










ಯಜುರ್ ಮಂದಿರದ ರಹಸ್ಯ!





ಮಗಳೂ ಕದ್ದಳು ಸೈಟು

ಮಗನ ಮದುವೆಯಲ್ಲೂ ಜಾತಿ ರಾಜಕೀಯ










ಧಾರ್ಮಿಕ ದಂಧೆಕೋರರು



ಕರ್ನಾಟಕದ ಗದಗದಲ್ಲಿ ಬರುತ್ತಿರುವ POSCO ಮಾರಿ!

ನಾಡಿನ ರೈತರನ್ನು ಬೀದಿಪಾಲು ಮಾಡುವ, ನಾಡಿನ ನೆಲ-ಜಲ ಸಂಪನ್ಮೂಲವನ್ನು ಲೂಟಿ ಹೊಡೆದು ತಮ್ಮ ಬೊಕ್ಕಸ ತುಂಬಿಕೊಳ್ಳುವ, ರಾಜ್ಯದ ಬೊಕ್ಕಸವನ್ನು ಬರಿದು ಮಾಡುವ, ಪರಿಸರನಾಶ ಮಾಡುವ ಈ ಪೋಸ್ಕೋ ಕಂಪನಿಯ ವಿರುದ್ಧ ನಾಡಿನ ಜನರೆಲ್ಲಾ ಒಕ್ಕೊರಲಿನಿಂದ ಬೀದಿಗೆ ಇಳಿಯಬೇಕಿದೆ. ಪೋಸ್ಕೋವನ್ನು ಕರ್ನಾಟಕದಿಂದ ಮಾತ್ರವಲ್ಲದೇ ಭಾರತದಿಂದಲೇ ಒದ್ದೋಡಿಸಬೇಕಿದೆ.



ಶಿವಸುಂದರ್ ಚಾರ್ವಾಕ

ಈ ದೇಶದ ಜನತೆ ಮತ್ತು ಸಂವಿಧಾನದ ವಿರುದ್ಧ ಕಾರ್ಪೊರೇಟ್ ಕಂಪನಿಗಳು ನಡೆಸುತ್ತಿರುವ ರಾಜಸೂಯಯಾಗಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೇ ಕೃಷ್ಣ ಸಾರಥ್ಯ ವಹಿಸುತ್ತಿವೆ. ಕಾರ್ಪೊರೇಟ್ ಕಂಪನಿಗಳು ಮತ್ತು ಸರ್ಕಾರಗಳು ನಡೆಸುತ್ತಿರುವ ಈ ಯುದ್ಧದ ಹೆಸರು 'ಅಭಿವೃದ್ಧಿ'. ಯುದ್ಧ ನಡೆಯುತ್ತಿರುವುದು ಈ ದೇಶದ ಸಾಮಾನ್ಯ ಜನತೆಯ ವಿರುದ್ಧ. ಈ ಅಭಿವೃದ್ಧಿಯ ರಥಚಕ್ರಕ್ಕೆ ಸಿಲುಕಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ದೇಶದ ಮೂರು ಕೋಟಿಗೂ ಹೆಚ್ಚು ಜನ ಬೀದಿಪಾಲಾಗಿದ್ದಾರೆ. ಸಾವಿರಾರು ಜನ ಅಕ್ಷರಶಃ ಈ ಯುದ್ಧದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಆದರೆ ದೇಶದ ಹಲವು ಕಡೆಗಳಲ್ಲಿ ಸಾಮಾನ್ಯ ಜನ ಈ ಅಭಿವೃದ್ಧಿಯ ದೇವತೆಗಳು ತಮ್ಮ ಮೇಲೆ ನಡೆಸುತ್ತಿರುವ ಯುದ್ಧದ ವಿರುದ್ಧ ವೀರೋಚಿತವಾಗಿ ಹೋರಾಡಿ ಹಿಮ್ಮೆಟ್ಟಿಸುತ್ತಿದ್ದಾರೆ. ರಾಜಸೂಯ ಯಾಗದ ಕುದುರೆಯನ್ನು ಕಟ್ಟಿಹಾಕಿದ್ದಾರೆ.

ಅಂತಾ ಒಂದು ಜನಸಂಗ್ರಾಮ ಒರಿಸ್ಸಾದಲ್ಲಿ ಕಳೆದ ಹಲವು ವರ್ಷಗಳಿಂದ ನಡೆಯುತ್ತಿದೆ. ಆದರೆ ಈ ಅಸಾಮಾನ್ಯ ಹೋರಾಟ ದಿಲ್ಲಿಯ ಬೂಸಿಬಾಬಾಗಳ ಹುಸಿ ಪವಾದಗಳ, ಯಡ್ಡಿ ತರಹದವರು ಮಾಡುವ ಮುತ್ಸಾಳ ಹಾಗೂ ಮೋಸದ ಆಣೆಪ್ರಮಾಣಗಳ ಅಬ್ಬರದಲ್ಲಿ ಸಾಮಾನ್ಯ ಜನರ ಗಮನಕ್ಕೆ ಬಾರದಂತಾಗಿದೆ. ಆದರೆ ಕಳೆದ ಎರಡು ತಿಂಗಳಿಂದ ಒರಿಸ್ಸಾದ ಜಗತ್‌ಸಿಂಗ್‌ಪುರ ಜಿಲ್ಲೆಯ ಆದಿವಾಸಿ ಜನತೆ ಪೋಸ್ಕೋ ಸ್ಟೀಲ್ ಕಂಪನಿಯ ಯೋಜನೆಯ ವಿರುದ್ಧ ನಡೆಸುತ್ತಿರುವ ಹೋರಾಟ ಎಂಥಾ ತಾರಕಕ್ಕೆ ಏರಿದೆ ಎಂದರೆ ದೇಶದ ಎಲ್ಲಾ ಮಾಧ್ಯಮಗಳು ಅದರ ಬಗ್ಗೆ ವರದಿ ಮಾಡಲೇಬೇಕಾಯಿತು. ಆದರೂ ಕರ್ನಾಟಕದ ಮಾಧ್ಯಮಗಳು ಮಾತ್ರ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನೇನೂ ತೋರಲಿಲ್ಲ, ಬೇರೆ ರಾಜ್ಯದಲ್ಲಿರುವ ಯಾವುದಾದರೂ ಹೋರಾಟ ನಿರತ ಸಂಘಟನೆಯೋ, ಹೋರಾಟವೋ ಕರ್ನಾಟಕಕ್ಕೂ ವಿಸ್ತರಿಸಿದರೆ ಅದರ ಬಗ್ಗೆ ಇಲ್ಲದ ಊಹಾಪೋಹಗಳನ್ನು ಸೃಷ್ಟಿಸಿ, ಪುಂಖಾನುಪುಂಖವಾಗಿ ಕಥೆಗಳನ್ನು ಹುಟ್ಟುಹಾಕಿ, ಕರ್ನಾಟಕದ ಜನರಿಗೆ ಎಚ್ಚರಿಕೆಯನ್ನು ನೀಡುವ 'ಜವಾಬ್ದಾರಿಯನ್ನು' ಮೆರೆಯುವ ಮಾಧ್ಯಮಗಳು, ಯಾವ ಯೋಜನೆಯ ವಿರುದ್ಧ ಒರಿಸ್ಸಾದ ಜನತೆ ಹೋರಾಟ ಮಾಡುತ್ತಿದ್ದಾರೋ ಅದೇ ಯೋಜನೆ ಕರ್ನಾಟಕಕ್ಕೂ ಕಾಲಿಡುತ್ತಿರುವ ಬಗ್ಗೆ ಅಲ್ಪಸ್ವಲ್ಪ ವರದಿಗಳನ್ನು ಬಿಟ್ಟರೆ ಬೇರಾವ ಮಾಹಿತಿಗಳನ್ನೂ ಸಂಗ್ರಹಿಸುವ ಗೋಜಿಗೂ ಹೋಗುತ್ತಿಲ್ಲ.

ಆದರೆ ಇವೆಲ್ಲದರ ನಡುವೆ ಒರಿಸ್ಸಾವನ್ನು ನಾಶ ಮಾಡುತ್ತಿರುವ ದಕ್ಷಿಣ ಕೊರಿಯಾದ ಪೋಸ್ಕೋ (POSCO) ಕಂಪನಿ ಈಗ ಅಷ್ಟೇ ದೊಡ್ಡದಾದ ದೈತ್ಯ ಸ್ಟೀಲ್ ಕಂಪನಿಯನ್ನು ಕರ್ನಾಟಕದ ಗದಗ ಜಿಲ್ಲೆಯಲ್ಲಿ ಸದ್ದುಗದ್ದಲವಿಲ್ಲದೆ ಪ್ರಾರಂಭಿಸಲು ಎಲ್ಲಾ ತಯಾರಿಯನ್ನೂ ಮಾಡಿಕೊಳ್ಳುತ್ತಿದೆ.

ದಕ್ಷಿಣ ಕೊರಿಯಾದ ಈ Pohang Steel Company (Posco) ಪ್ರಪಂಚದಲ್ಲೇ ಮೂರನೇ ಅತಿದೊಡ್ಡ ಸ್ಟೀಲ್ ಕಂಪನಿ. ಆದರೆ ಅದು ಈ ಸಾಧನೆಯನ್ನು ಮಾಡಿರುವುದು ಬಡದೇಶಗಳನ್ನು ಮತ್ತು ಅದರ ಪರಿಸರವನ್ನು ಹಾಗೂ ಅಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಲೂಟಿ ಮಾಡುವ ಮೂಲಕವೇ. ಇದು ಎಷ್ಟು ಲಾಭಕೋರ ಮತ್ತು ಪರಿಸರ ವಿರೋಧಿ ಎಂದರೆ 2005ರಲ್ಲಿ ಭಾರತಕ್ಕೆ ಬರುವ ಮುಂಚೆ ಅದು ಬ್ರೆಜಿಲ್‌ನಲ್ಲಿ ತನ್ನ ಸ್ಟೀಲ್ ಕಂಪನಿ ಪ್ರಾರಂಭಿಸಲು ಯೋಚಿಸಿತ್ತು. ಆದರೆ ಅದಕ್ಕೆ ತನಗೆ ಬೇಕಾದಷ್ಟು ಅದಿರು ಗಣಿಗಾರಿಕೆಯನ್ನು ಕಡಿಮೆ ದರದಲ್ಲಿ ಬಿಟ್ಟುಕೊಡಬೇಕೆಂದು ಶರತ್ತು ಹಾಕಿತು. ಆಗ ಬ್ರೆಜಿಲ್ ಸರ್ಕಾರ ತನ್ನ ದೇಶದ ಅದಿರನ್ನು ಲೂಟಿ ಮಾಡುವುದಾದರೆ ಅದಕ್ಕೆ ತಕ್ಕ ರಾಯಲ್ಟಿಯನ್ನು ದೇಶಕ್ಕೆ ಕಟ್ಟಬೇಕು ಎಂದು ತಾಕೀತು ಮಾಡಿತು. ಅದಕ್ಕೊಪ್ಪದ ಈ ಕಂಪನಿಯನ್ನು ಅಲ್ಲಿನ ಜನ ಅಲ್ಲಿಂದ ಒದ್ದೋಡಿಸಿದರು. ಅಲ್ಲಿಂದ ಸೀದಾ ಭಾರತಕ್ಕೆ ಬಂದ ಪೋಸ್ಕೋ ಇಲ್ಲಿಯೂ ಅದೇ ಶರತ್ತನ್ನು ಹಾಕಿತು. ಆದರೆ ಭಾರತಕ್ಕಿಂತ ಬಡದೇಶವಾದ ಬ್ರೆಜಿಲ್‌ನಷ್ಟು ಸ್ವಾಭಿಮಾನ ಪ್ರದರ್ಶಿಸದ ಭಾರತ ಸರ್ಕಾರ ಎರಡು ಕೈಗಳಿಂದ ಪೋಸ್ಕೋವನ್ನು ಆಹ್ವಾನಿಸಿತಲ್ಲದೆ ಅದರ ಎಲ್ಲಾ ಶರತ್ತುಗಳಿಗೂ ಒಪ್ಪಿಗೆ ಸೂಚಿಸಿತು. ಅದಕ್ಕೆ ಎಲ್ಲಾ ವಿರೋಧ ಪಕ್ಷಗಳ ಸಮ್ಮತಿ ಇತ್ತು. ಕೇಂದ್ರ ಆಳುವ ಯುಪಿಎ ಸರ್ಕಾರದ ವಿರೋಧಿ ಬಣವಾದ ಎನ್‌ಡಿಎಯ ಸಹಭಾಗಿ ಪಕ್ಷವಾದ ಬಿಜು ಜನತಾದಳ ಸರ್ಕಾರವೇ ಒರಿಸ್ಸಾದಲ್ಲಿದ್ದು ಪೋಸ್ಕೋವನ್ನು ಒರಿಸ್ಸಾಗೆ ತರಲು ಮತ್ತು ಅದರ ಯಾವುದೇ ಶರತ್ತುಗಳಿಗೆ ತಲೆಬಾಗಲು ಕೇಂದ್ರದೊಡನೆ ಪೈಪೋಟಿ ನಡೆಸಿತ್ತು.

ಹೀಗೆ ಈ ದೇಶದ ಆಳುವ ವರ್ಗಗಳ ದಲ್ಲಾಳಿ ಜನವಿರೋಧಿ ನೀತಿಗಳ ಭಾಗವಾಗಿ ಪೋಸ್ಕೋ ಕಂಪನಿ 2005ರಲ್ಲಿ ಒರಿಸ್ಸಾದ ಜಗತ್‌ಸಿಂಗ್‌ಪುರದಲ್ಲಿ ನೆಲೆಯೂರಿತು. ಸುಮಾರು 52,000 ಕೋಟಿ ರೂ. ಬಂಡವಾಳ ಹೂಡಿಕೆಯ ಈ ಯೋಜನೆಯನ್ನು ಎಲ್ಲಾ ಪಕ್ಷಗಳು ಭಾರತದ ಮುಕ್ತ ಆರ್ಥಿಕತೆಯ ವಿಜಯವೆಂದೇ ಘೋಷಿಸಿದವು. ಆದರೆ ಈ ಯೋಜನೆಯ ಒಂದೊಂದೇ ಬಣ್ಣ ಬಯಲಾದಂತೆ ಈ ಯೋಜನೆ ಎಷ್ಟು ಜನವಿರೋಧಿ ಮತ್ತು ದೇಶವಿರೋಧಿ ಎಂದು ಬಯಲಾಗತೊಡಗಿತು. ಈ ಯೋಜನೆಯ ಭಾಗವಾಗಿ ಪಾರಾದೀಪ್ ಬಂದರಿನ ಬಳಿ 4004 ಎಕರೆ ಜಮೀನನ್ನು ಸ್ಟೀಲ್ ಕಾರ್ಖಾನೆ ಸ್ಥಾಪಿಸಲು ನೀಡಲಾಗಿದೆ. ಕಿಯೋಂಜರ್ ಜಿಲ್ಲೆಯ ಬಳಿ 6200 ಹೆಕ್ಟೇರ್ ಪ್ರದೇಶದಲ್ಲಿ ಮುಂದಿನ 30 ವರ್ಷಗಳಲ್ಲಿ 600 ಮಿಲಿಯನ್ ಟನ್ನಿನಷ್ಟು ಕಬ್ಬಿಣದ ಅದಿರನ್ನು ಬಿಡಿಗಾಸಿನ ಬೆಲೆಗೆ ಗಣಿಗಾರಿಕೆ ಮಾಡಲು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಅವೆಲ್ಲವೂ, ಆದಿವಾಸಿಗಳು ಪರಂಪರಾನುಗತವಾಗಿ ಬದುಕುತ್ತಾ ಬಂದಿರುವ ಪ್ರದೇಶವಾಗಿದ್ದು ಸಂವಿಧಾನದ ಪ್ರಕಾರ ಅಲ್ಲಿನ ಜನರ ಒಪ್ಪಿಗೆಯಿಲ್ಲದೆ ಅಲ್ಲಿ ಯಾವುದೇ ಕೈಗಾರಿಕಾ ಚಟುವಟಿಕೆ ಕೈಗೊಳ್ಳುವಂತಿಲ್ಲ, ಹಾಗೆಯೇ ಈಗಿರುವ ಅರಣ್ಯ ಇಲಾಖೆಯ ಕಾನೂನುಗಳ ಪ್ರಕಾರ ಇಂಥಾ ದಟ್ಟ ಅರಣ್ಯದಲ್ಲಿ ಈ ಪ್ರಮಾಣದ ಗಣಿಗಾರಿಕೆ ಮಾಡುವಂತೆಯೇ ಇಲ್ಲ, ಹಾಗೊಂದು ವೇಳೆ ಮಾಡಿದಲ್ಲಿ ಈ ದೇಶದ ಪರಿಸರ ಮತ್ತು ಆದಿವಾಸಿಗಳ ಬದುಕು ಶಾಶ್ವತವಾಗಿ ಹಾಳಾಗುತ್ತದೆ. ಆದರೆ ವಿದೇಶೀ ಬಂಡವಾಳದ ಈ ಯೋಜನೆಯನ್ನು ಶತಾಯಗತಾಯ ಜಾರಿಗೆ ತರಲೇಬೇಕೆಂದು ಕೇಂದ್ರ ಮತ್ತು ಒರಿಸ್ಸಾ ರಾಜ್ಯ ಸರ್ಕಾರ ಎಲ್ಲಾ ಕಾನೂನನ್ನು ಗಾಳಿಗೆ ತೂರಿ ಈ ಯೋಜನೆಗೆ ಎಲ್ಲಾ ಬಗೆಯ ಲೈಸೆನ್ಸ್‌ಗಳನ್ನು ನೀಡಿವೆ.

ಇದರಲ್ಲಿ ಮತ್ತೊಂದು ದೇಶ ದ್ರೋಹವೂ ಅಡಗಿದೆ. ಯಾವ ಪ್ರದೇಶದಲ್ಲಿ ಈಗ ಪೋಸ್ಕೋ ಕಂಪನಿಗೆ ಗಣಿಗಾರಿಕೆ ನೀಡಲು ಅವಕಾಶ ಕೊಡಲಾಗಿದೆಯೋ ಅಲ್ಲಿ ಕರ್ನಾಟಕದಲ್ಲಿ ಜನ ಹೋರಾಟಗಳಿಂದ ಗಣಿಗಾರಿಕೆ ನಿಲ್ಲಿಸಬೇಕಾಗಿದ್ದ ಕುದುರೆಮುಖ ಗಣಿಗಾರಿಕೆ ಕಂಪನಿ (KIOCL) ತನಗೆ ಗಣಿಗಾರಿಕೆ ಅನುಮತಿ ನೀಡಬೇಕೆಂದು ಒರಿಸ್ಸಾ ಸರ್ಕಾರಕ್ಕೆ ಅರ್ಜಿ ಸಲ್ಲಿಸಿತ್ತು, ಆದರೂ ಒರಿಸ್ಸಾ ಸರ್ಕಾರ ಅನುಮತಿಯನ್ನು ನೀಡಿದ್ದು ವಿದೇಶೀ ಪೋಸ್ಕೋ ಕಂಪನಿಗೇ. ಅದರ ವಿರುದ್ಧ ಕುದುರೆಮುಖ ಕಂಪನಿ ಹೈಕೋರ್ಟಿಗೆ ದೂರು ಸಲ್ಲಿಸಿತ್ತು, ಹೈಕೋರ್ಟು ಸಹ ಕುದುರೆಮುಖ ಕಂಪನಿಯ ಹಿತಾಸಕ್ತಿಗೆ ಧಕ್ಕೆ ಬಾರದಂತೆ ಗಣಿಗಾರಿಕೆ ಪರವಾನಗಿ ಕೊಡಬೇಕೆಂದು ಸರ್ಕಾರಕ್ಕೆ ಸೂಚಿಸಿತ್ತು, ಆದರೂ ಒರಿಸ್ಸಾ ಸರ್ಕಾರ ಅಂತಿಮವಾಗಿ ಗಣಿಗಾರಿಕೆ ಲೈಸೆನ್ಸ್ ಅನ್ನು ಪೋಸ್ಕೋ ಕಂಪನಿಗೇ ನೀಡಿತು. ಇದರರ್ಥ ಕುದುರೆಮುಖ ಕಂಪನಿಗೆ ಕೊಟ್ಟಿದ್ದರೆ ಪರಿಸರ ನಾಶ ಮತ್ತು ಜನರ ಬದುಕಿನ ನಾಶ ಆಗುತ್ತಿರಲಿಲ್ಲವೆಂದಲ್ಲ, ಆ ಕಂಪನಿಯಿಂದ ಕರ್ನಾಟಕದ ಪರಿಸರಕ್ಕೆ ಆಗಿರುವ ನಾಶದಿಂದಲೇ ಜನ ಅದರ ವಿರುದ್ಧ ಹೋರಾಟ ಮಾಡಿದ್ದು. ಆದರೆ ಈ ನಿದರ್ಶನ ಸರ್ಕಾರ ಹೇಗೆ ತನ್ನದೇ ಕಂಪನಿಗಳನ್ನು ಕೊಂದು ವಿದೇಶೀ ಕಂಪನಿಗಳನ್ನು ಬೆಳೆಸುವ ದಲ್ಲಾಳಿ ನೀತಿಗಳನ್ನು ಪಾಲಿಸುತ್ತಿವೆ ಎಂಬುದನ್ನಷ್ಟೇ ತೋರಿಸುತ್ತದೆ.

ಈ ಯೋಜನೆಯಿಂದ ಕಿಯೋಂಜರ್ ಮತ್ತು ಜಗತ್‌ಸಿಂಗ್ಪುರ್ ಜಿಲ್ಲೆಯ ಎರಡು ಲಕ್ಷಕ್ಕೂ ಹೆಚ್ಚು ಜನರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬಾಳನ್ನು ಕಳೆದುಕೊಳ್ಳುತ್ತಿದ್ದಾರೆ. ಬೀದಿಗೆ ಬೀಳಲಿದ್ದಾರೆ. ಬದಲಿಗೆ ಈ ಕಂಪನಿಯಿಂದ ಈ ದೇಶಕ್ಕೆ ಏನಾದರೂ ಲಾಭವಿದೆಯೇ?

ಯಾವುದೇ ಕೈಗಾರಿಕೆ ಬಂದರೆ ಅದರ ವಹಿವಾಟಿನ ಮೇಲೆ ತೆರಿಗೆ ಹಾಕುವ ಮೂಲಕ ಮತ್ತು ಉದ್ಯೋಗ ಸೃಷ್ಟಿಯ ಮೂಲಕ ಜನತೆಗೆ ಮತ್ತು ದೇಶಕ್ಕೆ ಸಹಾಯವಾಗುತ್ತದೆ ಎಂದು ಸರ್ಕಾರ ವಾದಿಸುತ್ತದೆ. ಆದರೆ ಈ ಯೋಜನೆಯೊಂದನ್ನು ವಿಶ್ಲೇಷಿಸಿದರೆ ಸಾಕು ಅವೆಲ್ಲಾ ಎಷ್ಟು ಸುಳ್ಳುಗಳ ಕಂತೆ ಎಂಬುದು ಅರ್ಥವಾಗುತ್ತದೆ. ಈ ಯೋಜನೆಯು ವಿಶೇಷ ಆರ್ಥಿಕ ವಲಯದಡಿ (SEZ) ಸ್ಥಾಪಿತವಾಗುತ್ತಿದೆ. ಅಂದರೆ ಇದು ಉತ್ಪಾದನೆ ಪ್ರಾರಂಭಿಸಿದ ಮುಂದಿನ 30 ವರ್ಷಗಳ ಕಾಲ ಸರ್ಕಾರಕ್ಕೆ ತೆರಿಗೆಯನ್ನೇ ನೀಡಬೇಕಿಲ್ಲ, ಸರ್ಕಾರಿ ಲೆಕ್ಕಾಚಾರದ ಪ್ರಕಾರವೇ ಇದರಿಂದಾಗಿ ಮುಂದಿನ ಮೂವತ್ತು ವರ್ಷಗಳಲ್ಲಿ ಒರಿಸ್ಸಾ ಸರ್ಕಾರಕ್ಕೆ 22, 500 ಕೋಟಿ ರೂಗಳಷ್ಟು ಮತ್ತು ಕೇಂದ್ರ ಸರ್ಕಾರಕ್ಕೆ 89,000 ಕೋಟಿ ರೂ.ಗಳಷ್ಟು ತೆರಿಗೆ ನಷ್ಟವುಂಟಾಗಲಿದೆ. ಇನ್ನು ಸ್ಟೀಲ್ ಪ್ಲಾಂಟಿನಲ್ಲಿ ಸ್ಥಳೀಯ ಜನತೆಗಳಿಗೆ ಕೂಲಿ-ಹಮಾಲಿ-ಮಾಲಿ ಕೆಲಸಗಳಿಗಿಂತ ಭಿನ್ನವಾದ ಯಾವುದೇ ಕೆಲಸ ದೊರೆಯುವುದಿಲ್ಲ, ಏಕೆಂದರೆ ಅದು ಆಧುನಿಕ ಸ್ಟೀಲ್ ಯೋಜನೆಯಾಗಿದ್ದು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುತ್ತದೆ. ಗಣಿಗಾರಿಕೆಯಲ್ಲಿ ಅಕುಶಲ ಕೆಲಸಗಳು ಸೃಷ್ಟಿಯಾಗುವುದಾದರೂ, ಅದು ನಾಶ ಮಾಡುವ ಜೀವನ ಮೂಲಗಳ ಮತ್ತು ಪರಂಪರಾನುಗತ ಉದ್ಯೋಗ ಮತ್ತು ಬದುಕು ನಾಶಗಳ ಹೋಲಿಕೆಯಲ್ಲಿ ಕಾಲು ಭಾಗವನ್ನೂ ತುಂಬಿಕೊಡುವುದಿಲ್ಲ.

ಉದಾಹರಣೆಗೆ ಯಾವ ಭಾಗದಲ್ಲಿ ಸ್ಟೀಲ್ ಪ್ಲಾಂಟ್ ಬರುತ್ತಿದೆಯೋ ಅಲ್ಲಿ ಸಮೃದ್ಧವಾದ ವೀಳ್ಯದೆಲೆ ತೋಟಗಳಿವೆ. ಬನಾರಸಿ ಪಾನ್ ಎಂದು ಖ್ಯಾತವಾಗಿರುವ ಪಾನ್‌ಗೆ ಬಳಸುವ ಎಲೆ ಇಲ್ಲಿಂದಲೇ ಸರಬರಾಜಾಗುತ್ತದೆ. ಇಲ್ಲಿ ಒಂದೆಕರೆ ತೋಟ ಇರುವ ಕುಟುಂಬವೂ ಸಹ ಬಹಳ ಸುಲಭವಾಗಿ ನೆಮ್ಮದಿಯ ಜೀವನ ನಡೆಸುವಷ್ಟು ಆದಾಯ ಇದರಿಂದ ಬರುತ್ತದೆ. ಅಲ್ಲದೆ ಇದರ ಸುತ್ತವೇ ಒಂದು ಆರ್ಥಿಕತೆಯು ಬೆಳೆದುಕೊಂಡು ಹತ್ತಾರು ಸಾವಿರ ಜನರನ್ನು ಸಾಕುತ್ತಿದೆ. ಆದರೆ ಪೋಸ್ಕೋ 5-6,000 ಕ್ಕಿಂತ ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸುವುದಿಲ್ಲ, ಈಗಿರುವ ಅಲ್ಪಸ್ವಲ್ಪ ನೆಮ್ಮದಿಯನ್ನು ತಂದುಕೊಡುವುದಿಲ್ಲ.

ಹೇಗೆ ನೋಡಿದರೂ ಈ ಯೋಜನೆ ಜನವಿರೋಧಿ, ದೇಶ ದ್ರೋಹಿ ಮತ್ತು ಪರಿಸರ ವಿರೋಧಿ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ 'ಜನರ ಅಭಿವೃದ್ಧಿ'ಯನ್ನು ನಾಶ ಮಾಡುವ ಮತ್ತು ವಿದೇಶಿ ಕಂಪನಿಗಳ 'ಅಭಿವೃದ್ಧಿ'ಯನ್ನು ಹೆಚ್ಚಿಸುವ ಯೋಜನೆಯಾಗಿದೆ.


ಹೀಗಾಗಿಯೇ ಅದರ ವಿರುದ್ಧ 2006ರಿಂದಲೂ ಒರಿಸ್ಸಾದ ಜನತೆ ಬೃಹತ್ ಹೋರಾಟ ನಡೆಸುತ್ತಿದ್ದಾರೆ. ಸರ್ಕಾರ ವಿದೇಶಿ ಕಂಪನಿಯ ಪರವಾಗಿ ತನ್ನದೇ ಜನರ ಮೇಲೆ ಹಲವಾರು ಬಾರಿ ಲಾಠಿಚಾರ್ಜ್‌ಗಳು, ಒಂದೆರಡು ಬಾರಿ ಗೋಲಿಬಾರ್‌ಗಳನ್ನೂ ನಡೆಸಿದೆ. ಹತ್ತಾರು ಜನ ಪ್ರಾಣ ಕಳೆದುಕೊಂಡಿದ್ದಾರಲ್ಲದೆ ಏನಿಲ್ಲವೆಂದರೂ ಸಾವಿರಾರು ಬಡರೈತರ ಮೇಲೆ ಹತ್ತಾರು ಸುಳ್ಳು ಮೊಕದ್ದಮೆಗಳನ್ನು ಏಕಕಾಲದಲ್ಲಿ ಹಾಕಲಾಗಿದೆ. ಪರಿಣಾಮವಾಗಿ ಅವರಲ್ಲಿ ಬಹುಪಾಲು ಜನಕ್ಕೆ ಅನಾರೋಗ್ಯವುಂಟಾದರೆ ಆಸ್ಪತ್ರೆಗೂ ಹೋಗದಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ಬದುಕೇ ನಾಶವಾಗುತ್ತಿರುವಾಗ ಶಾಲೆಗೆ ಹೋಗುವುದರಲ್ಲಿ ಅರ್ಥ ವಿಲ್ಲವೆಂದು ಮಕ್ಕಳು ಸಹ ತಮ್ಮ ಅಪ್ಪ-ಅಮ್ಮಂದಿರ ಜೊತೆ ಬೀದಿ ಯಲ್ಲಿ ಹೋರಾಟದಲ್ಲಿ ತೊಡಗಿದ್ದಾರೆ. ಆದರೆ ಸರ್ಕಾರ ಎಷ್ಟು ಕ್ರೂರಿ ಎಂದರೆ ಮಕ್ಕಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆಂದು ಪೋಷಕರ ಮೇಲೇ ಕೇಸು ಹಾಕುವ ಸನ್ನಾಹ ನಡೆಸಿದೆ.

16ನೇ ಪುಟಕ್ಕೆ...

ನೋ ಕಾಮೆಂಟ್ಸ್

"ಮಹಿಳೆಯರ ಬರಹಗಳನ್ನು ಜಾಗತಿಕವಾಗಿ, ಸಾರಾಸಗಟಾಗಿ ಹೀಗೆ ನಿಕೃಷ್ಟವೆಂದೂ, ಪುರುಷತನ ಸರಿಗಟ್ಟುವಂಥದಲ್ಲವೆಂದೂ ಹೇಳುವ ಮೂಲಕ ನೈಪಾಲ್ ಯುಗಯುಗಗಳಿಂದ ವ್ಯವಸ್ಥೆಯಲ್ಲಿ ಬೇರುಬಿಟ್ಟಿರುವಂಥಾ, ಸ್ತ್ರೀ ಕುರಿತ ಅವಹೇಳನದ ಭಾವನೆಗಳಿಗೆ ತಾವೂ ಕೈಜೋಡಿಸಿದ್ದಾರೆ. ಪುರುಷ ತತ್ವಜ್ಞಾನಿಗಳು, ಧಾರ್ಮಿಕ ಗುರುಗಳು, ಸಾಂಸ್ಕೃತಿಕ ಮುಖಂಡರು ದೀರ್ಘಕಾಲದಿಂದ ಮಹಿಳೆಯನ್ನು ಅಪರಿಪೂರ್ಣ ಪುರುಷನೆಂದೂ, 'ಕೊರತೆಯುಳ್ಳ ಮನುಷ್ಯ'ನೆಂದೂ ಭಾವಿಸಿದ ಚರಿತ್ರೆ ಪಶ್ಚಿಮದಲ್ಲಿದೆ. ಇಂಥದೇ ಮನೋಭಾವದ ಲೇಖಕರು ಜಗತ್ತಿನ ಎಲ್ಲೆಡೆ ಇದ್ದೇ ಇರುತ್ತಾರೆ. ಕನ್ನಡದಲ್ಲೂ ಇಂಥಾ ಲೇಖಕರಿದ್ದಾರೆ."

- ಬಿ.ಎನ್. ಸುಮಿತ್ರಾಬಾಯಿ



ನಂಬಿದ್ರೆನಂಬಿ ಬಿಟ್ರೆಬಿಡಿ

"ಬಾರ್‌ಗಳಲ್ಲಿ ಮಹಿಳೆಯರನ್ನು ನೇಮಕಮಾಡಿಕೊಳ್ಳಬಹುದಾಗಿ ಸಚಿವ ರೇಣುಕಾಚಾರ್ಯ ಹೇಳಿಕೆ ನೀಡಿದ್ದಾರೆ. ಬಾರ್‌ಗಳಲ್ಲಿ ಮಹಿಳೆಯರು ಕೆಲಸ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ರಾತ್ರಿ ವೇಳೆ ಅವರು ಕೆಲಸ ನಿರ್ವಹಿಸಲು ನಮ್ಮ ವಿರೋಧವಿದೆ."

- ಪ್ರಮೋದ್ ಮುತಾಲಿಕ್


"ಇದು ದೇವಸ್ಥಾನದಲ್ಲಿ ಬಗೆಹರಿಯುವ ವಿಚಾರವಲ್ಲ, ಭ್ರಷ್ಟಾಚಾರ ವಿಚಾರಣೆಗೆ ನ್ಯಾಯಾಂಗ ವ್ಯವಸ್ಥೆ ಇದೆಯಲ್ಲ, ಇವರ ಆಣೆ-ಪ್ರಮಾಣದಿಂದಾಗಿ ಮಂಜುನಾಥನ ಮೇಲೆ ಜನರಿಗೆ ಇರುವ ನಂಬಿಕೆ ಹಾಳಾಗದಿರಲಿ."

- ಸಂತೋಷ್ ಹೆಗ್ಡೆ

ದಲಿತ ಚಿಂತನೆಯ ಜಾಗ[illegible]ೀಕರಣ!

ಈಗ ನಾವು ಹಿಂದಿನಷ್ಟು ನಿರಾಶರಾಗಬೇಕಿಲ್ಲ. ಹಿಂದೆಲ್ಲಾ ಕಠೋರ ಬಡತನವಿತ್ತು, ಈಗ ಹಸಿವಿನಿಂದ ನರಳುವವರ ಸಂಖ್ಯೆಯೂ ಕಡಿಮೆಯಾಗಿದೆ. ಇದಕ್ಕೆಲ್ಲಾ ಆರ್ಥಿಕ ಪ್ರಗತಿ ಕಾರಣ. ನಾವು ಜಾಗತೀಕರಣಕ್ಕೆ ತೆರೆದುಕೊಂಡಿದ್ದೇ ಇದಕ್ಕೆ ಕಾರಣ. ಹಿಂದೆ ಇದ್ದ ಎಕಾನಮಿ ಇಷ್ಟೊಂದು ಬದಲಾವಣೆಗಳನ್ನು ತಂದಿರಲಿಲ್ಲ.

- ಮೂಡ್ನಾಕೂಡು ಚಿನ್ನಸ್ವಾಮಿ



ಬ್ರಾಹ್ಮಣ್ಯಕ್ಕೆ ಪಕ್ಷ ಭೇದವಿಲ್ಲ!




"ಜಗತ್ತಿನಲ್ಲಿ ಯಾವ ಭಾಗದಲ್ಲೂ ಇಲ್ಲದ ಜ್ಞಾನಸಂಪತ್ತು ಸಂಸ್ಕೃತದ ಉಪನಿಷತ್ತುಗಳಲ್ಲಿವೆ. ವಿಜ್ಞಾನದಲ್ಲಿ ಈಗ ಹೇಳಲಾಗುತ್ತಿರುವ ಮಹಾಸ್ಫೋಟ ಸಿದ್ಧಾಂತದಿಂದ ಅಹಂ ಬ್ರಹ್ಮಾಸ್ಮಿ ಎನ್ನುವ ಆತ್ಮಾವಲೋಕನದವರೆಗೆ ಅನೇಕ ಸಂಗತಿಗಳು ಉಪನಿಷತ್ತಿನಲ್ಲಿವೆ. ಮಾತೃ, ಪಿತೃ ಪದಗಳಿಗೂ ಮದರ್, ಫಾದರ್ ಪದಗಳಿಗೂ ಸಂಬಂಧವಿರುವುದನ್ನು ಗಮನಿಸಬಹುದು. ತಾಯಿ, ತಂದೆಯರನ್ನು, ಗುರು ಅತಿಥಿಗಳನ್ನು ದೇವರಂತೆ ಕಾಣು ಎಂದು ಉಪನಿಷತ್ತು ಹೇಳುತ್ತದೆ. ಆದ್ದರಿಂದಲೇ ಪಾಶ್ಚಾತ್ಯರಲ್ಲಿ ಇಲ್ಲದ ಎಲ್ಲರನ್ನೂ ಗೌರವಿಸುವ ವಿಶಿಷ್ಟ ಸಂಸ್ಕೃತಿಯೊಂದು ನಮ್ಮಲ್ಲಿ ಬೆಳೆದುಬಂದಿದೆ."

- ಹಂಸರಾಜ್ ಭಾರದ್ವಾಜ್, ರಾಜ್ಯಪಾಲ

ಉಪ್ಪಿಟ್ಟಿಗೆ ಸಿಕ್ಕ ಮಾನ್ಯತೆ...



• ಗೌರಿ ಲಂಕೇಶ್
editorlankesh@gmail.com



ಮೊನ್ನೆ ಪುಟಪರ್ತಿಯಲ್ಲಿಯ ಒಂದು ಕೊಠಡಿಯನ್ನು ತೆರೆದಾಗ ಅದು ಸಾಯಿ ಬಾಬಾ ಎಂಬ ಸ್ವಘೋಷಿತ 'ದೇವಮಾನವನ' ...ಮಾಗಿತ್ತೋ ಅಥವಾ ಅಲಿ ಬಾಬಾ ...ತೆಯಲ್ಲಿ ಬರುವ ನಲವತ್ತು ...ಕೋರರು ಜನರಿಂದ ಕದ್ದ ...ಚಿನ್ನಾಭರಣವನ್ನು ಬಚ್ಚಿಟ್ಟಿದ್ದ ಗುಹೆ ...ಗಿತ್ತೋ ಎಂಬ ಅನುಮಾನ ...ಹಳಷ್ಟು ಜನರಲ್ಲಿ ಮೂಡಿತು.

ಚಿನ್ನದ ಕಿರೀಟಗಳು, ...ಮಂಡ್‌ಗಳಿದ್ದ ಪೊಟ್ಟಣಗಳು, ...ಪಾಟಿನ ತುಂಬ ಸೆಂಟಿನ ...ಾಟಲಿಗಳು, ಕೂದಲಿಗೆ ಹಾಕುವ ...ಗಳು, ನೈಕಿ ಮತ್ತು ಆಡಿಡಾಸ್ ಶೂಗಳು, ...ಧುನಿಕ ಕ್ಯಾಮೆರಾಗಳು.... ಜೊತೆಗೆ ಆ ...ಠಡಿಯಲ್ಲಿ ಅದೆಷ್ಟು ಹಣವಿತ್ತೆಂದರೆ ಅದನ್ನು ಲೆಕ್ಕ ...ಹಾಕಲೆಂದೇ ಸ್ಟೇಟ್ ಬ್ಯಾಂಕಿನಿಂದ ಹಣ ಎಣಿಸುವ ...ಮೂರು ಮೆಷಿನ್‌ಗಳನ್ನು ತರಲಾಗಿತ್ತು, ಆ ...ಷಿನ್‌ಗಳಿಗೂ ಅಲ್ಲಿದ್ದ ಹಣವನ್ನು ಲೆಕ್ಕಹಾಕಲು ...6 ಗಂಟೆಗಳೇ ಬೇಕಾಯಿತೆಂದರೆ ಲೆಕ್ಕ ಹಾಕಿ.... ...ನೆಗೆ ಅಲ್ಲಿದ್ದ ಎಲ್ಲದರ ಒಟ್ಟು ಮೌಲ್ಯ 35 ...ೋಟಿಗಿಂತಲೂ ಹೆಚ್ಚು ಎಂದು ...ಂದಾಜಿಸಲಾಯಿತು.

ಇಷ್ಟೆಲ್ಲ ಹಣ, ಚಿನ್ನ, ವಜ್ರ, ಬೆಳ್ಳಿ, ಕ್ಯಾಮೆರಾ ...ತ್ಯಾದಿಗಳೆಲ್ಲ ಬಂದಿದ್ದು ಎಲ್ಲಿಂದ? ಅವುಗಳನ್ನು ಕೊಟ್ಟವರು ...ಾರು? ಅದನ್ನು ಸಾಯಿಬಾಬಾ ತನ್ನ ಟ್ರಸ್ಟಿಗೆ ಕೊಡದೇ ...ನ್ನ ರೂಮಿನಲ್ಲಿ ಇಟ್ಟುಕೊಂಡಿದ್ದು ಏತಕ್ಕೆ? ಇದು ಅಕ್ರಮ ...ಪತ್ತಲ್ಲದೆ ಮತ್ತಿನ್ನೇನು? ಮೊನ್ನೆ ಪುಟ್ಟಪರ್ತಿಯಿಂದ ...ಪ್ಪಿಸಿಕೊಂಡು ಬೆಂಗಳೂರು ಮತ್ತು ಇತರೆಡೆ ಗೋಣಿ ...ೀಲಗಳಲ್ಲಿ ಸಾಗಿಸಲ್ಪಡುತ್ತಿದ್ದ ಕೋಟ್ಯಾಂತರ ರೂಪಾಯಿಗಳು ...ಾರದ್ದು? ಹಣ ಸಾಗಿಸುತ್ತಿದ್ದವರು ಯಾರು?

ಇಂತಹ ಪ್ರಶ್ನೆಗಳು ಕೇವಲ ಸಾಯಿಬಾಬಾನಿಗೆ ...ಮಿತವಾಗಿಲ್ಲ. ಇವತ್ತು ಆತನಂತೆಯೇ ಕಾವಿ ಅಥವಾ ...ಳಿ ಬಟ್ಟೆಯನ್ನು ತೊಟ್ಟು ಯೋಗ, ಧರ್ಮ ಇತ್ಯಾದಿ ...ಸರುಗಳಲ್ಲಿ ಅಪಾರ ಸಂಪತ್ತನ್ನು ಗಳಿಸುತ್ತಿರುವ ಇತರೆ ...ನರ ಬಗ್ಗೆಯೂ ಕೇಳಬೇಕಿದೆ.


ಯೋಗ ಗುರು ರಾಮದೇವನಿಗೆ ಅಷ್ಟೊಂದು ಸಂಪತ್ತು ...ಂದಿದ್ದು ಎಲ್ಲಿಂದ? ಶ್ರೀ ಶ್ರೀ ರವಿಶಂಕರನಿಗೆ ಬರುತ್ತಿರುವ ...ದಾಯವೆಷ್ಟು? ಅಪ್ಪಿಕೋ ಅಮ್ಮನಿಗೆ ಹರಿದುಬರುತ್ತಿರುವ ...ೋಟ್ಯಂತರ ಡಾಲರ್‌ಗಳ ಮೂಲ ಯಾವುದು? ಇವರೆಲ್ಲರ ...ಸ್ಟ್‌ಗಳಲ್ಲಿ ಇರುವವರು ಯಾರ್‍ಯಾರು? ಈ ಟ್ರಸ್ಟ್‌ಗಳ ...ಕ್ಕಪತ್ರಗಳನ್ನು ಸರ್ಕಾರ ಯಾಕೆ ಶೋಧಿಸುತ್ತಿಲ್ಲ?

ಇವರೆಲ್ಲ ಇವತ್ತು ಧರ್ಮದ ಹೆಸರಲ್ಲಿ ದಂಧೆ ...ಡೆಸುತ್ತಿದ್ದಾರೆ ಎಂಬುದರ ಬಗ್ಗೆ ಯಾವ ಅನುಮಾನವೂ ...ಲ್ಲ. ಇವರನ್ನೆಲ್ಲ ಕುರಿತು ಈ ಸಂಚಿಕೆಯಲ್ಲಿ ವಿವರವಾದ ...ರದಿಯನ್ನು ಪ್ರಕಟಿಸಿದ್ದೇವೆ.

* * * *

ಬೆಳಗ್ಗಿನ ತಿಂಡಿಗೆ ಅಥವಾ ಸಂಜೆಯ ಟಿಫಿನ್‌ಗೆ ಇಡ್ಲಿ, ...ೋಸೆ, ವಡ್ಡು ಇತ್ಯಾದಿಗಳಲ್ಲಿ ಯಾವುದಿದ್ದರೂ ಸರಿ ಜನ ...ಯಿ ಚಪ್ಪರಿಸಿಕೊಂಡು ತಿನ್ನುತ್ತಾರೆ. ಆದರೆ ಉಪ್ಪಿಟ್ಟು ...ಡರೆ ಮಾತ್ರ "ಅಯ್ಯೋ ಕಾಂಕ್ರೀಟಾ?" ಎಂದು ಗೊಣಗುತ್ತಾರೆ.

ಚಿಕ್ಕವರಾಗಿದ್ದಾಗ ನಾವು ಕೂಡ ಹೀಗೆ ವರ್ತಿಸುತ್ತಿದ್ದರಿಂದ ಈ ಬಡಪಾಯಿ ಉಪ್ಪಿಟ್ಟನ್ನು ಸಾಧ್ಯವಾದಷ್ಟು ಆಕರ್ಷಕವಾಗಿ ಮಾಡಲು ನಮ್ಮ ಅಮ್ಮ ಪಡುತ್ತಿದ್ದ ಪಾಡು ಇನ್ನೂ ನೆನಪಿದೆ. ರವೆ ಜೊತೆ ಹಲವಾರು ತರಕಾರಿಗಳನ್ನು, ಸೀಸನ್‌ನಲ್ಲಿ ಅವರೇಕಾಯಿಯನ್ನು ಹಾಕಿ "ತುಂಬಾ ಚೆನ್ನಾಗಿದೆ ತಿನ್ರಿ" ಎಂದು ಒತ್ತಾಯ ಮಾಡುತ್ತಿದ್ದರು. ಆದರೆ ಅಮ್ಮ ಅದೆಷ್ಟೇ ಪ್ರಯತ್ನಪಟ್ಟರೂ ಉಪ್ಪಿಟ್ಟಿನ ಮೇಲೆ ಒಂದು ಹಿಡಿ ಸಕ್ಕರೆ ಹಾಕಿಕೊಳ್ಳದಿದ್ದರೆ ಅದು ಅಜಿತು ಗಂಟಲಲ್ಲಿ



ಫ್ಲಾಯ್ಡ್ ಕಾರ್ಡೋಜ್

ಇಳಿಯುತ್ತಿರಲಿಲ್ಲ. ಬೇಬಿ ಮತ್ತು ನನಗೆ ಅದರೊಂದಿಗೆ ಮೊಸರು, ಉಪ್ಪಿನಕಾಯಿ ಮತ್ತು ಒಂದು ಸ್ವೀಟ್ ಇದ್ದರೆ ಮಾತ್ರ ನಡೆಯುತ್ತಿತ್ತು.

ಈ ಉಪ್ಪಿಟ್ಟನ್ನು ಕುರಿತು ಹಲವು ವಿಚಿತ್ರ ಸಂಗತಿಗಳು ನನ್ನನ್ನು ಚಕಿತಗೊಳಿಸುತ್ತವೆ. ಮೊದಲನೆಯದಾಗಿ ನಮ್ಮ ಮನೆಯಲ್ಲಿ ತಯಾರಾದ ಉಪ್ಪಿಟ್ಟಿನ ಬಗ್ಗೆ ನಮಗೆ ಬಹಳ ತಾತ್ಸಾರ ಇದ್ದರೂ ನಮಗೆ ಬೇರೆಯವರ ಮನೆಯಲ್ಲಿ ತಯಾರಾದ ಉಪ್ಪಿಟ್ಟು ರುಚಿಕರವಾಗಿರುತ್ತದೆ. ಎರಡನೆಯದಾಗಿ ಎಲ್ಲರ ಬಾಲ್ಯದ ನೆನಪಿನಲ್ಲಿ ಈ ಉಪ್ಪಿಟ್ಟು ಮುಖ್ಯ ಪಾತ್ರ ವಹಿಸಿರುತ್ತದೆ. (ಬೇಕಿದ್ದರೆ ನಿಮ್ಮ ಸ್ನೇಹಿತರನ್ನು ಕೇಳಿ ನೋಡಿ!) ಮೂರನೆಯದಾಗಿ ನಾವು ದೊಡ್ಡವರಾಗಿ ನಮಗೆ ನಾವೇ ಅಡುಗೆ ಮಾಡಿಕೊಂಡು ಬದುಕುವ ಸಂದರ್ಭ ಎದುರಾದಾಗ ನಾವು ಮೊದಲು ತಯಾರಿಸಲು ಪ್ರಯತ್ನಿಸುವುದೇ ಉಪ್ಪಿಟ್ಟನ್ನು!! ಅದಕ್ಕೆ ಕಾರಣ ಇತರೆ ತಿಂಡಿಗಳಿಗಿಂತ ಇದನ್ನು ಸುಲಭವಾಗಿ ಮಾಡಬಹುದು ಎಂಬುದು! ಕೊನೆಯದಾಗಿ, ನಾವು ಚಿಕ್ಕವರಾಗಿದ್ದಾಗ ಉಪ್ಪಿಟ್ಟನ್ನು ಅದೆಷ್ಟೇ ದ್ವೇಷಿಸಿದ್ದರೂ ದೊಡ್ಡವರಾದ ಮೇಲೆ ಇದರ ಬಗ್ಗೆ ಒಂದಿಷ್ಟು ತಾಳ್ಮೆ ಮತ್ತು ಒಲವನ್ನು ಬೆಳೆಸಿಕೊಳ್ಳುವುದು!!

ಯಾವುದೇ ವಿಶೇಷಗಳನ್ನು ಹೊಂದಿರದ, ಅತಿಸಾಮಾನ್ಯ ತಿಂಡಿಗಳಲ್ಲಿ ಒಂದಾದ, ಕಾಂಕ್ರೀಟ್ ಎಂಬ ಅಡ್ಡನಾಮೆಯನ್ನು ಪಡೆದಿರುವ, ಮದುವೆ ಮತ್ತು ಹಬ್ಬದಂತಹ ವಿಶಿಷ್ಟ ಸಂದರ್ಭಗಳಲ್ಲಿ ಸ್ಥಾನಮಾನವನ್ನು ಪಡೆಯದಿರುವ, ಸ್ಟಾರ್ ಹೋಟೆಲ್‌ಗಳಲ್ಲಿ ಅಪ್ಪಿತಪ್ಪಿಯೂ ಸಿಗದ ಈ ದೈನೇಸಿ ಉಪ್ಪಿಟ್ಟು ಮೊನ್ನೆ ದೊಡ್ಡ ಸುದ್ದಿ ಮಾಡಿದೆ. ಅಮೆರಿಕದಲ್ಲಿ ಬಾಣಸಿಗನೊಬ್ಬನಿಗೆ ಬರೋಬ್ಬರಿ 45 ಲಕ್ಷ ರೂಪಾಯಿಗಳನ್ನು ಗೆದ್ದು ಕೊಟ್ಟಿರುವ ಉಪ್ಪಿಟ್ಟು ಇವತ್ತು ಜಗತ್ತಿನಾದ್ಯಂತ ಕುತೂಹಲ ಕೆರಳಿಸಿದೆ.

ಉಪ್ಪಿಟ್ಟಿಗೆ ಈಗ ಜಾಗತಿಕ ಮನ್ನಣೆಯನ್ನು ತಂದು ಕೊಟ್ಟಿರುವವನು ಫ್ಲಾಯ್ಡ್ ಕಾರ್ಡೋಜ್ ಎಂಬ ಬಾಣಸಿಗ. ಮೂಲತಃ ಗೋವಾದವನಾದ ಕಾರ್ಡೋಜ್ ಬೆಳೆದದ್ದು ಮುಂಬೈಯಲ್ಲಿ. ಚಿಕ್ಕವನಾಗಿದ್ದಾಗಿನಿಂದಲೂ ರುಚಿಕರವಾದ ಊಟದ ಬಗ್ಗೆ ಆಸಕ್ತಿ ಹೊಂದಿದ್ದ ಕಾರ್ಡೋಜ್ ಕೊನೆಗೆ ಬಾಣಸಿಗನಾಗಿ ಮುಂಬೈ ಮತ್ತು ಸ್ವಿಟ್ಜರ್‌ಲ್ಯಾಂಡಿನಲ್ಲಿ ತರಬೇತಿ ಪಡೆದ. ಆನಂತರ ಅಮೆರಿಕದ ಹಲವಾರು ಪ್ರಖ್ಯಾತ ಹೋಟೆಲ್‌ಗಳಲ್ಲಿ ದುಡಿದ. ಕೊನೆಗೆ ನ್ಯೂಯಾರ್ಕ್ ನಗರದ ಪ್ರಮುಖ ಏರಿಯಾದಲ್ಲಿ 280 ಜನ ಕೂರಬಹುದಾದ 'ತಬ್ಲ' ಎಂಬ ದೊಡ್ಡ ಹೋಟೆಲ್‌ಅನ್ನು ತೆರೆದ. ಮುಖ್ಯವಾಗಿ ಭಾರತೀಯ ಅಡುಗೆಗಳನ್ನೇ ಬಡಿಸುತ್ತಿದ್ದ 'ತಬ್ಲ' ಬಹಳ ಜನಪ್ರಿಯವಾಗಿತ್ತು. ಆದರೆ ಎರಡು ವರ್ಷಗಳ ಹಿಂದೆ ಜಾಗತಿಕ ಆರ್ಥಿಕ ಹಿನ್ನಡೆ ಉಂಟಾದಾಗ, ಇತರೆ ಹಲವಾರು ಉದ್ಯಮಗಳಂತೆ ಇದೂ ಕೂಡ ಕಣ್ಣುಮುಚ್ಚಿತು. ಅದರಿಂದ ಕಾರ್ಡೋಜ್ ಧೃತಿಗೆಡಲಿಲ್ಲ. ಬದಲಾಗಿ ಹೊಸ ಸಾಹಸಗಳಿಗೆ ಕೈಹಾಕಿದ. ಅವುಗಳಲ್ಲಿ ಒಂದು 'ಮಾಸ್ಟರ್ ಷೆಫ್' ಎಂಬ ಟಿವಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು. ಬಾಣಸಿಗರ ನಡುವೆ ಪೈಪೋಟಿ ನಡೆಯುವ ಈ ಕಾರ್ಯಕ್ರಮ ಅಮೆರಿಕದಲ್ಲಿ ಅದೆಷ್ಟು ಜನಪ್ರಿಯವಾಗಿದೆ ಎಂದರೆ ಇದರ ನಿರ್ಮಾಣಕ್ಕೆ ಲಕ್ಷಾಂತರ ಡಾಲರ್‌ಗಳನ್ನು ವ್ಯಯಮಾಡುತ್ತಾರೆ ಮತ್ತು ಲಕ್ಷಾಂತರ ಡಾಲರ್‌ಗಳ ಜಾಹೀರಾತುಗಳನ್ನೂ ಪಡೆಯುತ್ತಾರೆ. ಈ ಪೈಪೋಟಿಯಲ್ಲಿ ಗೆಲ್ಲುವ ಬಾಣಸಿಗನಿಗೆ ಒಂದು ಲಕ್ಷ ಡಾಲರ್‌ಗಳನ್ನು ಬಹುಮಾನವಾಗಿ ನೀಡುತ್ತಾರೆ.

ಈ ಕಾರ್ಯಕ್ರಮದ ಮೂರನೆ ಅವತರಣಿಕೆಯ ಅಂತಿಮ ಸುತ್ತಿನಲ್ಲಿ ಉಳಿದಿದ್ದ ಮೂವರು ಬಾಣಸಿಗರಲ್ಲಿ ಕಾರ್ಡೋಜ್ ಕೂಡ ಒಬ್ಬ. ಈ ಮೂವರಿಗೂ ಮೂರು ವಿವಿಧ ಭಕ್ಷ್ಯ ಗಳನ್ನು ತಯಾರಿಸಲು ಹೇಳಿದರು. ಅವುಗಳಲ್ಲಿ ಒಂದು 'ಬಾಲ್ಯದ ನೆನಪಿನ ತಿಂಡಿ' ಆಗಿರಬೇಕೆಂದು ಸೂಚಿಸಿದರು. ಆಗ ಭಾರತೀಯ ಮೂಲದವನಾದ ಕಾರ್ಡೋಜ್‌ಗೆ ನೆನಪಾಗಿದ್ದು ದೋಸೆ ಅಲ್ಲ, ಪೂರಿ ಅಲ್ಲ, ಚಿಕನ್ ಕುರ್ಮಾ ಅಲ್ಲ... ಬದಲಾಗಿ ಈ 'ಜುಜುಬಿ' ಉಪ್ಪಿಟ್ಟು.


ಕಾರ್ಡೋಜ್ ತಯಾರಿಸಿದ ಉಪ್ಪಿಟ್ಟಿನಲ್ಲಿ ಸಾಮಾನ್ಯವಾಗಿ ಇರುವಂತೆ ರವೆ, ಈರುಳ್ಳಿ, ಜೀರಿಗೆ, ಸಾಸಿವೆ, ಕೊತ್ತಂಬರಿ, ಎಣ್ಣೆ ಇತ್ಯಾದಿ ಇದ್ದವು. ಆದರೆ ಅವುಗಳ ಜೊತೆ ತರಕಾರಿಗಳ ಬದಲಾಗಿ ಅಣಬೆಗಳಿದ್ದವು ಮತ್ತು ನೀರಿನ ಬದಲಾಗಿ ಆತ ಚಿಕನ್ ಮಾಂಸ ಬೇಯಿಸಿದ್ದ ನೀರನ್ನು ಮತ್ತು ತೆಂಗಿನಕಾಯಿ ಹಾಲನ್ನು ಉಪಯೋಗಿಸಿದ್ದ! ಒಂದು ರೀತಿಯಲ್ಲಿ ನಮ್ಮ ಉಪ್ಪಿಟ್ಟಿಗೆ ಕಾರ್ಡೋಜ್ ಯೂರೋಪಿಯನ್ ಅಡುಗೆಯ ಟಚ್ ಕೊಟ್ಟಿದ್ದ. ಇದು ತೀರ್ಪುಗಾರರಿಗೆ ಇಷ್ಟವಾಗಿ ಆತನಿಗೆ ಒಂದು ಲಕ್ಷ ಡಾಲರ್‌ಗಳ ಬಹುಮಾನವನ್ನು ಘೋಷಿಸಿದರು. ಈ ಹಣವನ್ನು ಈಗ ಕಾರ್ಡೋಜ್ ಕ್ಯಾನ್ಸರ್ ರೋಗ ನಿವಾರಣೆಯ ಸಂಶೋಧನೆಗೆ ದಾನ ಮಾಡಿದ್ದಾನೆ.

ಒಂದಂತೂ ಸ್ಪಷ್ಟ. ಕಾರ್ಡೋಜ್ ಇವತ್ತು ಬಡಪಾಯಿ ಉಪ್ಪಿಟ್ಟಿಗೆ ಅಂತರರಾಷ್ಟ್ರೀಯ ಗಮನ ಮತ್ತು ಮನ್ನಣೆ ತಂದುಕೊಟ್ಟಿದ್ದಾನೆ. ಆದ್ದರಿಂದ ಇನ್ನು ಮುಂದೆ ಉಪ್ಪಿಟ್ಟನ್ನು 'ಕಾಂಕ್ರೀಟ್' ಎಂದು ಅವಮಾನಿಸುವಂತಿಲ್ಲ. ಹಾಗೆಯೇ ನನ್ನ ಅಮ್ಮ ಈಗಾಗಲೇ ಘೋಷಿಸಿರುವಂತೆ ತಾವು ಮಾಡುವ ಉಪ್ಪಿಟ್ಟು ಕಾರ್ಡೋಜ್‌ನ ಉಪ್ಪಿಟ್ಟಿಗಿಂತ ಚೆನ್ನಾಗಿದ್ದು ಅದಕ್ಕೆ ಯಾರೂ 45 ಲಕ್ಷ ರೂಪಾಯಿಗಳನ್ನು ನೀಡದಿದ್ದರೂ ನಾವು ಒಂದಿಷ್ಟೂ ಗೊಣಗದೆ ತೆಪ್ಪಗೆ ತಿನ್ನಬೇಕು!

ಜೈ ಉಪ್ಪಿಟ್ಟು!

ಶಿವಮೊಗ್ಗ

ಮಗಳೂ ಕದ್ದಳು ನಾಲ್ಕು ಸೈಟು!




ಅಧಿಕಾರಾವಧಿ ಮುಗಿಯುವುದರೊಳಗೆ ರಾಜ್ಯದ ಬಹುತೇಕ ಸರ್ಕಾರಿ ಭೂಮಿಯೆಲ್ಲ ಯಡ್ಡಿ ಫ್ಯಾಮಿಲಿಯ ಹೊಟ್ಟೆ ಸೇರಲಿದೆಯೇ?

ಇದೊಂದು ಪ್ರಶ್ನೆ ಇಡೀ ಕರ್ನಾಟಕವನ್ನೇ ಕಾಡಲಾರಂಭಿಸಿದೆ. ಪಕ್ಕಾ ಭಟ್ಟಂಗಿಗಳನ್ನ ಹೊರತು ಪಡಿಸಿ ಬಿಜೆಪಿ ಪಾಳೆಯದಲ್ಲೇ ಈ ಗುಮಾನಿ ಹರಿದಾಡುತ್ತಿದ್ದರೂ ಆಶ್ಚರ್ಯವಿಲ್ಲ. ಈ ರೀತಿ ಭೂಹಗರಣ ನಡೆಸುತ್ತಿರುವ ಯಡಿಯೂರಪ್ಪ ಇದೀಗ ಧರ್ಮಸ್ಥಳದ ಮಂಜುನಾಥನ ತಲೆಮೇಲೆ ಕೈಯಿಟ್ಟು ಬಚಾವಾಗಲೆತ್ನಿಸುತ್ತಿದ್ದಾರೆ. ಅದರ ಬೆನ್ನಿಗೇ ಯಡ್ಡಿ ಫ್ಯಾಮಿಲಿಯ ಭೂ ದರೋಡೆಗಳು ಸರಣಿಯೋಪಾದಿಯಲ್ಲಿ ಹೊರಬರಲಾರಂಭಿಸಿವೆ.

ಬಿಜೆಪಿ ಪರವೆಂಬ ಕಾಯಿಲೆಪೀಡಿತ ಜನ ಹಾಗೂ ಸಜೀವ ಬಕೀಟುಗಳಂತೆ ಬದುಕುತ್ತಾ ಮಠಾಧೀಶರೆಂಬ ಆರೋಪ ಹೊತ್ತವರು ಅದೇನೇ ಬಡಬಡಿಸಿದರೂ ಯಡ್ಡಿಯ ಭೀಕರ ಆಡಳಿತದಲ್ಲಿ ಕರ್ನಾಟಕ ಕಂಗಾಲಾಗಿರುವುದು ನಿರ್ವಿವಾದ. ಯಡಿಯೂರಪ್ಪನ ಕುಟುಂಬಿಕರು ಸಿಕ್ಕಸಿಕ್ಕದ್ದನ್ನು ನುಂಗಿ ಕೊಬ್ಬುತ್ತಿರುವುದೂ ಅಷ್ಟೇ ಸತ್ಯ. ಯಡ್ಡಿಯ ಸುಪುತ್ರಿ ಎಸ್.ವೈ. ಅರುಣಾದೇವಿಗೂ ಈಗ ಅದೇ ಕಾಯಿಲೆ ಬಂದಿದೆ. ವಕೀಲ ಬಿ.ವಿನೋದ್ ಬಯಲಿಗೆಳೆದಿರುವ ಸದರಿ ಹಗರಣವೀಗ ಶಿವಮೊಗ್ಗದಾದ್ಯಂತ ಚರ್ಚೆಗೆ ಗ್ರಾಸವಾಗಿದೆ. ಇದು ರಾಜ್ಯಮಟ್ಟದಲ್ಲೂ ರಾಜಕೀಯ ಸಂಚಲನ ಮೂಡಿಸುವುದೂ ಖಾತ್ರಿಯಾಗಿದೆ.

ತನ್ನಪ್ಪ ಯಡ್ಡಿಯ ಸಂಪೂರ್ಣ ಸಹಕಾರದೊಂದಿಗೆ ಅರುಣಾದೇವಿ ಅತಿ ಬುದ್ಧಿವಂತಿಕೆಯಿಂದ ನಡೆಸಿರುವ ಭೂದರೋಡೆಯಿದು. ಇದು ನಡೆದದ್ದು 2007ರಲ್ಲಿ, ಅಂದರೆ ಯಡ್ಡಿ ಉಪಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ. ಶಿವಮೊಗ್ಗ ಸೀಮೆಯಲ್ಲಿ ಲೆಕ್ಕವಿರದಷ್ಟು ವಿದ್ಯಾಸಂಸ್ಥೆ ಟ್ರಸ್ಟ್‌ಗಳ ಹೆಸರಲ್ಲಿ ದಂಧೆ ನಡೆಸುತ್ತಿರುವಾಕೆ ಯಡ್ಡಿ ಮಗಳು ಅರುಣಾದೇವಿ. ಇಂಥ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಲೇ ಪಕ್ಕಾ ಚೇಲಾ ಕೆಲಸ ಮಾಡುತ್ತಿದ್ದವರು ಕೃಷ್ಣ ಶಿವಶಂಕರ್, ಮಂಜುನಾಥ್ ಮತ್ತು ಸಂದೇಶ್‌ಗೌಡ. ಕ್ರಿಮಿನಲ್ ಮೈಂಡೆಡ್ ಅರುಣಾ ಇವರನ್ನೇ ಮುಂದಿಟ್ಟುಕೊಂಡು ಪತ್ರಕರ್ತರ ಕೋಟಾದಡಿ ಗೃಹಮಂಡಳಿಯ ಭೂಮಿ ನುಂಗಿದ ರೀತಿ ಆಘಾತಕಾರಿಯಾಗಿದೆ.

ಕಲ್ಲಳ್ಳಿ ಕಾಶೀಪುರ ರಸ್ತೆಯಲ್ಲಿರುವ ಕರ್ನಾಟಕದ ಗೃಹಮಂಡಳಿಯ 9x13.50 ಮೀಟರ್ ಅಳತೆಯ ಸೈಟುಗಳಿಗೆ ತನ್ನ ನಾಲ್ಕು ಮಂದಿ ಚೇಲಾಗಳ ಮೂಲಕ 08.08.2007 ರಂದು ಅರುಣಾ ಅರ್ಜಿ ಗುಜರಾಯಿಸಿದಳು. ತನ್ನ ತರಹೇವಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಈ ನಾಲ್ಕು ಮಂದಿಯನ್ನು ಪತ್ರಕರ್ತರೆಂದು ಬಿಂಬಿಸಿ ಪತ್ರಕರ್ತರ ಕೋಟಾದಿಂದ ಸೈಟು ನುಂಗುವ ಯೋಜನೆ ಅರುಣಾಳದ್ದು. ಯಡಿಯೂರಪ್ಪ ಮಗಳ ಬಾಯಿಗೆ ಸರ್ಕಾರಿ ಭೂಮಿ ತುರುಕಲು ಅದೆಷ್ಟು ಉತ್ಸುಕತೆ ತೋರಿಸಿದರೆಂದರೆ ಅರ್ಜಿ ಸಲ್ಲಿಸುವುದಕ್ಕಿಂತ ಎರಡು ತಿಂಗಳು ಮುಂಚಿತವಾಗಿಯೇ ಸೈಟುಗಳ ಹಂಚಿಕೆ ನಡೆದುಹೋಗಿತ್ತು, ಅರ್ಜಿ ಸಲ್ಲಿಸಿದ ದಿನಾಂಕ 08.08.07 ಸೈಟುಗಳು ಹಂಚಿಕೆಯಾದ ದಿನಾಂಕ 27.06.07!



ಎಲ್ಲಾ ಅರ್ಜಿಗಳಲ್ಲೂ ಒಂದೇ ಕೈಬರಹ...

ತದನಂತರ ನಡೆದದ್ದು ಅಸಲಿ ವ್ಯವಹಾರ. ಇಡೀ ವ್ಯವಹಾರವನ್ನು ಅತ್ಯಂತ ನಾಜೂಕುತನದಿಂದ ನಡೆಸಲು ಪ್ರಯತ್ನಿಸಿದ ಅರುಣಾ ಎರಡೂವರೆ ವರ್ಷದ ತನಕ ಸೈಟು ನುಂಗಲು ಬಕಪಕ್ಷಿಯಂತೆ ಕಾದುಕೂತಳು. 31.03.10 ರಂದು ತನ್ನ ಚೇಲಾಗಳ ಹೆಸರಲ್ಲಿದ್ದ ನಾಲ್ಕು ಸೈಟುಗಳನ್ನು ಕ್ರಯಪತ್ರದ ಮೂಲಕ ತನ್ನ ಹೆಸರಿಗೆ ವರ್ಗಾಯಿಸಿಕೊಂಡ ಅರುಣಾ 16 ಲಕ್ಷಕ್ಕೆ ಖರೀದಿಸಿದಂತೆ ತೋರಿಸಿಕೊಂಡಳು. ಅಂದಹಾಗೆ ಸೈಟುಗಳ ಇಂದಿನ ಬಜಾರು ರೇಟು ಒಂದು ಕೋಟಿಯಷ್ಟಿದೆ!

ಯಡ್ಡಿ ಮಗಳು ಅರುಣಾ ಎಷ್ಟೇ ವ್ಯವಸ್ಥಿತವಾಗಿ ಸೈಟು ಹೊಡೆಯಲು ಹೆಣಗಿದರೂ ಸಹ ಪ್ರತಿ ಹಂತದಲ್ಲೂ ಅವಿವೇಕವೆಂಬುದು ಕಣ್ಣಿಗೆ ರಾಚುವಂತಿದೆ. ಈ ನಾಲ್ಕು ಸೈಟುಗಳಲ್ಲಿ ಮಂಜುನಾಥ್ ಎಂಬಾತನಿಗೆ ಗೃಹಮಂಡಳಿಯ ವಿವೇಚನಾ ಕೋಟಾದಡಿ ಸೈಟು ಮಂಜೂರಾಗಿದ್ದರೆ, ಕೃಷ್ಣ ಶಿವಶಂಕರ್, ಸಂದೇಶ್‌ಗೌಡಗಳಿಗೆ ಪತ್ರಕರ್ತರ ಕೋಟಾದಲ್ಲಿ ಸೈಟು ಹಂಚಲಾಗಿದೆ. ಇವರೆಲ್ಲಾ ಅರುಣಾ ಸಂಸ್ಥೆಗಳಲ್ಲಿ ದುಡಿಯುವ ನೌಕರರೇ ಹೊರತು ಪತ್ರಕರ್ತರಲ್ಲ, ಇದು ಅಕ್ರಮದ ಪ್ರಮುಖ ಅಂಶ. ಇನ್ನು ಈ ಭೂಮಿ ನುಂಗಿದ ಹಗರಣಕ್ಕೆ ಬ್ಯಾಂಕ್ ಚಲನ್‌ಗಳು ಗಟ್ಟಿಯಾದ ಸಾಕ್ಷಿ ಒದಗಿಸುತ್ತದೆ. ಈ ನಾಲ್ಕು ಸೈಟುಗಳಿಗೂ ಒಂದೇ ದಿನ ಅರ್ಜಿ ಸಲ್ಲಿಸಲಾಗಿದೆ. ಬ್ಯಾಂಕ್ ಚಲನ್ ಸಂಖ್ಯೆಗಳು ಸೀರಿಯಲ್‌ನಲ್ಲಿವೆ. ಇನ್ನು ನಾಲ್ಕು ಅರ್ಜಿಗಳಲ್ಲೂ ಒಬ್ಬರದೇ ಕೈಬರಹವಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗುತ್ತದೆ.

ಈ ಭೂ ದರೋಡೆಯಲ್ಲಿ ಅರುಣಾದೇವಿ ಆರೋಪಿ



ಅರುಣಾದೇವಿ

ಸ್ಥಾನದಲ್ಲಿ ನಿಂತಿದ್ದಾಳಾದರೂ ಇಡೀ ಪ್ರಕ್ರಿಯೆಯ ರೂವಾರಿ ಯಡಿಯೂರಪ್ಪ, ಅದಿಲ್ಲದೆ ಹೋಗಿದ್ದರೆ ಇಷ್ಟು ಸಲೀಸಾಗಿ ಯಾವ ಕಾರಣಕ್ಕೂ ಸೈಟು ಹೊಡೆಯಲಾಗುತ್ತಿರಲಿಲ್ಲ. ಯಾಕೆಂದರೆ, ಸೈಟಿನ ಫಲಾನುಭವಿಗಳು ಅರ್ಜಿ ಸಲ್ಲಿಸಲೂ ಅರ್ಹರಲ್ಲ! ಮಗಳಿಗೆ ಸೈಟು ಕೊಡಿಸುವ ಸಲುವಾಗಿ ಯಡ್ಡಿ ಇಡೀ ಆಡಳಿತ ಯಂತ್ರವನ್ನೇ ಅಡ್ಡದಾರಿ ಹಿಡಿಸಿದ್ದು ಸ್ಪಷ್ಟ. ಒಂದು ಮೂಲದ ಪ್ರಕಾರ ಶಿವಮೊಗ್ಗದ ಭೂಮಿಕೆಯೊಂದರಲ್ಲೇ ಬಹುತೇಕ ಸರ್ಕಾರಿ ಭೂಮಿ ತರಹೇವಾರಿ ರೀತಿಯಲ್ಲಿ ಯಡ್ಡಿ ಫ್ಯಾಮಿಲಿಯ ಪಾಲಾಗಿದೆ.

ಇಂಥಾ ಅದೆಷ್ಟೋ ವಂಚನೆ ನಡೆಸಿರುವ ಯಡಿಯೂರಪ್ಪ ಇದೀಗ 'ನಾನು ಸಾಚಾ' ಅಂತ ಧರ್ಮಸ್ಥಳ ಮಂಜುನಾಥನ ತಲೆಮೇಲೆ ಕೈಯಿಡಲು ಸನ್ನದ್ಧರಾಗಿದ್ದಾರೆ. ಆದರೆ ಇದೊಂದೇ ಒಂದು ಪ್ರಕರಣ ಯಡ್ಡಿ ಒಬ್ಬ ಭೂಮಿ ಕಳ್ಳ ಹಾಗೂ ವಂಚಕನೆಂಬುದಕ್ಕೆ ಸಾಕ್ಷಿಯೆಂಬಂತಿದೆ. ನಿಜಕ್ಕೂ ಈ ಆಣೆ ಪ್ರಮಾಣಗಳಿಗೆ ಬೆಲೆ, ದೇವರುಗಳಿಗೆ ಅದನ್ನು ಗ್ರಹಿಸುವ ಶಕ್ತಿಯಿರುವುದೇ ಹೌದಾಗಿದ್ದರೆ ಮಂಜುನಾಥನ ತಲೆ ಮೇಲೆ ಕೈ ಮಡಗುತ್ತಲೇ ಸನ್ಮಾನ್ಯ ಯಡ್ಡಿ ಕುಸಿದು ಬೀಳುವುದು ಖಚಿತ. ಸದ್ಯ ಸಕಲ ದೇವರುಗಳೂ ಪವರ್‌ಲೆಸ್ ಸ್ಥಿತಿ ತಲುಪಿರುವುದರಿಂದಾಗಿ ಯಡ್ಡಿ ಮಂಜುನಾಥನ ಯಾವ ಭಾಗಕ್ಕೆ ಕೈಯಿಟ್ಟು ಪ್ರಮಾಣ ಮಾಡಿದರೂ ಬಚಾವಾಗೋದು ಕೂಡಾ ಸ್ಪಷ್ಟ.


ಸದ್ಯ ಶಿವಮೊಗ್ಗದಲ್ಲಿ ಮಗಳ ಮೂಲಕ ನಡೆದಿರುವ ಈ ಭೂಹಗರಣ ಯಡಿಯೂರಪ್ಪನನ್ನು ಕ್ರಿಮಿನಲ್ ಮೊಕದ್ದಮೆ ಹಚ್ಚಿ ಜೈಲಿಗೆ ಕಳಿಸಲು ಸಮರ್ಥವಾಗಿದೆ. ಇಂಥಾ ಹಲಾಲುಕೋರ ಕೆಲಸ ಮಾಡಿಯೂ, ತಾನು ಸಾಚಾ ಅಂತ ಒದರಾಡುತ್ತಿರುವ ಯಡ್ಡಿಯಿಂದ ಸರ್ಕಾರಿ ಜಮೀನುಗಳನ್ನು, ಜನರನ್ನು ಕಾಪಾಡುವವರ್‍ಯಾರು?

• ಸಂತೋಷ್ ಬಾಗಿಲಗದ್ದೆ

ಬಚಾವಾಗುವ ಭಂಡಾಟ!

ಪ್ರತಿಯೊಂದು ಹಂತದಲ್ಲೂ ಜಾಗರೂಕತೆಯಿಂದ ನಡೆದುಕೊಂಡು ಸೈಟು ನುಂಗಿದ ಅರುಣಾ ಇದೀಗ ನುಂಗಲೂ ಆಗದ ಉಗಿಯಲೂ ಆಗದ ಸ್ಥಿತಿ ತಲುಪಿದ್ದಾಳೆ. ಆದುದರಿಂದಲೇ ಈಕೆಯೀಗ ಬಚಾವಾಗಲು ಥರಥರದ ಭಂಡಾಟ ಶುರುವಿಟ್ಟುಕೊಂಡಿದ್ದಾಳೆ. ಯಡ್ಡಿ ಮಗ ರಾಘವೇಂದ್ರನೂ ತನ್ನಕ್ಕನನ್ನು ಬಚಾವ್ ಮಾಡಲು ಏನೇನೋ ಒದರಾಡ ಹತ್ತಿದ್ದಾನೆ.

ಕಲ್ಲಹಳ್ಳಿ ಕಾಶೀಪುರ ರಸ್ತೆಯಲ್ಲಿರುವ ಈ ಸೈಟು ಹಗರಣ ಸ್ಫೋಟಗೊಳ್ಳುತ್ತಲೇ ಮಾಧ್ಯಮದ ಮಂದಿ ಅರುಣಾದೇವಿಯಿಂದ ಪ್ರತಿಕ್ರಿಯೆ ಕೇಳಿದ್ದರು. ಆ ಸಂದರ್ಭದಲ್ಲೀಕೆ 'ಹೌಸಿಂಗ್ ಬೋರ್ಡ್‌ನಲ್ಲಿ ಪ್ರೆಸ್ ಕೋಟಾವೇ ಇಲ್ಲ, ಅದು ಸಿಎಂ ಕೋಟಾದಡಿಯಲ್ಲಿನ ಸೈಟು. ಅದರ ಫಲಾನುಭವಿಗಳಿಗೂ ನನಗೂ ಪರಿಚಯವೇ ಇಲ್ಲ, ಯಾರೋ ಬಂದು ಸೈಟು ಕೊಡ್ತೀನಂದ್ರು, ನಾ ತಂಗಡೆ' ಅಂತ ಯರ್‍ರಾ ಬಿರ್‍ರಿ ಸುಳ್ಳು ಸುರಿಸಿದ್ದಾಳೆ. ಇನ್ನು ರಾಘವೇಂದ್ರ ಸಹ ಅಕ್ಕನ ಭಳಾಂಗು ಭಜನೆಯನ್ನೇ ಇನ್ನೊಂದು ಶೃತಿಯಲ್ಲಿ ಹಾಡಿ ಮುಗಿಸಿದ್ದಾನೆ.



ಆದರೆ, ಈ ಸೈಟಿನ ಫಲಾನುಭವಿಗಳಲ್ಲೊಬ್ಬನಾದ ಹೆಚ್.ಡಿ. ಮಂಜುನಾಥ್‌ನ ಹೆಂಡತಿ ಅರುಣಾಳ ಶಿಕ್ಷಣ ಸಂಸ್ಥೆಯಲ್ಲಿ ಅಸಿಸ್ಟೆಂಟ್ ಪ್ರೋಗ್ರಾಂ ಆಫೀಸರ್ ಆಗಿರುವಾಕೆ. ಇನ್ನೊಬ್ಬ ಮೈತ್ರಿ ಕಾಲೇಜಿನ ಕಾರ್ ಡ್ರೈವರ್. ಉಳಿಬ್ಬರೂ ಸಹ ಅರುಣಾ ಮಾಲೀಕತ್ವ ಸಂಸ್ಥೆಗಳಲ್ಲಿ ಕೆಲಸ ಮಾಡುವವರೆಂಬುದು ಖಚಿತ ವಿಚಾರ. ಈ ರೀತಿ ತನ್ನ ಸಂಸ್ಥೆಯ ನೌಕರರನ್ನು ಮುಂದಿಟ್ಟುಕೊಂಡೇ ಅರುಣಾ ಸೈಟು ನುಂಗಿರುವುದೂ ಸಹ ಯಾವುದೇ ಅನುಮಾನಗಳಿಲ್ಲದಂತೆ ಬಯಲಾಗಿದೆ.

ಅಷ್ಟಕ್ಕೂ ಹೌಸಿಂಗ್ ಬೋರ್ಡ್ ಮಾಹಿತಿ ಹಕ್ಕುಗಳಡಿಯಲ್ಲಿ ಕೊಟ್ಟ ಮಾಹಿತಿಯಲ್ಲೇ 3 ಸೈಟು ಪತ್ರಕರ್ತರ ಕೋಟಾ ಹಾಗೂ ಒಂದು ವಿವೇಚನಾ ಕೋಟಾದಡಿಯಲ್ಲಿ ಮಂಜೂರಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಆದರೆ ಅರುಣಾ ಮತ್ತು ರಾಘವೇಂದ್ರರೆಂಬ ಅಕ್ಕ ತಮ್ಮ ಅದಕ್ಕೆ ವಿರುದ್ಧವಾಗಿ ಒದರಾಡುತ್ತಿದ್ದಾರೆ.

ಸಮಾಧಾನದ ಅಂಶವೆಂದರೆ, ಶಿವಮೊಗ್ಗದ ಜನತೆಗೆ ಈ ಅಕ್ಕ-ತಮ್ಮನೂ ಸೇರಿದಂತೆ ಯಡಿಯೂರಪ್ಪನ ಇಡೀ ಫ್ಯಾಮಿಲಿ ಭೂಗಳ್ಳತನದ ಎಕ್ಸ್‌ಪರ್ಟ್‌ಗಳೆಂಬ ವಿಚಾರ ಮನದಟ್ಟಾಗಿದೆ!

ಯಡ್ಡಿ ಮಗ ರಾಘವೇಂದ್ರನೂ ಭೂಗಳ್ಳ

ವಿಜಯೇಂದ್ರ ಹಾಗೂ ರಾಘವೇಂದ್ರ ಮುಖ್ಯಮಂತ್ರಿಯ ಮಕ್ಕಳೆಂಬ ನೆರಳಿಲ್ಲದೆ ಹೋಗಿದ್ದರೆ ಮುನ್ಸಿಪಾಲ್ಟಿ ನೌಕರಿಗೂ ಅರ್ಹರಲ್ಲದ ಅವಿವೇಕಿಗಳು. ನೋಡಲು ಸುಬ್ಬರಂತೆ, ಅಮಾಯಕರಂತೆ ಕಾಣುವ ಈ ಸಹೋದರರು ಸರ್ಕಾರಿ ಭೂಮಿ ನುಂಗುವುದರಲ್ಲಿ ತಂದೆಗೆ ತಕ್ಕ ಮಕ್ಕಳು. ಹೀಗೆ ಹೊಡೆದುಕೊಂಡ ಸ್ವತ್ತುಗಳನ್ನು ತೆರಿಗೆಗಳಿಂದಲೂ ತಪ್ಪಿಸಿಕೊಂಡು ತಮ್ಮದಾಗಿಸಿಕೊಳ್ಳುವ ಕಲೆಯಲ್ಲೂ ಬಲು ನಿಷ್ಣಾತರು.

ಸದ್ಯ ಯಡಿಯೂರಪ್ಪನ ಎರಡನೇ ಸುಪುತ್ರ ಕಮ್ ಸಂಸದ ರಾಘವೇಂದ್ರನ 'ಕಲೆಗಾರಿಕೆ'ಯೊಂದು ಶಿವಮೊಗ್ಗದ ಭೂಮಿಕೆಯಲ್ಲಿ ಪ್ರದರ್ಶನಗೊಂಡಿದೆ. ಅದಕ್ಕೆ ವೇದಿಕೆ ರೆಡಿ ಮಾಡಿ ಅನುವು ಮಾಡಿಕೊಟ್ಟವರು ಶಿವಮೊಗ್ಗದ ವಕೀಲ ಬಿ.ವಿನೋದ್!

2006ರ ಫೆಬ್ರವರಿ 24 ರಂದು ರಾಘವೇಂದ್ರ ಶಿವಮೊಗ್ಗ ಬೈಪಾಸ್‌ನ ನೂರು ಅಡಿ ರಸ್ತೆಯ ಬಾಜಿನಲ್ಲೊಂದು ಜಮೀನು ಖರೀದಿ ವ್ಯವಹಾರ ನಡೆಸಿದ್ದ. ಊರಗಡೂರು ಎಂಬಲ್ಲಿರುವ 3.27 ಎಕರೆ ಜಮೀನನ್ನು ಸಮದ್ ಹಾಗೂ ರಫೀಕ್ ಎಂಬುವರಿಂದ ಹನ್ನೆರಡು ಲಕ್ಷದ ಹದಿನೆಂಟು ಸಾವಿರ ರೂಪಾಯಿಗೆ ರಾಘವೇಂದ್ರ ಖರೀದಿಸಿದ್ದ. ಇದಾದಬಳಿಕ ನಡೆದದ್ದು ಏಲಿನೇಷನ್ ಪಡೆದುಕೊಳ್ಳುವ ಕೆಲಸ. ಈ ಇಡೀ ಪ್ರಕ್ರಿಯೆ ನಡೆದ ವೇಗವಂತೂ ಅಚ್ಚರಿದಾಯಕವಾಗಿದೆ. ರಾಘವೇಂದ್ರ 5.2.07 ರಂದು ತಹಶೀಲ್ದಾರ್ ಕಚೇರಿಗೆ ಭೂಪರಿವರ್ತನೆಗೆಂದು ಅರ್ಜಿ ಗುಜರಾಯಿಸಿದ್ದ. 6.03.07 ರಂದು ಅನುಮತಿ ಸಿಕ್ಕಿಹೋಗಿತ್ತು. ಅಂದರೆ, ಕೇವಲ ಒಂದೇ ತಿಂಗಳಲ್ಲಿ ಭೂಪರಿವರ್ತನೆಯ ಸಕಲ ವಿಧಿಗಳೂ ಮುಗಿದುಹೋಗಿದ್ದವು!

ಸಾಮಾನ್ಯವಾಗಿ ಈ ಭೂಪರಿವರ್ತನೆಗೆ ಅನುಮತಿ ಸಿಗಲು ಕಡಿಮೆಯೆಂದರೂ ಆರು ತಿಂಗಳು ಹಿಡಿಯುತ್ತದೆ. ಸಾರ್ವಜನಿಕರಿಂದ ತಕರಾರು ಅರ್ಜಿ ಆಹ್ವಾನಿಸುವುದೂ ಸೇರಿದಂತೆ ಹಲವಾರು ವಿಧಿವಿಧಾನಗಳನ್ನು ಪೂರೈಸಲು ಅಷ್ಟು ಅವಧಿ ಬೇಕೆಬೇಕು ಅಂಥಾದ್ದರಲ್ಲಿ ಇಷ್ಟೊಂದು ಗಡಿಬಿಡಿಯಲ್ಲಿ ಭೂಪರಿವರ್ತನೆ ಮಾಡಿ ಮುಗಿಸಿದ್ದು ಹೇಗೆ? ಇದರ ಹಿಂದಿರುವ ಉದ್ದೇಶವೇನು? ಅಷ್ಟಕ್ಕೂ ರಾಘವೇಂದ್ರನಿಗಿಂತ ಮೊದಲೇ ಭೂಪರಿವರ್ತನೆಗೆ ಅರ್ಜಿ ಸಲ್ಲಿಸಿದವರನ್ನೂ ಮೂಲೆಗುಂಪು ಮಾಡಿದ್ದು ಯಾತಕ್ಕಾಗಿ?

ಇನ್ನೊಂದು ಮುಖ್ಯ ವಿಚಾರವೆಂದರೆ, 3.27 ಎಕರೆ ಭೂಮಿ ಭೂಪರಿವರ್ತನೆಯಾಗಿ ಸೈಟುಗಳಾಗಿ ವಿಂಗಡಣೆಯಾದ ಬಳಿಕ 1,58,994 ಚದರಡಿಯಾಗಿ ಬದಲಾಗಿದೆ. ಈ ಜಮೀನನ್ನು ರಾಘವೇಂದ್ರ ಖರೀದಿಸಿದ್ದು ಕೇವಲ ಹನ್ನೆರಡೂವರೆ ಲಕ್ಷಕ್ಕೆ. ಭೂಪರಿವರ್ತನೆಯ ನಂತರದ ಬೆಲೆ ಅಖಂಡ ಹನ್ನೆರಡು ಕೋಟಿ!

ಇಥಾ ಜಾಗವನ್ನು 19.11.09 ರಲ್ಲಿ ರಾಘವೇಂದ್ರ ತನ್ನ ತಮ್ಮ ವಿಜಯೇಂದ್ರನ ಹೆಸರಿಗೆ ದಾನಪತ್ರದ ಮೂಲಕ ವರ್ಗಾಯಿಸಿದ್ದಾನೆ. ಇದು ಖಂಡಿತವಾಗಿಯೂ ತೆರಿಗೆ ಹಣವನ್ನು ಯಾಮಾರಿಸುವ ತಂತ್ರ. ಈ ದಾನ ಪತ್ರಕ್ಕೆ ಸ್ಟ್ಯಾಂಪ್ ಡ್ಯೂಟಿ ಇರುವುದಿಲ್ಲ, ಇದರಿಂದಾಗಿಯೇ ರಾಘವೇಂದ್ರ ಏನಿಲ್ಲವೆಂದರೂ ಎಂಟತ್ತು ಲಕ್ಷದಷ್ಟು ಉಳಿಸಿದ್ದಾನೆ. ಇದು ಯಡ್ಡಿ ಮತ್ತವನ ಮಕ್ಕಳು ಕದ್ದ ಸ್ವತ್ತಲ್ಲೂ ಕಮಾಯಿ ನಡೆಸುವ ಪರಿ!

ಇಷ್ಟೆಲ್ಲಾ ಗುಮಾನಿಗಳ ಕೇಂದ್ರ ಬಿಂದುವಾಗಿರುವ ಈ ಸ್ವತ್ತಿನ ಬಗ್ಗೆ ತಲಾಷಿಗಿಳಿದರೆ ಮತ್ತೊಂದು ವಂಚನೆಯೂ ತೆರೆದುಕೊಳ್ಳುತ್ತದೆ. 2009 ರಲ್ಲಿ ರಾಘವೇಂದ್ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದನಲ್ಲಾ? ಆ ಸಂದರ್ಭದಲ್ಲಿ ಸಲ್ಲಿಸಿದ ಆಸ್ತಿ ವಿವರದಲ್ಲಿ ರಾಘವೇಂದ್ರ ಈ ಆಸ್ತಿಯ ಮೌಲ್ಯವನ್ನು ಕೇವಲ 1 ಕೋಟಿ ಅಂತ ನಮೂದಿಸಿದ್ದ. ಚುನಾವಣಾ ಆಯೋಗ ಚಿಕ್ಕದೊಂದು ತನಿಖೆ ನಡೆಸಿದರೂ ಮುಖ್ಯಮಂತ್ರಿಯ ಸುಪುತ್ರನ ಮಾನ ಗಟಾರ ಸೇರುವುದು ಗ್ಯಾರಂಟಿ.

ಈ ರೀತಿ ಶಿವಮೊಗ್ಗ ಸೀಮೆಯ ಸರ್ಕಾರಿ ಭೂಮಿಯನ್ನೆಲ್ಲಾ ಕಬ್ಜಾ ಮಾಡಿಕೊಳ್ಳುತ್ತಿರುವ ಯಡ್ಡಿ ಫ್ಯಾಮಿಲಿಗೆ ಇಡೀ ಆಡಳಿತ ಯಂತ್ರವೇ ಸಹಕರಿಸುತ್ತಿದೆ. ವಿರೋಧ ಪಕ್ಷಗಳೂ ಕೂಡಾ ಈ ಬಗ್ಗೆ ಮೌನವಹಿಸಿರುವುದಂತೂ ನಾಚಿಕೆಗೇಡಿನ ವಿಚಾರ.

ಯಡ್ಡಿ ಮಗನ ಮದುವೇಲಿ ಜಾತಿ ಸಂಚಿನ ಒಡ್ಡೋಲಗ



ಯಡಿಯೂರಪ್ಪ ಇಡೀ ಕರ್ನಾಟಕವನ್ನು ಇಂಚಿಂಚು ಮೇಯದೆ ಕುರ್ಚಿ ಬಿಟ್ಟಿಳಿಯುವ ಲಕ್ಷಣಗಳಿಲ್ಲ. ಕುರ್ಚಿಗಾಗಿ ಈ ಆಸಾಮಿ ಮಾಡಿದ 'ತ್ಯಾಗ'ಗಳ ಪಟ್ಟಿ ದೊಡ್ಡದಿದೆ. ಅದರಲ್ಲಿ ಮಾನ-ಮರ್ಯಾದೆಯೆಂಬುದು ಮೊದಲ ಸ್ಥಾನದಲ್ಲಿದೆ! ಹಾಗೆಯೇ ಯಡ್ಡಿ ಕುರ್ಚಿ ಉಳಿಸಿಕೊಳ್ಳುವುದಕ್ಕಾಗಿ ತುಳಿದ ಅನಾಹುತಗಳ ಹಾದಿಯಂತೂ ತೀರಾ ಆಘಾತಕಾರಿ. ಇದಕ್ಕಾಗಿ ಲಿಂಗಾಯತ ಸಮುದಾಯದ ಸ್ವಾಮಿಗಳ ಬಾಲ ಬಡಿದದ್ದು, ಮಾನವತಾವಾದಿ ಬಸವಣ್ಣನನ್ನು ಪದೇಪದೇ ಬಳಸಿಕೊಂಡು ಬಚಾವಾದದ್ದೆಲ್ಲಾ ಕರ್ನಾಟಕದ ಇತಿಹಾಸ ಎಂದೂ ಮರೆಯದ ಅಸಹ್ಯ ವೃತ್ತಾಂತ.

ಮಾಡಬಾರದ್ದನ್ನು ಮಾಡುತ್ತಲೇ ಅಮಾಯಕನಂತೆ ಪೋಸು ಕೊಡುವುದು, ಅದರ ವಿರುದ್ಧ ದನಿಯೆತ್ತಿದಾಗೆಲ್ಲ ಇಡೀ ಲಿಂಗಾಯತ ಸಮುದಾಯವೇ ತನ್ನ ಸಪೋರ್ಟಿಗಿದೆಯೆಂದು ಬೆದರಿಸುವುದು ಯಡಿಯೂರಪ್ಪನ ಹಳೇ ವರಸೆ. ಆದರೆ ವಾಸ್ತವವೇ ಬೇರೆಯದಿದೆ. ನೂರಾರು ಉಪಜಾತಿಗಳ ಕೊಂಬೆ ಕೋಟೆಗಳಿರುವ ಲಿಂಗಾಯತ ಸಮುದಾಯ ನಿಜಕ್ಕೂ ಯಡ್ಡಿ ಪರವಿಲ್ಲ. ಇಂತಹುದೊಂದು ಸತ್ಯ ಗೊತ್ತಿರುವ ಯಡ್ಡಿ ಹ್ಯಾಗಾದರೂ ಮಾಡಿ ಲಿಂಗಾಯತ ಪಂಗಡಗಳನ್ನೆಲ್ಲ ಒಲಿಸಿಕೊಳ್ಳಬೇಕೆಂಬ ಕಸರತ್ತು ನಡೆಸುತ್ತಿದ್ದಾರೆ. ಅದರ ಮೊದಲ ಹಂತವಾಗಿ ಪ್ರಬಲ ಪಂಚಮಸಾಲಿಗಳನ್ನು ಪಳಗಿಸಿಕೊಳ್ಳುವ ಸಂಚೊಂದು ಇತ್ತೀಚೆಗೆ ನಡೆದಿದೆ.


ಯಡಿಯೂರಪ್ಪನ ದಿವಂಗತ ಹೆಂಡತಿ ಮೈತ್ರಾದೇವಿಯ ತಂಗಿ ಮಗನ ಮದುವೆಯ ಮೂಲಕ ಆ ಸಂಚು ಸಾಕಾರಗೊಂಡಿದೆ. ಮೈತ್ರಾದೇವಿಯ ತಂಗಿ ಚಂದ್ರಪ್ರಭಾಳ ಮಗ ನಿಶಿತ್‌ಗೆ ಧಾರವಾಡ ಕುಂದಗೋಳದ ಬಿಜೆಪಿ ಶಾಸಕ ಎಸ್.ಐ. ಚಿಕ್ಕನಗೌಡನ ಮಗಳು ನಂದಾಳೊಂದಿಗೆ ಎಂಗೇಜ್‌ಮೆಂಟ್ ಮಾಡಿ ಮುಗಿಸಲಾಗಿದೆ. ಮೇಲ್ನೋಟಕ್ಕಿದು ಒಂದು ಮದುವೆ ಹಾಗೂ ನೆಂಟಸ್ಥನ ಮಾತ್ರವಾಗಿ ಕಾಣಿಸುತ್ತದೆ. ಆದರೆ ಇದರಾಳದಲ್ಲಿ ಯಡಿಯೂರಪ್ಪನ ಜಾತಿ ರಾಜಕೀಯವೇ ನಿರ್ಣಾಯಕವಾಗಿ ಕೆಲಸ ಮಾಡಿದೆ.

ಸದ್ಯ ಲಿಂಗಾಯತ ಸಮುದಾಯದಲ್ಲಿ ನೂರಾ ಇಪ್ಪತ್ತೆರಡು ಒಳಪಂಗಡಗಳಿವೆ. ಆರಂಭದಿಂದಲೂ ಯಡಿಯೂರಪ್ಪ ತನ್ನನ್ನು ತಾನು ಬಣಜಿಗ ಅಂತಲೇ ಬಿಂಬಿಸಿಕೊಳ್ಳುತ್ತಿದ್ದಾರೆ. ಬಹುತೇಕರು ಅದನ್ನೇ ನಂಬಿ ಕೂತಿರುವುದು ಸತ್ಯ. ಆದರೆ ಯಡ್ಡಿ ಗಾಣಿಗ ಪಂಗಡಕ್ಕೆ ಸೇರಿದಾತ. ಬೆಳ್ಳುಬ್ಬಿ, ಲಕ್ಷ್ಮಣ ಸವದಿ, ರಾಜಕೀಯ ಕಾರ್ಯದರ್ಶಿ ಪುಟ್ಟಸ್ವಾಮಿ ಮುಂತಾದವರೆಲ್ಲ ಗಾಣಿಗರು. ಸದಾ ಸೇಫ್ ಜೋನ್‌ನಲ್ಲಿರಬಯಸುವ ಯಡ್ಡಿ ಆ ಕಾರಣದಿಂದಲೇ ಅವರೆಲ್ಲರನ್ನು ಜೊತೆಗಿಟ್ಟುಕೊಂಡಿರುವುದು ವಾಸ್ತವ. ಈ ರೀತಿಯಾಗಿ ಏನೇ ತಿಪ್ಪರಲಾಗ ಹಾಕಿದರೂ ಒಂದಿಡೀ ಲಿಂಗಾಯತ ಸಮುದಾಯ ಯಡ್ಡಿ ಪರ ನಿಲ್ಲುತ್ತಿಲ್ಲ. ಸಂಖ್ಯೆಯಲ್ಲಿ ಪ್ರಬಲವಾಗಿರುವ ಪಂಚಮಸಾಲಿ ಪಂಗಡ ಕೂಡಾ ಸದ್ಯ ಯಡ್ಡಿಗೆ ವಿರುದ್ಧವಾಗಿಯೇ ಇದೆ.

ಹಾಗಂತ ಇದನ್ನು ನಿರ್ಲಕ್ಷಿಸಲು ಯಡಿಯೂರಪ್ಪನಿಗೆ ಧೈರ್ಯವಿಲ್ಲ. ಯಾಕೆಂದರೆ ಪಂಚಮಸಾಲಿಗಳ ಸಂಖ್ಯೆ ಎಪ್ಪತ್ತೈದು ಲಕ್ಷಕ್ಕೂ ಅಧಿಕವಿದೆ. ಇವರಲ್ಲಿ ಬಹುತೇಕರು ಕೃಷಿಯನ್ನೇ ನೆಚ್ಚಿಕೊಂಡಿರುವವರು. ಸದ್ಯ ಈ ಪಂಗಡದ ಹದಿನೇಳು ಮಂದಿ ಶಾಸಕರು ಬಿಜೆಪಿಯಲ್ಲಿದ್ದಾರೆ. ಅದರಲ್ಲಿ ಮುರುಗೇಶ್ ನಿರಾಣಿ, ಸಿಸಿ ಪಾಟೀಲ್ ಹಾಗೂ ಶಿವಣ್ಣಗಳಿಗೆ ಮಂತ್ರಿಗಿರಿಯ ಲಾಭ ಲಭಿಸಿದೆ. ಇದು ಕೂಡಾ ಜಯಮೃತ್ಯುಂಜಯ ಸ್ವಾಮಿಯ ಒತ್ತಾಯ ಮತ್ತು ಸಿದ್ಧಗಂಗಾ ಸ್ವಾಮಿಗಳ ಪ್ರಭಾವದ ಫಲ. ಅದರರ್ಥ ಯಡ್ಡಿ ತನ್ನ ಗಾಣಿಗ ಸಮುದಾಯಕ್ಕೇ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಸದಾ ಸೇಫಾಗಿರಲು ಯತ್ನಿಸುತ್ತಿದ್ದರು. ಆರಂಭದಲ್ಲಿ ಆತನಿಗೆ ನಿಜವಾಗಿಯೂ ಇಡೀ ಲಿಂಗಾಯತ ಸಮುದಾಯ ತನ್ನ ಪರವಿದೆ ಎಂಬ ಭಯಂಕರ ಭ್ರಮೆಯೂ ಇತ್ತು. ಒಟ್ಟಾರೆ ಹೇಳಬೇಕೆಂದರೆ ಯಡ್ಡಿ ಲಿಂಗಾಯತ ಸಮುದಾಯದಲ್ಲೂ ತನ್ನ ಪಂಗಡವನ್ನು ಮಾತ್ರ ಪೊರೆಯುವ, ಲಾಭ ನಿರೀಕ್ಷಿಸುವ ಪಕ್ಕಾ ಜಾತಿವಾದಿ.

ಆದರೆ ಇತ್ತೀಚಿನ ವಿದ್ಯಮಾನಗಳಲ್ಲಿ ಲಿಂಗಾಯತ ಸಮುದಾಯದ ಬಹುತೇಕ ಪಂಗಡಗಳು ತನ್ನ ಜೊತೆಗಿಲ್ಲ ಎಂಬ ವಾಸ್ತವ ಯಡ್ಡಿಗೆ ಸ್ಪಷ್ಟವಾಗಿ ಅರ್ಥವಾದಂತಿದೆ. ಈ ಬಗ್ಗೆ ಭಟ್ಟಂಗಿ ಪಡೆಯೊಂದಿಗೆ ದೀರ್ಘ ಸಮಾಲೋಚನೆ ನಡೆಸಿದ ಬಳಿಕ ಏನಾದರೂ ಮಾಡಿ ಲಿಂಗಾಯತ ಪಂಗಡಗಳನ್ನೆಲ್ಲ ಪಟ್ಟಂಪೂರಾ ಸೆಳೆದುಕೊಳ್ಳಬೇಕೆಂಬ ನಿರ್ಧಾರ ಬಲಗೊಂಡಿದೆ. ಈ ಹಿನ್ನೆಲೆಯಲ್ಲಿ ಪ್ರಬಲವಾಗಿರುವ ಪಂಚಮಸಾಲಿಗಳನ್ನೇ ಮೊದಲು ಪಳಗಿಸಿಕೊಳ್ಳಬೇಕೆಂಬ ಸ್ಕೆಚ್ಚು ಸಹ ರೆಡಿಯಾಗಿದೆ.

ಯಡ್ಡಿಯ ಮೈಂಡು ಜಾತಿವಿಚಾರ ಬಂದಾಗ ತೀರಾ ಕ್ರಿಮಿನಲ್ ರೂಪ ತಳೆದು ಕೆಲಸ ಮಾಡುತ್ತೆ. ಪಂಚಮಸಾಲಿ



ಮಠಗಳಿಗೆ ದೇಣಿಗೆ ನೀಡುವುದು, ಆ ಪಂಗಡಕ್ಕೆ ಏನಾದರೊಂದು ಅನುದಾನ ನೀಡಿ ಓಲೈಸಿಕೊಳ್ಳುವುದು-ಇವೆಲ್ಲದರಿಂದ ಕಾಯಂ ನಿಷ್ಠೆ ಕಾಯ್ದುಕೊಳ್ಳುವುದು ಕಷ್ಟ. ವಿಚಾರ ಹೀಗಿರುವಾಗ ಪಂಚಮಸಾಲಿಗಳೊಂದಿಗೆ ಪರ್ಮನೆಂಟಾಗಿ ನೆಂಟಸ್ತನ ಬೆಳೆಸಿದರೆ ಹೆಂಗೆ? ಅಂತೊಂದು ವಿಚಾರ ಹೊಳೆದದ್ದೇ ಯಡ್ಡಿ ತನ್ನ ಅವಿವೇಕಿ ಪುತ್ರ ಕಮ್ ಸಂಸದ ರಾಘವೇಂದ್ರನಿಗೆ ಈ ಕೆಲಸ ಒಪ್ಪಿಸಿದ್ದಾನೆ.

ಹೀಗೆ ತಂದೆಯ ಆಣತಿ ಹೊತ್ತ ರಾಘವೇಂದ್ರ ಶತಪ್ರಯತ್ನ ನಡೆಸಿ ಪಂಚಮಸಾಲಿ ಪಂಗಡದ ಎಸ್.ಐ. ಚಿಕ್ಕನಗೌಡ್ರನೊಂದಿಗೆ ಸಂಬಂಧ ಕುದುರಿಸಿದ. ತನ್ನ ಚಿಕ್ಕಮ್ಮ ಚಂದ್ರಪ್ರಭಾಳ ಮಗ ನಿಶಿತ್‌ಗೂ ಚಿಕ್ಕನಗೌಡನ ಮಗಳು ನಂದಾಳಿಗೂ ಮದುವೆ ಫಿಕ್ಸ್ ಆಗಿ ಮೊನ್ನೆ ನಿಶ್ಚಿತಾರ್ಥವೂ ಅದ್ದೂರಿಯಾಗಿ ನಡೆದುಹೋಗಿದೆ. ಗಾಣಿಗ ಯಡ್ಡಿಯ ಪಂಚಮಸಾಲಿಗಳೊಂದಿಗಿನ ನೆಂಟಸ್ತನವೂ ಪಕ್ಕಾ ಆಗಿದೆ.

ಮೈತ್ರಾದೇವಿಯ ತಂಗಿ ಮಗ ನಿಶಿತ್ ವರಸೆಯಲ್ಲಿ ಯಡಿಯೂರಪ್ಪನಿಗೆ ಮಗನಾಗುತ್ತಾನೆ. ಹಾಗೆ ನೋಡಹೋದರೆ ಮೈತ್ರಾದೇವಿ ಕೂಡಾ ಪಂಚಮಸಾಲಿ ಪಂಗಡದವರು. 1955 ಸುಮಾರಲ್ಲಿ ಭೂಕನಕೆರೆಯ ಯಡ್ಡಿ ಶಿವಮೊಗ್ಗೆಗೆ ವಕ್ಕರಿಸಿದರಲ್ಲಾ? ಆ ಸಂದರ್ಭದಲ್ಲಿವನಿಗೆ ರೈಸ್‌ಮಿಲ್‌ನಲ್ಲಿ ಕಾರಕೂನಿಕೆಯ ಕೆಲಸ ಕೊಟ್ಟವರು. ಪಂಚಮಸಾಲಿ ಜನಾಂಗದ ಮಾಲೀಕ. ಈತನ ಮಗಳು ಮೈತ್ರಾದೇವಿ ಕೊನೆಗೆ ಕೆಲಸ ಕೊಟ್ಟ ಧಣಿಯ ಮಗಳನ್ನೇ ಯಡ್ಡಿ ಮದುವೆಯಾದದ್ದು, ರೈಸ್‌ಮಿಲ್ಲನ್ನೇ ತನ್ನ ಕೈವಶ ಮಾಡಿಕೊಂಡಿದ್ದೆಲ್ಲ ಈಗ ಹಳೆಯ ವಿಚಾರ.


ಯಡಿಯೂರಪ್ಪನ ಹಳೇ ಧಣಿಯ ಮೂರನೇ ಮಗಳು ಈ ಚಂದ್ರಪ್ರಭಾ. ಈಕೆಯ ಗಂಡ ಹೊನ್ನಪ್ಪ ಪಕ್ಕಾ ವೇಸ್ಟ್‌ಬಾಡಿ. ಈ ದಂಪತಿಯ ಮಗ ನಿಶಿತ್. ಈತ ಯಡಿಯೂರಪ್ಪ ಶಿವಮೊಗ್ಗದಲ್ಲಿ ನಡೆಸುತ್ತಿರುವ ಮೈತ್ರಾದೇವಿ ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡುತ್ತಿದ್ದಾನೆ. ಈತನನ್ನೇ ಮುಂದಿಟ್ಟುಕೊಂಡು ಇದೀಗ ಪಂಚಮಸಾಲಿಗಳನ್ನು ಪಳಗಿಸಿಕೊಳ್ಳುವ ಆಟಕ್ಕೆ ಚಾಲನೆ ಸಿಕ್ಕಿದೆ. ಅತ್ತ ಚಿಕ್ಕನಗೌಡ್ರಿಗೆ ಸ್ವಂತ ವರ್ಚಸ್ಸೆಂಬುದು ಹೀನಾಯವಾಗಿ ಕರಗಿಹೋಗಿದೆ. ಅಂಥಾ ಸ್ಥಿತಿಯಲ್ಲಿರುವ ಆತನಿಗೆ ಮುಖ್ಯಮಂತ್ರಿಯೊಂದಿಗಿನ ನೆಂಟಸ್ತನ ಮಹಾನ್ ಸಾಧನೆಯೆಂಬಂತೆ ಕಾಣಿಸುತ್ತಿದೆ. ಇತ್ತ ನಿಶಿತ್‌ನ ಅಪ್ಪ ಯಡ್ಡಿಯ ಬಾಮೈದ ಹೊನ್ನಪ್ಪ ಮಗನಿಗೆ ಮದುವೆ ಮಾಡಿದರೂ-ಮಾರಿದರೂ ಕಾಸು ಅಂತೊಂದು ಬಂದರೆ ಫಿಲ್ಲಾಗುವ ಜಾಯಮಾನದವನು. ಇದೆಲ್ಲದರಿಂದಾಗಿ ಮದುವೆಯ ಹೆಸರಲ್ಲಿ ಅಸಹ್ಯದ ಜಾತಿರಾಜಕಾರಣ ನಿರ್ವಿಘ್ನವಾಗಿ ನೆರವೇರುತ್ತಿದೆ.

ಭ್ರಮೆ ಹಾಗೂ ಅವಿವೇಕದ ಒಟ್ಟಾರೆ ಮೊತ್ತದಂತಿರುವ ಯಡ್ಡಿ ಇನ್ಮುಂದೆ 'ಇಡೀ ಲಿಂಗಾಯತ ಸಮುದಾಯ ನನ್ನ ಸಪೋರ್ಟಿಗಿದೆ' ಅಂತ ಇನ್ನಷ್ಟು ಎದೆ ಉಬ್ಬಿಸಿಕೊಂಡು ಹೇಳುವುದು ಖಚಿತ. ತನ್ನ ಸಂಬಂಧಿಕ ಹುಡುಗ ಹುಡುಗೀರನ್ನು ಲಿಂಗಾಯತ ಸಮುದಾಯದ ಬೇರೆಬೇರೆ ಪಂಗಡಗಳಿಗೆ ತಗುಲಿಸಿ ಎಲ್ಲರನ್ನೂ ಒಳಗೊಳ್ಳುವ ಡಿಫರೆಂಟ್ ಐಡಿಯಾ ಆತನ ತಲೆಯಲ್ಲಿ ಗಿರಕಿ ಹೊಡೆಯುತ್ತಿದ್ದರೂ ಆಶ್ಚರ್ಯವಿಲ್ಲ!

ಜಾತಿಯನ್ನು ತೀರಾ ಅಸಹ್ಯಕಾರಿಯಾಗಿ ಬಳಸಿಕೊಂಡ ಕೀರ್ತಿ ಖಂಡಿತವಾಗಿಯೂ ಯಡ್ಡಿಗೇ ಮೀಸಲು. ತೀರಾ ಮದುವೆಯನ್ನೂ ಕೂಡಾ ಜಾತಿ ಲೆಕ್ಕಾಚಾರದೊಂದಿಗೇ ಮಾಡಿ ಮುಗಿಸುತ್ತಿರುವುದು ಮಾತ್ರ ಯಡಿಯೂರಪ್ಪನ ಕಾಯಿಲೆ ಉಲ್ಬಣಿಸಿರುವುದರ ಸಂಕೇತ. ಸದ್ಯ ಇದಕ್ಕೆಲ್ಲ ಲಿಂಗಾಯತ ಪಂಗಡಗಳ ಪ್ರಜ್ಞಾವಂತರೇ ಸಕಾಲದಲ್ಲಿ ಮದ್ದು ಅರೆಯಬೇಕಿದೆ.

• ಹುಬ್ಬಳ್ಳಿಯಾಂವ

ಯಡ್ಡಿ ಬಾಮೈದ ಹೊನ್ನಪ್ಪನ ಡೀಲು-ಐಲು!



ಪುಗಸಟ್ಟೆ ಕೂಳಿನಲ್ಲೇ ವರ್ಷಾಂತರಗಳ ಕಾಲ ಪಾಪಪ್ರಜ್ಞೆಯ ಲವಲೇಶವೂ ಇಲ್ಲದೆ ಬದುಕಬಲ್ಲ, ದುಡಿಮೆಯೇ ಇಲ್ಲದಿದ್ದರೂ ಹೈಫೈ ಜೀವನ ನಡೆಸಬಲ್ಲ ಛಾತಿಯಿರುವಾತ ಹೊನ್ನಪ್ಪ. ಈತ ಯಡ್ಡಿಯ ದಿವಂಗತ ಹೆಂಡತಿ ಮೈತ್ರಾದೇವಿಯ ತಂಗಿ ಚಂದ್ರಪ್ರಭಾಳ ಗಂಡ.

ಶಿವಮೊಗ್ಗ ಆಸುಪಾಸಿನಲ್ಲೀತ ಸೋಂಬೇರಿ ಹೊನ್ನಪ್ಪ ಅಂತಲೇ ಕುಖ್ಯಾತಿ ಪಡೆದಿದ್ದ. ನಿಖರವಾಗಿ ಹೇಳಬೇಕೆಂದರೆ ತನ್ನ ಜೀವಿತದ ಬಹುಪಾಲು ಪರರ ಕೂಳಲ್ಲೇ ಕಳೆದಿದ್ದಾನೆ. ಇಂಥಾ ಹೊನ್ನಪ್ಪ ಈಗ ಕೋಟಿಗಳಿಗೆ ತೂಗುತ್ತಿದ್ದಾನೆ. ಶಿವಮೊಗ್ಗದ ಮಲದಘಟ್ಟದಲ್ಲೊಂದು ಬೃಹತ್ ಬಂಗಲೆ ಕಟ್ಟಿ ಹಾಯಾಗಿ ಜೀವಿಸುತ್ತಿದ್ದಾನೆ. ಅಂದಹಾಗೆ ಈತ ಈ ರೀತಿ ದಿಢೀರ್ ಅಭಿವೃದ್ಧಿ ಹೊಂದಿರುವುದು ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕ. ಮಾನ್ಯ ಮುಖ್ಯಮಂತ್ರಿಗಳ 'ಕುಟುಂಬ ಕೋಟಾ'ದ ಪರಿಣಾಮವಿದು!

ಶಿವಮೊಗ್ಗ ಸೀಮೆಯಲ್ಲಿ ಯಾರನ್ನೇ ಕೇಳಿದರೂ ಹೊನ್ನಪ್ಪ ಮಾಡುವ ಕಸುಬಾವುದು ಎಂಬ ನಿಖರ ಮಾಹಿತಿ ಸಿಗುವುದಿಲ್ಲ. ಅಷ್ಟಕ್ಕೂ ಮೈಬಗ್ಗಿಸಿ ದುಡಿಯುವುದು ಈತನ ಜಾಯಮಾನವೂ ಅಲ್ಲ. ಕೆಲಕಾಲ ಸಮತಾ ಪಾರ್ಟಿಯ ಜಿಲ್ಲಾಧ್ಯಕ್ಷ ಅಂತ ಬೀಗುತ್ತಾ ಶಿವಮೊಗ್ಗದ ತುಂಬಾ ಅಂಡಲೆದಿದ್ದ. ಸದರಿ ಪಕ್ಷದ ಹೆಸರಿಂದ ಖರ್ಚಿಗೊಂದಿಷ್ಟು ಕಾಸು ಗಿಟ್ಟಿಸಿಕೊಂಡಿದ್ದೇ ಈತ ಮಾಡಿದ ಮಹಾನ್ ಕೆಲಸ.

ಆದರೆ ಯಡಿಯೂರಪ್ಪ ಮುಖ್ಯಮಂತ್ರಿಯಾದದ್ದೇ ಹೊನ್ನಪ್ಪನ ನಸೀಬು ಏಕಾಏಕಿ ಬದಲಾಗಿಹೋಯ್ತು. ಇದ್ದಕ್ಕಿದ್ದಂತೆ ಬೆಂಗಳೂರಿಗೆ ಹೋಗಿ ಅಲ್ಲೇ ಠಿಕಾಣಿ ಹೂಡಿ ಯಡ್ಡಿ ಹೆಸರಲ್ಲೇ ಬೇಕಾದಷ್ಟು ಕಾಸು ಮಾಡಿಕೊಂಡ. ಈಗೊಂದು ಎರಡ್ಮೂರು ವರ್ಷದ ಹಿಂದೆ ಶೆಡ್ಡಿನಂಥಾ ಮನೆಯಲ್ಲಿದ್ದ ಹೊನ್ನಪ್ಪ ಅರಮನೆಯಂಥ ಬಂಗಲೆ ಕಟ್ಟಿಸಿದ್ದಾನೆಂದರೆ ಯಾವ ರೀತಿ ಮುಂಡಾಯಿಸಿರಬಹುದೋ ಯೋಚಿಸಿ.

ಇದೀಗ ಮಲದಘಟ್ಟದ ಬಂಗಲೆಯಲ್ಲಿ ವಿರಾಜಮಾನನಾಗಿರುವ ಹೊನ್ನಪ್ಪನದ್ದು ಹೈಟೆಕ್ ವ್ಯವಹಾರ. ಟ್ರಾನ್ಸ್‌ಫರ್, ಸರ್ಟಿಫಿಕೇಟ್ ಅಂತೆಲ್ಲ ಯಾರ್ಯಾರನ್ನೋ ಯಾಮಾರಿಸಿ ಲಪಟಾಯಿಸುವ ಕಸುಬು ಆತನ ಕಡೆಯಿಂದ ಅವ್ಯಾಹತವಾಗಿ ನಡೆಯುತ್ತಿದೆ. ಮುಖ್ಯಮಂತ್ರಿಯ ಭಾಮೈದನೆಂಬ ಕಾರಣಕ್ಕೆ ಸರ್ಕಾರಿ ಅಧಿಕಾರಿಗಳೂ ಈತನಿಗೆ ಹೆದರುವ ಸ್ಥಿತಿ ತಲುಪಿದ್ದಾರೆ. ಆದುದರಿಂದಲೇ ಹೊನ್ನಪ್ಪನ ಹಾರಾಟವೀಗ ವಿಪರೀತವಾಗಿದೆ.

ಆದರೆ ಯಡ್ಡಿ ಮಾತ್ರ ತನ್ನ ಭಾಮೈದನ ಲೀಲೆಗಳನ್ನೆಲ್ಲ ಕಂಡೂ ಕಾಣದಂತೆ ತೆಪ್ಪಗಿದ್ದಾರೆ. ಅದರ ಬಾಬತ್ತೆಂಬಂತೆ ಹೊನ್ನಪ್ಪ ಯಡಿಯೂರಪ್ಪನ ಜಾತಿ ರಾಜಕಾರಣದ ತೆವಲಿಗೆ ತನ್ನ ಸ್ವಂತ ಮಗನನ್ನೇ ಅಡ ಇಟ್ಟಿದ್ದಾನೆ.

- ಸದ್ಯ ಈ ಭಾಮೈದರ ನಡುವೆ ಯಾವ ವ್ಯತ್ಯಾಸಗಳೂ ಕಾಣಿಸುತ್ತಿಲ್ಲ!

ಪಂಚಮಸಾಲಿಗಳೇನು ಮೂರ್ಖರೇ?

ಪಂಚಮಸಾಲಿ ಚಿಕ್ಕನಗೌಡ್ರನೊಂದಿಗೆ ನೆಂಟಸ್ತನ ಕುದುರಿಸಿಕೊಂಡಿದ್ದರಿಂದ ಇಡೀ ಪಂಗಡವೇ ತನ್ನ ಬೆನ್ನಿಗಿದೆಯೆಂಬಂತೆ ಯಡ್ಡಿ ಖುಷಿಯಾದಂತಿದೆ. ಆದರೆ ಇದೂ ಕೂಡಾ ಆತನ ಭ್ರಮೆಯೆಂಬುದರಲ್ಲಿ ಸಂದೇಹವಿಲ್ಲ. ಯಾಕೆಂದರೆ ಪಂಚಮಸಾಲಿಗಳು ಯಡ್ಡಿಯ ಜಾತಿ ರಾಜಕೀಯದ ಹುನ್ನಾರಗಳನ್ನು ಅರಿಯದಷ್ಟು ಮೂರ್ಖರಲ್ಲ.

ಯಡ್ಡಿಯ ಅವಿವೇಕ ಯಾವ ರೀತಿಯಿದೆಯೋ ನೋಡಿ? ಹೇಳಿಕೇಳಿ ಈತ ಸಂಬಂಧ ಕುದುರಿಸಿಕೊಂಡಿರುವ ಚಿಕ್ಕನಗೌಡ್ರ ಸವಕಲು ಆಸಾಮಿ. ಈತ ಇಡೀ ಪಂಚಮಸಾಲಿ ಪಂಗಡವನ್ನು ಪೂರ್ತಿಯಾಗಿ ಸೆಳೆದುಕೊಳ್ಳುವಂಥಾ ವರ್ಚಸ್ಸು ಉಳಿಸಿಕೊಂಡಿಲ್ಲ. ಅಷ್ಟಕ್ಕೂ ಆ ಪಂಗಡ ಈತನನ್ನು ನಾಯಕನೆಂದು ಒಪ್ಪಿಕೊಂಡೂ ಇಲ್ಲ. ಇಂಥವನೊಂದಿಗೆ ನೆಂಟಸ್ತನ ಮಾಡಿಕೊಂಡು ಪಂಚಮಸಾಲಿ ಪಂಗಡವನ್ನೇ ಪಳಗಿಸಿಕೊಂಡ ಖುಷಿಯಲ್ಲಿರುವ ಯಡಿಯೂರಪ್ಪನ ಮೂರ್ಖತನಕ್ಕೆ ಏನನ್ನಬೇಕೋ ತಿಳಿಯುತ್ತಿಲ್ಲ.

ಪಂಚಮಸಾಲಿ ಪಂಗಡದ ಬಗ್ಗೆ ಹೇಳುವುದಾದರೆ ಇದು ರಾಜಕೀಯದ ವಿಚಾರದಲ್ಲಿ ಕಡೆಗಣಿಸಲ್ಪಟ್ಟಿದೆ. ಅದಕ್ಕೆ ಪಂಚಮಸಾಲಿ ಪೀಠದ ಸ್ವಾಮಿಗಳು ರಾಜಕೀಯದಿಂದ ದೂರವುಳಿದಿರುವುದೂ ಪ್ರಮುಖ ಕಾರಣ. ಈ ಸಮುದಾಯದಲ್ಲಿ ಸಹಜವಾಗಿಯೇ ರಾಜಕೀಯ ಅಧಿಕಾರದ ತಹತಹವಿದೆ. ಆದರೆ ಅದಕ್ಕೊಂದು ಸೂಕ್ತ ನಾಯಕತ್ವದ ಕೊರತೆಯಿದೆಯಷ್ಟೆ. ಕಾಂಗ್ರೆಸ್ ಮಂದಿಯು ತಲೆ ನೆಟ್ಟಗಿದ್ದಿದ್ದರೆ ಈ ಪಂಗಡ ಎಂದೋ ಆ ಪಕ್ಷದ ಬೆಂಬಲಕ್ಕೆ ನಿಂತಿರುತ್ತಿತ್ತು. ಕಾಂಗ್ರೆಸ್‌ನ ಅವಿವೇಕದಿಂದಾಗಿಯೇ ಈ ಪಂಗಡದ ಎದೆ ಮೇಲೆ ಯಡ್ಡಿಯ ಆಟಕ್ಕೆ ಚಾಲನೆ ಸಿಕ್ಕಿದೆ.

ಆದರೆ ಬಹುತೇಕ ಪಂಚಮಸಾಲಿಗಳು ಯಡ್ಡಿಯೂರಪ್ಪನ ನಾಯಕತ್ವವನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ. ಇದು ವಾಸ್ತವ.

ಯಡ್ಡಿ ಜಾಹೀರಾತು ಹಾಕಲ್ಲ ಅಂದ ಹಿಂದೂ ಪತ್ರಿಕೆ



'ಧರ್ಮಸ್ಥಳಕ್ಕೆ ಬಂದು ಆಣೆ ಹಾಕ್ತೀಯಾ' ಎನ್ನುವ ಯಡಿಯೂರಪ್ಪನ ಚಿಲ್ಲರೆ ಸವಾಲಿನ ಜಾಹೀರಾತನ್ನು ಪ್ರಕಟಿಸಲು 'ದಿ ಹಿಂದೂ' ಪತ್ರಿಕೆ ನಿರಾಕರಿಸಿದ ವಿಚಾರ ನಿಮಗೆ ತಿಳಿದಿದೆಯಾ?

ಕೇರಳದ ಮಸಾಜ್ ಸೆಂಟರ್ ಒಂದರಿಂದ ಯಡ್ಡಿ ರೆಡಿ ಮಾಡಿ ಕಳಿಸಿದ 'ಧರ್ಮಸ್ಥಳ ಮಂಜುನಾಥನ ಮಹಾತ್ಮೆ' ಯ ಆಣೆ ಪ್ರಮಾಣದ ಜಾಹೀರಾತು ನಾಡಿನ ಕನ್ನಡ-ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಪ್ರಕಟವಾಯಿತಲ್ಲ, ಇವರೆಲ್ಲಾ 'ಇಂದೆನಗೆ ಆಹಾರ ಸಿಕ್ಕಿತೆಂದು' ಜಾಹಿರಾತು ಹೇಗೆ ಬಂತೋ ಹಾಗೆ As is where is ಅನ್ನುವಂತೆ ಮುಖಪುಟಗಳಲ್ಲೇ ಪ್ರಕಟಿಸಿ ತಲಾ ನಾಲ್ಕರಿಂದ ಎಂಟು ಲಕ್ಷದ ವರೆಗೂ ದುಡ್ಡು ತೆಗೆದುಕೊಂಡರು. ಯಡ್ಡಿಯ ಈ ಹಲ್ಕಾ ಕೆಲಸಕ್ಕೆ ರಾಜ್ಯದ ಜನರಿಂದ 80 ಲಕ್ಷ ರೂ. ತೆರಿಗೆ ಹಣ ಪೋಲಾಗಿದೆ.

ಯಡ್ಡಿ ಭಂಟರು ಅದೇ ಜಾಹೀರಾತನ್ನು ತಗೊಂಡು ಬೆಂಗಳೂರಿನ ಹಿಂದೂ ಪತ್ರಿಕಾ ಕಚೇರಿಗೂ ಹೋದರು. ಆದರೆ ಜಾಹೀರಾತನ್ನು ಓದಿ ನೋಡಿದ 'ಹಿಂದೂ' ನವರು 'ನಾವಿದನ್ನು ಹಾಕಲ್ಲ, ನಮಗೆ ನಿಮ್ಮ ಜಾಹೀರಾತು ಬೇಡ, ದುಡ್ಡೂ ಬೇಡ' ಎಂದು ಆಚೆಗೆ ಅಟ್ಟಿದ್ದಾರೆ.

ಈ ಛೀಮಾರಿ ಬರೀ ಯಡ್ಡಿಗೆ ಹಾಕಿದ್ದು ಮಾತ್ರವಲ್ಲ ಅಲ್ಲವೇ?

ಜನಶ್ರೀ ಮಾರಾಟ....! ರಂಗ ಹಾರಾಟ...!! ಸಂಕೇಶ್ವರ ಹೊಸ ಹೋರಾಟ...!!! ಮತ್ತು ಅನೇಕರ ಅಲೆದಾಟ


Media ಮಾತು

ಕನ್ನಡ ಮೀಡಿಯಾ ಜಗತ್ತಿನಲ್ಲಿ ಸದನ್ನಾಗಿ ಮತ್ತೆ ಬಿರುಸಿನ ಚಟುವಟಿಕೆಗಳು ಕಾಣಿಸಿಕೊಳ್ಳುತ್ತಿದೆ. ಪತ್ರಕರ್ತರನೇಕರು ತಾವು ಈಗಿರುವ ನೆಲೆ ಬಿಟ್ಟು ಹೊಸ ಕೆಲಸ ಹುಡುಕಿಕೊಂಡು ಹೊರಡುತ್ತಿದ್ದಾರೆ. ಅದೇರೀತಿ ಪತ್ರಿಕೆ-ಟಿವಿ ಸಂಸ್ಥೆಯ ಮಾಲೀಕರುಗಳು ಹೊಸ ಸಾಹಸದ ಕನಸು, ಯಶಸ್ಸು ಸಿಗಲಿಲ್ಲವೆಂಬ ಹಳೇ ವ್ಯಥೆಯೊಂದಿಗೆ ಮಗ್ಗಲು ಬದಲಾಯಿಸುತ್ತಿದ್ದಾರೆ.

ಜನಶ್ರೀ ಅರ್ಧ ಮಾರಾಟಕ್ಕೆ

ಬೆಂಗಳೂರಿನ ಕೋರಮಂಗಲದ ಜನಶ್ರೀ ಟಿವಿ ಚಾನೆಲ್‌ನಿಂದ ಕೇಳಿಬರುತ್ತಿರುವ ಹೊಸ ಸುದ್ದಿ ಏನೆಂದರೆ ಸಂಸ್ಥೆಯ ಶೇ.60ರಷ್ಟು ಷೇರುಗಳನ್ನು ಮಾರಾಟ ಮಾಡಲು ರೆಡ್ಡಿಗಳು ಹೊರಟಿದ್ದಾರೆಂಬುದು ಸದ್ಯಕ್ಕೆ ಗುಜರಾತ್ ಮೂಲದ ಮೀಡಿಯಾ ಗ್ರೂಪ್ ಒಂದು ಜನಶ್ರೀಯ ಅರ್ಧ ಮಾಲೀಕತ್ವವನ್ನು ಖರೀದಿಸಲು ಮುಂದಾಗಿದೆ. ಹಾಗೆ ನೋಡಿದರೆ ಜನಶ್ರೀ ಶುರುವಾಗಿ ಈಗಿನ್ನೂ ಒಂದು ವರ್ಷವೂ ಪೂರ್ತಿಯಾಗಿಲ್ಲ, ಚಾನೆಲ್‌ನ ಕಾರ್ಯಕ್ರಮಗಳೂ ಒಕೆ ಅನ್ನುವಂತೆಯೇ ಇದೆ. ಒಂದಷ್ಟು ಹೊಸ ಪ್ರಯೋಗಗಳೂ ಅಲ್ಲಿ ನಡೆದಿವೆ.

ಆದರೆ ಮಾರ್ಕೆಟ್ ರಿಯಾಲಿಟಿಗಳೇ ಬೇರೆ. ಪ್ರೋಗ್ರಾಮುಗಳ ಗುಣಮಟ್ಟ ಎಷ್ಟೇ ಚೆನ್ನಾಗಿದ್ದರೂ ಜಾಹೀರಾತು ಆದಾಯ ನಿರೀಕ್ಷಿಸಿದಷ್ಟು ಹುಟ್ಟುವುದಿಲ್ಲ, ಜನಶ್ರೀ ತರದ ಒಂದು ಸುಸಜ್ಜಿತ ಚಾನೆಲ್ ನಡೆಸಬೇಕೆಂದರೆ ತಿಂಗಳಿಗೆ ಮಿನಿಮಂ ಎರಡು ಕೋಟಿ ರೂಪಾಯಿ ಖರ್ಚಾಗುತ್ತದೆ. ತಿಂಗಳಿಗೆ ಅಷ್ಟು ಜಾಹೀರಾತು ಆದಾಯ ಬರದೇ ಹೋದರೆ ಚಾನೆಲ್ ಮಾಲೀಕನ ಜೇಬಿಗೆ ತೂತು ಬಿತ್ತು ಎಂತಲೇ ಅರ್ಥ. ಇವತ್ತಿನ ಲೆಕ್ಕಾಚಾರದಲ್ಲಿ ಹೇಳಬೇಕೆಂದರೆ ಜನಶ್ರೀಗೆ Break Even ತಲುಪಲು ಕನಿಷ್ಠ ನಾಲ್ಕು ವರ್ಷ ಬೇಕು. ಅಂದರೆ ಮುಂದಿನ ನಾಲ್ಕು ವರ್ಷದಲ್ಲಿ ರೆಡ್ಡಿಗಳು ಒಂದು ನೂರು ಕೋಟಿ ರೂ.ಗಳನ್ನು ಚಾನೆಲ್ ಅನ್ನು ಜೀವಂತವಾಗಿಡಲು ಎತ್ತಿಡಬೇಕಾಗುತ್ತದೆ.



ಆದರೆ ವಾಸ್ತವ ಏನು ಗೊತ್ತೇ? ರೆಡ್ಡಿಗಳ ಹತ್ತಿರ ಈಗ ಅಷ್ಟು ಹಣ ಇಲ್ಲ, ಇಲ್ಲ ಅಂದರೆ ಅವರ ಬಳಿ ನೂರು ಕೋಟಿ ರೂ. ಇಲ್ಲವೇ ಇಲ್ಲ ಅಂತಲ್ಲ, ಬದಲಾಗಿ ನಿರುತ್ಪಾದಕ ಬಾಬ್ತಿನ ಮೇಲೆ ನೂರು ಕೋಟಿ ಸುರಿಯುವ ಉಮೇದು ಅವರಿಗಿಲ್ಲ ಅಷ್ಟೆ. ರೆಡ್ಡಿಗಳಿಗೆ ಈಗ ಮೊದಲಿನಂತೆ ಗಣಿ ದುಡ್ಡು ಹರಿದುಬರುತ್ತಿಲ್ಲ, ಒಂದು ಕಡೆ ಸಿಬಿಐ ತನಿಖೆ, ಮತ್ತೊಂದೆಡೆ ಇನ್‌ಕಂ ಟ್ಯಾಕ್ಸ್‌ನವರ ವಿಚಾರಣೆ, ಮಗದೊಂದೆಡೆ ಅವರನ್ನು ಕೈಬಿಟ್ಟಿರುವ ತಾಯಿ ಸುಷ್ಮಾ ಸ್ವರಾಜ್ ಇನ್ನೊಂದೆಡೆ ಲೋಕಾಯುಕ್ತರು ರೆಡಿ ಮಾಡುತ್ತಿರುವ ರಿಪೋರ್ಟ್... ಕೊನೆಯದಾಗಿ ಯಡ್ಡಿ ಜೊತೆ ಹಳಸಿಕೊಂಡಿರುವ ಸಂಬಂಧ, ತಲೆಯೆತ್ತುವ ಮೊದಲೇ ತೀರಿಕೊಂಡ ಬ್ರಹ್ಮಿಣಿ ಉಕ್ಕಿನ ಕಾರ್ಖಾನೆ....

ಈ ಗೋಜಲುಗಳಲ್ಲಿ ಸಿಕ್ಕು ನರಳುತ್ತಿರುವ ರೆಡ್ಡಿಗಳಿಗೆ ತಮ್ಮ ಟಿವಿ ಚಾನೆಲ್ ನೋಡಿಕೊಂಡು ಆನಂದತುಂದಿಲರಾಗುವ ವ್ಯವಧಾನವೂ ಇಲ್ಲ, ಶೋಕಿಯೂ ಇಲ್ಲವಾಗಿದೆ. ಹೀಗೆ ಜನಶ್ರೀಯ ಅರ್ಧ ಪಾಲುದಾರಿಕೆ ರೆಡ್ಡಿಗಳ ಕೈಬಿಡುವ ಸಾಧ್ಯತೆ ನಿಚ್ಚಳವಾಗಿದೆ.

ರಂಗನಾಥ್ ಹಾರಾಟ

ವಿಜಯ ಕರ್ನಾಟಕದ ಸಂಪಾದಕರಾಗಲು ಒಮ್ಮೆ ಮುಂಬೈಗೂ, ಟಿವಿ5ನಲ್ಲಿ ಪಾಲುದಾರಿಕೆ ಗಿಟ್ಟಿಸಲು ಇನ್ನೊಮ್ಮೆ ಹೈದರಾಬಾದಿಗೂ ಹಾರಿ ಹೋಗಿ ಬರಿಗೈಲಿ ಬಂದಿರುವ ಕ್ಯಾಪ್ಟನ್ ರಂಗನಾಥ್ ಈಗ ಹೊಸ ಪ್ಲಾನ್ ಮಾಡುತ್ತಿದ್ದಾರೆ.

ಸ್ವಂತದ್ದೊಂದು ಚಾನೆಲ್ ಕಟ್ಟುವ ಕನಸದು. ಆದರೆ ಅದಕ್ಕೆ ದುಡ್ಡು ಹಾಕಬೇಕಾದವರು ಮಾತ್ರ ಬೇರೆಯವರೆಂಬುದೇ ರಂಗನಾಥರ ಬಯಕೆ. ಈಗಿನ ರೂಮರ್ ಪ್ರಕಾರ ಭೂಗಳ್ಳ ಗೃಹಮಂತ್ರಿ ಆರ್.ಅಶೋಕ್ ಹಾಗೂ ಕೆಲವು NRIಗಳನ್ನು ಚಾನೆಲ್‌ಗೆ ಹಣ ಹೂಡಲು ರಂಗ ಒಪ್ಪಿಸುತ್ತಿದ್ದಾರಂತೆ. ಈ ಪರದೇಶಿ ಕನ್ನಡಿಗರು ಯಾರೆಂಬುದು ಹಾಕಿದ ಹಣ ಕರಗಿ ಹೋಗುವ ಪ್ರಕ್ರಿಯೆಯಲ್ಲಿ ಗೊತ್ತಾಗಲೇಬೇಕಲ್ಲವೇ?


ರಂಗನಾಥ್

ರಂಗ ಒಂದೋ ತೆಲುಗಿನ ಟಿವಿ5ನೊಂದಿಗೆ ಸೇರಿ ಕನ್ನಡದ ಟಿವಿ5 ನ್ಯೂಸ್ ಚಾನೆಲ್ ಚಾಲೂ ಮಾಡುವ ಸಾಧ್ಯತೆಯಿದೆ. ಇಲ್ಲಾಂದ್ರೆ ವಿಧಿವಾದವನ್ನು ನಂಬಿ ಹಣ ಕೊಡಲು ತಯಾರಾಗುತ್ತಿರುವ ವಿದೇಶಿ ಕನ್ನಡಿಗರ ಜೊತೆ ಸೇರುತ್ತಾರೆ. ಏನೇ ಆಗಲಿ ಹೊಸ ಚಾನೆಲ್ ಒನ್‌ಮ್ಯಾನ್ ಶೋ ಆಗದಂತೆ ರಂಗ ನೋಡಿಕೊಳ್ಳಲಿ ಅಷ್ಟೆ.

ಬಾಗಲಕೋಟೆ ನಿರಾಣಿ ಭೂದಾಹಕ್ಕೆ ಬಡ ದಲಿತರ ಬದುಕೇ ನಿಖಾಲಿ!


ನಿರಾಣಿ


ಬಿಡರೈತರ ಎದೆಮೇಲೆ ತನ್ನ ಸಕ್ಕರೆ ಕಾರ್ಖಾನೆ ವಿಸ್ತರಿಸುತ್ತಿರುವ ನಿರಾಣಿಯ ಭೂದಾಹ ನಿಜಕ್ಕೂ ಭಯಾನಕವಾಗಿದೆ. ಸದ್ಯ ಮುಧೋಳ ತಾಲೂಕೆಂಬುದು ಈತನ ಭೂಹಗರಣಗಳ ಅಕ್ಷಯಪಾತ್ರೆಯಂತಾಗಿ ತುಂಬಿ ತುಳುಕಲಾರಂಭಿಸಿದೆ. ಇದರ ನಡುವಲ್ಲೇ ಉಸಿರುಗಟ್ಟಿರುವ ಭೂವಂಚನೆಯೊಂದು ನಿರಾಣಿಯ ರಾಕ್ಷಸತ್ವಕ್ಕೆ ಪಕ್ಕಾ ಉದಾಹರಣೆ. ಒಂದಿಡೀ ದಲಿತ ಕುಟುಂಬ ಇದ್ದಬದ್ದ ಆಸ್ತಿಯನ್ನೆಲ್ಲಾ ಕಳಕೊಂಡು ಬೀದಿಗೆ ಬಿದ್ದ ಕರುಣಾಜನಕ ಕಥೆಯಿದು.

ಅಕ್ಷರ ಬಾರದವರ ಅಮಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುವುದು ಮಹಾ ಪಾಪ ಕಾರ್ಯ. ನಿರಾಣಿ ಸಾಹೇಬನ ಇತಿಹಾಸ ಕೆದಕಿದರೆ ಆತ ಅಂತಹುದೊಂದು ಪಾಪದ ಭೂಮಿಕೆಯಲ್ಲೇ ಬದುಕು ಕಟ್ಟಿಕೊಂಡಿರುವ ವಿಚಾರ ಸುಸ್ಪಷ್ಟ. ದಿ. ದುರ್ಗಪ್ಪ ಭಜಂತ್ರಿಯೆಂಬ ದಲಿತನಿಗೆ ಸೇರಿದ ಸರ್ವೆ ನಂ 157 ರ ಹನ್ನೊಂದು ಎಕರೆ ಆರು ಗುಂಟೆ ಜಮೀನನ್ನು ನಿರಾಣಿ ಕಬ್ಜಾ ಮಾಡಿಕೊಂಡಿರುವುದು ಸಹ ಆ ಮೂಲಕವೆ. ಈ ವಂಚನೆಯ ಮೂಲಕ ಅಕ್ಷರಶಃ ಬೀದಿಪಾಲಾಗಿರುವ ದಲಿತ ಕುಟುಂಬ ವೀಗ ಮುದೋಳದಲ್ಲಿ ನಡೆಯುತ್ತಿರುವ ರೈತರ ಹೋರಾಟದ ಮೂಲಕ ನ್ಯಾಯ ಪಡೆಯುವ ನಿರೀಕ್ಷೆಯಿಟ್ಟುಕೊಂಡಿದೆ.

ನಿರಾಣಿ ನುಂಗಿರುವ ಜಮೀನಿನ ಮೂಲವಿರುವುದು 90 ರ ದಶಕದಲ್ಲಿ, ಆಗ ಇದರ ಮಾಲೀಕನಾಗಿದ್ದಾತ ಸೋಮಲಿಂಗಪ್ಪ, 1995 ರಲ್ಲಿ ದುರ್ಗಪ್ಪ ಭಜಂತ್ರಿ ಎಂಬ ದಲಿತ ಈ ಜಮೀನನ್ನು ಖರೀದಿಸಿದ್ದ. ಹಂದಿ ಸಾಕಿ ಮಾಂಸ, ಗೊಬ್ಬರ ಮಾರಾಟದ ಕಸುಬು ನಡೆಸುತ್ತಿದ್ದ ದುರ್ಗಪ್ಪ ಸದರಿ ಜಮೀನನ್ನು ತನ್ನ ಕಸುಬಿಗೆ ಉಪಯೋಗಿಸಿಕೊಂಡಿದ್ದ. ಈತ ತಿಮ್ಮಯ್ಯ, ಸೈದು, ಮುತ್ತಪ್ಪ ಹನುಮಂತು ಹಾಗೂ ಪರಶುರಾಮ್ ಎಂಬ ಐವರು ಗಂಡುಮಕ್ಕಳ ಸಹಕಾರದೊಂದಿಗೆ ಒಂದಷ್ಟು ಚೆಂದದ ಬದುಕು ಕಂಡುಕೊಂಡಿದ್ದ.

ಆದರೆ ಜಮೀನು ಖರೀದಿಸಿದ ಮರುವರ್ಷವೇ ದುರ್ಗಪ್ಪ ಭಜಂತ್ರಿ ಕಣ್ಮುಚ್ಚಿದ. ತದನಂತರ ಐವರು ಮಕ್ಕಳು ಆಸ್ತಿ ಪಾಲು ಮಾಡಲೋಸ್ಕರ ಮುಧೋಳ ಜೆಎಂಎಫ್‌ಸಿ ನ್ಯಾಯಾಲಯದ ಮೊರೆಹೊದರು. ಇದಕ್ಕೆ ಪೂರಕವಾಗಿ ಕೋರ್ಟ್ ಆದೇಶ ಹೊರಬಂದು ಐವರು ಅಣ್ಣತಮ್ಮಂದಿರಿಗೆ ತಲಾ 2 ಎಕರೆ 11 ಗುಂಟೆ ಹಂಚಿಕೆಯಾಗಿತ್ತು, ತಂದೆ ಭಜಂತ್ರಿ ಕಾಲವಾದ ನಂತರ ಅದ್ಯಾಕೋ ಹಂದಿ ಸಾಕಾಣೆ ಲಾಭ ತಂದುಕೊಡುತ್ತಿರಲಿಲ್ಲ, ಬೇರೆ ಕಸುಬು ಮಾಡುವುದಕ್ಕಾಗಲಿ, ಕೃಷಿ ಮಾಡುವುದಕ್ಕಾಗಲಿ ಆರ್ಥಿಕ ಚೈತನ್ಯವೂ ಇರಲಿಲ್ಲ, ಇದೆಲ್ಲದರಿಂದಾಗಿ ಹಿರಿಯನಾದ ತಿಮ್ಮಯ್ಯ ಭಜಂತ್ರಿಗೆ ತಂತಮ್ಮ ಆಸ್ತಿ ನೋಡಿಕೊಳ್ಳುವ ಜವಾಬ್ದಾರಿ ವಹಿಸಿ ನಾಲ್ವರು ಸಹೋದರರು ಗೋವಾಗೆ ಕೆಲಸ ಹುಡುಕಿಕೊಂಡು ವಲಸೆ ಹೋದರು.

ಈ ನಡುವೆ ಆರ್ಥಿಕ ಪರಿಸ್ಥಿತಿ ವಿಪರೀತ ಬಿಗಡಾಯಿಸಿದ್ದ 2004 ರಲ್ಲಿ ತಿಮ್ಮಯ್ಯ ತನ್ನ ಭಾಗದ ಜಮೀನನ್ನು ಕಲ್ಲುಗಣಿಗಾರಿಕೆಗೆ ಲೀಸ್‌ಗೆ ಬಿಡಲು ತೀರ್ಮಾನಿಸಿದ. 80 ಸಾವಿರ ಕೊಟ್ಟು ಕಲ್ಲುಗಣಿ ಆರಂಭಿಸಿದವನು ಬಿಜಾಪುರ-ಬಾಗಲಕೋಟೆ ರಾಜ್ಯ ಹೆದ್ದಾರಿಯ ಗುತ್ತಿಗೆದಾರನಾಗಿದ್ದ ಕೆ. ಜಲಂಧರ್ ರೆಡ್ಡಿ. ಗಮನೀಯ ಅಂಶವೆಂದರೆ ತಿಮ್ಮಯ್ಯ ತನ್ನ ಭಾಗದ ಆಸ್ತಿಯನ್ನಷ್ಟೇ ಗಣಿಗಾರಿಕೆಗೆ ಕೊಟ್ಟಿದ್ದ. ಕಲ್ಲು ಶೇಖರಿಸಿಡಲಷ್ಟೇ ತನ್ನ ತಮ್ಮಂದಿರ ಜಮೀನು ಉಪಯೋಗಿಸಬಹುದೆಂದು ಹೇಳಿದ್ದ. ಇದೆಲ್ಲದರ ನಡುವೆ 2006 ರ ಹೊತ್ತಿಗೆ ಲೀಸ್ ಅವಧಿ ಮುಗಿದು ಗುತ್ತಿಗೆದಾರ ಜಲಂಧರ್ ಹೋಗುವವನಿದ್ದ, ಆಗ ಅಟಕಾಯಿಸಿ ಕೊಂಡವನು ಮುರುಗೇಶ್ ನಿರಾಣಿ!


ನಿರಾಣಿಯ ಫ್ಯಾಕ್ಟರಿ...


ನಿರಾಣಿಯ ಬಂಗಲೆ...

ಅಂದಹಾಗೆ ಸದರಿ ಜಮೀನು ನಿರಾಣಿಯ ಸಕ್ಕರೆ ಕಾರ್ಖಾನೆಯ ಹತ್ತಿರದಲ್ಲೇ ಇದೆ. ಇದನ್ನೇ ನೆಪವಾಗಿಟ್ಟುಕೊಂಡ ನಿರಾಣಿ ಕಲ್ಲು ಗಣಿಗಾರಿಕೆಯ ಸಂದರ್ಭದಲ್ಲಿ ಸ್ಫೋಟ ನಡೆಸಿದ್ದರಿಂದ ತನ್ನ ಫ್ಯಾಕ್ಟರಿಗೆ ಭಾರೀ ಹಾನಿ ಆಗಿರುವುದಾಗಿಯೂ, ಕೇಸ್ ಜಡಿದು ಕೋಟ್ಯಂತರ ಪರಿಹಾರ ಕಕ್ಕಿಸುವುದಾಗಿಯೂ ಬೆದರಿಸಿದ. ಹೆದ್ದಾರಿ ಟೆಂಡರ್‌ನಲ್ಲಿ ಸರಿಯಾಗಿ ತಿಂದು ಊರು ಸೇರಲಿದ್ದ ಜಲಂಧರ್ ಕಂಗಾಲಾದ. ಈತ ನಿರಾಣಿಗಿಂತಲೂ ದುಷ್ಟ. ಆದುದರಿಂದಲೇ ಪ್ರಪಂಚ ಜ್ಞಾನವಿಲ್ಲದ ತಿಮ್ಮಯ್ಯನಿಂದ ಹೆಬ್ಬೆಟ್ಟು ತೀಡಿಸಿಕೊಂಡು ಪೂರ್ತಿ ಜಮೀನನ್ನು 9.5.07 ರಂದು ನಿರಾಣಿಯ ಹೆಂಡತಿ ಕಮಲಾಬಾಯಿಯ ಹೆಸರಿಗೆ ವರ್ಗಾಯಿಸಿಬಿಟ್ಟ. ಹಾಗೆ 11 ಎಕರೆ 6 ಗುಂಟೆ ಜಮೀನನ್ನು ನಿರಾಣಿಯ ಉಡಿ ಸೇರಿಸಿದ ಜಲಂಧರ್ ಬಚಾವಾಗಿ ಊರು ಸೇರಿಕೊಂಡ.

ಈ ಇಡೀ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮಗಳು ಕಣ್ಣಿಗೆ ರಾಚುವಂತಿವೆ. ಐವರು ತಮ್ಮಂದಿರಿಗೂ ಸಹ ಈ ಜಮೀನು ಸಮಾನವಾಗಿ ಹಂಚಲ್ಪಟ್ಟಿದೆ. ಈ ಒಟ್ಟಾರೆ ಜಮೀನನ್ನು ಪ್ರತಿಯೊಬ್ಬರ ಒಪ್ಪಿಗೆ, ಸಹಿಯಿಲ್ಲದೆ ಖರೀದಿ ವ್ಯವಹಾರ ನಡೆಸುವಂತಿಲ್ಲ, ಆದರೆ ಕೇವಲ ತಿಮ್ಮಣ್ಣನ ಸಹಿಯನ್ನಷ್ಟೇ ಮೋಸದಿಂದ ಪಡೆದುಕೊಂಡು ಉಳಿದ ನಾಲ್ವರು ಸಹೋದರರನ್ನು ಕಡೆಗಣಿಸಿ ಈ ದುಷ್ಟ ಕೆಲಸ ನಡೆಸಲಾಗಿದೆ.

ಹೀಗೆ ಬಿಟ್ಟಿ ಸಿಕ್ಕ ಜಮೀನನ್ನು ನಿರಾಣಿ ಸಾಹೇಬ ಬಿಡುವುದುಂಟೇ? ಬಡಜನರ ಆರ್ತನಾದವನ್ನೂ ಲೆಕ್ಕಕ್ಕಿಟ್ಟುಕೊಳ್ಳದೆ ಇಡೀ ಕುಟುಂಬವನ್ನು ಬೀದಿಗೆ ತಳ್ಳಿದ. ಈ ಬಡವರು ಹೋರಾಟ ಅಂತೆಲ್ಲ ಮುಂದುವರಿದಾಗ ಧಮಕಿಯ ಮೂಲಕವೇ ಹತ್ತಿಕ್ಕಿದ. ನಿರಾಣಿಯ ತಮ್ಮ ಸಂಗಮೇಶನಂತೂ ತನ್ನ ಗೂಂಡಾ ಪಡೆಯನ್ನಟ್ಟಿ ಧಮಕಿ ಹಾಕಿಸಿದ.


ಇದೆಲ್ಲದರಿಂದಾಗಿ ಭೂಮಿಯ ಆಸೆ ಕೈಬಿಟ್ಟಿದ್ದ ಆ ಕುಟುಂಬಿಕರೀಗ ನಿರಾಣಿ ವಿರುದ್ಧದ ಧರಣಿಯಲ್ಲಿ ಸೇರಿಕೊಂಡಿದ್ದಾರೆ. ಅವರೆಲ್ಲರ ಕಣ್ಣುಗಳಲ್ಲಿ ನ್ಯಾಯದ ನಿರೀಕ್ಷೆ ಜಿನುಗಲಾರಂಭಿಸಿದೆ.

ಕದ್ದ ಕಾಸಲ್ಲೇ ಸಚಿವಗಿರಿ ದಕ್ಕಿಸಿಕೊಂಡು ಭೂಭಕ್ಷಕರ ಗೂಂಡಾಪಡೆ ಸಾಕಿಕೊಂಡಿರುವ ನಿರಾಣಿ ಬಡವರ ನಿರೀಕ್ಷೆ ಹೊಸಕದಂತೆ ತಡೆಯುವ ಜವಾಬ್ದಾರಿ ಈ ಭಾಗದ ಪೊಲೀಸರು, ಜನಪರ ಸಂಘಸಂಸ್ಥೆಗಳ ಮೇಲಿದೆ.

• ಮಹಾಲಿಂಗಪ್ಪ ಆಲಬಾಳ

ಆನಂದ ಕರ್ನಾಟಕವಂತೆ!

ವಿಜಯ ಸಂಕೇಶ್ವರರ ಹೊಸ ಡೈಲಿಯ ...ಸರಿದು. ಹಾಲಿ ಹೊಸಪೇಟೆಯ ಶಾಸಕ ...ದಿರುಕಳ್ಳ ಆನಂದ್ ಸಿಂಗ್ ಹತ್ತಿರ ಆನಂದ ...ರ್ನಾಟಕವೆನ್ನುವ ಟೈಟಲ್ ಇತ್ತು, ಈತ ಪತ್ರಿಕೆಯ ...ೖಟಲ್ ಯಾಕೆ ತರಿಸಿಟ್ಟುಕೊಂಡಿದ್ದನೋ ಆ ...ಗವಂತನೇ ಬಲ್ಲ. ಆದೇನೇ ಇರಲಿ, ...ದಯವಾಣಿಯಲ್ಲಿದ್ದ ತಿಮ್ಮಪ್ಪ ಭಟ್ಟರನ್ನು ಆನಂದ್ ಕರ್ನಾಟಕದ ಹೊಸ ಸಂಪಾದಕರಾಗಿ ಸಂಕೇಶ್ವರ್ ಬರಮಾಡಿ ಕೊಂಡಿದ್ದಾರೆ. ಇಲ್ಲಿ ಸಂಕೇಶ್ವರ್ ಲೆಕ್ಕಾಚಾರ ಏನೆಂದರೆ 'ವಿಜಯ ಕರ್ನಾಟಕ' ಸಕ್ಸಸ್ ಆಗಿದ್ದೇ



...ನ್ನ ಪಂಕ್ಚುಯಾಲಿಟಿಯಿಂದ. ಅದು ಸಾಧ್ಯವಾಗಿದ್ದೇ ...ಮ್ಮ ಪಾರ್ಸೆಲ್ ಸರ್ವೀಸ್ ಲಾರಿಗಳಿಂದ ಎಂದು. ...ಂದರೆ ಬೆಳ್ಳಂಬೆಳಗ್ಗೆಯೇ 5 ಗಂಟೆಗೆ ತಮ್ಮ ಪತ್ರಿಕೆ ...ಟಾಲ್‌ಗೆ ಹೋದರೆ ಭರ್ಜರಿ ಸೇಲಾಗುತ್ತದೆ ಎಂದು ...ಂಕೇಶ್ವರ್ ನಂಬಿಕೊಂಡಿದ್ದಾರೆ. ಜೊತೆಗೆ ಉತ್ತರ ...ರ್ನಾಟಕದ ಲಿಂಗಾಯತರು, ಮಠಾಧೀಶರು ತನ್ನ ...ನ್ನ ಹಿಂದೆ ನಿಲ್ಲುತ್ತಾರೆಂಬ ಹುಂಬ ನಂಬಿಕೆಯೂ ...ಂಕೇಶ್ವರ್‌ಗಿದ್ದಂತಿದೆ. ಆನಂದ ಕರ್ನಾಟಕವು ಈ ...ರ್ಷಾಂತ್ಯದೊಳಗೆ, ವಿಆರ್‌ಎಲ್ ಲಾರಿಯೇರಿ ...ೂರಡಲಿದೆ. ಇದು ಸಂಯುಕ್ತ ಕರ್ನಾಟಕದ ...ರ್ಕ್ಯುಲೇಷನ್ ಅನ್ನು ಕೊಂಚ ಕಸಿಯುವುದು ...ಶ್ಚಿತ.


ಪತ್ರಕರ್ತರ ಪಕ್ಷಾಂತರ ಪ್ರಕರಣವು

ಇವೆಲ್ಲಾ ಮಾಲೀಕರ ಗೋಳುಗಳಾದರೆ ...ತ್ರಕರ್ತರ ಜಗತ್ತಿನಲ್ಲೂ ಕೆಲವು ...ಲ್ಲಣಗಳಾಗುತ್ತಿವೆ. ಉದಯವಾಣಿಯ ಸಂಪಾದಕ ...ವಿ ಹೆಗಡೆ ತಮ್ಮ ಹಾಗೂ ಚೀಫ್ ರಿಪೋರ್ಟರ್ ...ರುಮೂರ್ತಿಯವರ ನಡುವೆ ಗಿರೀಶ್ ಬಾಬು ...ಾಗೂ ಇನ್ನೊಬ್ಬರನ್ನು ಅನವಶ್ಯಕವಾಗಿ ತಂದು ಕೂರಿಸಿಕೊಂಡಿದ್ದಾರೆ. ಇದೊಂಥರ ಬಫರ್ ಜೋನ್ ಇದ್ದಂತೆ.

ಗುರುಮೂರ್ತಿ ಇದನ್ನು ಸಹಿಸುತ್ತಾರಾ? ಕಾದು ನೋಡಬೇಕಿದೆ.

ಈ ನಡುವೆ ಉದಯವಾಣಿಯಿಂದ ನಿವೃತ್ತರಾಗಿದ್ದ ಪೂರ್ಣಿಮಾರನ್ನು ಪ್ರಜಾವಾಣಿ ಕರೆಸಿಕೊಂಡಿದೆ. ಸಾಮಾನ್ಯವಾಗಿ ಪ್ರಜಾವಾಣಿಯಲ್ಲಿ ಇಂತಹದ್ದು ಸಂಭವಿಸುವುದು ಅಪರೂಪ.

ಪತ್ರಕರ್ತ ಯಗಟಿ ಮೋಹನ್ ಹೊಸ ದಿಗಂತಕ್ಕೆ ಡೈವೋರ್ಸ್ ನೀಡಿದ್ದಾರೆ. ಪ್ರಗತಿಪರ ಎನಿಸಿಕೊಂಡಿದ್ದ ಮೋಹನ್ ಹಂಡ್ರೆಡ್ ಪರ್ಸೆಂಟ್ ಆರ್‌ಎಸ್‌ಎಸ್ ಆಗಿರುವ ಹೊಸ ದಿಗಂತ ಸೇರಿದಾಗ ಅನೇಕರು ಆಶ್ಚರ್ಯಪಟ್ಟಿದ್ದರು. ಈಗ ಅಲ್ಲಿನ ಗಬ್ಬು ಕೋಮುವಾಸನೆ ಸಹಿಸಲಾಗದೆ ಹೊರಬಂದಿರುವ ಮೋಹನ್ ಸಂಯುಕ್ತ ಕರ್ನಾಟಕಕ್ಕೆ ನುಗ್ಗಲು ಹೊರಟಿರುವುದೇ ವಿಶೇಷ. ಹಾಲಿ ಸಂ.ಕ.ಸಂಪಾದಕ ಹುಣಸವಾಡಿ ರಾಜನ್‌ರ ಸ್ಥಾನಕ್ಕೆ ಬಂದು ಕೂರಲು ಯಗಟಿ ಪ್ರಯತ್ನಿಸುತ್ತಿರುವುದು ಈಗ ಗುಟ್ಟಾಗೇನೂ ಉಳಿದಿಲ್ಲ. ಆದರೆ ಸಂತ ರಾಜನ್‌ರಿಗೆ ಈಗ 2 ವರ್ಷದ Extension ನೀಡಿದೆ. ಅಲ್ಲಿಗೆ ಮೋಹನ್‌ಗೆ ಜಾಗವಿಲ್ಲ ಅಂತಾಯಿತು.




ಒಟ್ಟಿನಲ್ಲಿ 2011ರ ದ್ವಿತೀಯಾರ್ಧದಲ್ಲಿ ಮತ್ತೆ ಎರಡನೇ ಸುತ್ತಿನ ಮೀಡಿಯಾ ವಲಸೆ, ಲಾಲಸೆಗಳು ಚಾಲೂ ಆಗುತ್ತಿವೆ.

ಯಾರು ಎಲ್ಲಿಂದ ಹೊರಟು ಇನ್ನೆಲ್ಲಿ ತೇಲುತ್ತಾರೋ, ಯಾರು ಮಾಲೀಕನನ್ನೂ ಮುಳುಗಿಸುತ್ತಾರೋ ಈ ಟಿಆರ್‌ಪಿ ಎಂಬ ಮಾಯಾಂಗನೆ ಯಾರ ಕೈ ಹಿಡಿಯುತ್ತಾಳೋ? ಕಾದು ನೋಡೋಣ.

ಸಾಹಿತ್ಯದ ಪರಿಚಾರಕ, ಅನಂತಮೂರ್ತಿಯ ಪರಚಿದನಂತೆ

ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ'ದಲ್ಲಿ ಬರುವ ದಾಸಾಚಾರಿಯಂತೆ ಕಾಣುವ ಸುಮತೀಂದ್ರ ನಾಡಿಗ್ ಎಂಬ ಸಾಹಿತ್ಯದ ಪರಿಚಾರಕ ಚೆಡ್ಡಿ ಬೈರಣ್ಣನ ಪರ ವಕಾಲತ್ತು ವಹಿಸಿ ಅನಂತಮೂರ್ತಿಯವರನ್ನು ಹಿಗ್ಗಾಮುಗ್ಗಾ ಜರಿದಿದ್ದಾನಂತಲ್ಲಾ. "ಅನಂತಮೂರ್ತಿ ಅಶ್ಲೀಲ ಲೇಖಕ, ಅವರಿಗೆ ಸಂಭೋಗವನ್ನು ಕೂಡ ಸರಿಯಾಗಿ ಬರೆಯಲು ಬರುವುದಿಲ್ಲ, ಅದೇ ಕಾದಂಬರಿಯನ್ನು ನಾನು ಬರೆದಿದ್ದರೆ ಬೇಂದ್ರೆ ಕಾವ್ಯಕ್ಕೆ ಸರಿಗಟ್ಟುವಂತೆ 'ನಾನು ಬಾ, ನೀನು ಬಾ, ಬಾ ಹತ್ತಿರ ಮಾಲತಿ. ಮಲಗು ಮಲಗು ಮಾಲತಿ. ನಾನು ಬರಲೇ ಮೇಲತ್ತಿ' ಅಂತ ಶೃಂಗಾರಮಯವಾಗಿ ಬರೆಯುತ್ತಿದ್ದೆ. ಅದೇ ನಮ್ಮ ಬೈರಪ್ಪ ಬರೆದಿದ್ದರೆ 'ಸರಸ್ವತಿ ಭೂದೇವಿಯಂತೆ ಮಲಗಿದ್ದಳು. ನಾನು ಅವಳ ಮೇಲೆ ಮಲಗಿದೆ. ಆಗ ಹೊರಗೆ ಜಡಿಮಳೆ. ಒಳಗೂ ಜಡಿಮಳೆ. ಮೇಘ ಸುಮ್ಮನಾಯ್ತು, ಭೂಮಿಯು ತಂಪಾಯ್ತು, ಅಷ್ಟರಲ್ಲಿ ಕಾಣಿಸಿಕೊಂಡ ಸೂರ್ಯ ನಮ್ಮನ್ನು ಎಚ್ಚರಿಸಿದ' ಎಂದು ಬರೆಯುತ್ತಿದ್ದರು. ಇದೆಲ್ಲ ಅಶ್ಲೀಲ ಅನಂತಮೂರ್ತಿಗೆ ಹೇಗೆ ಹೊಳೆಯಬೇಕು?" ಎಂದರಂತಲ್ಲಾ, ಥೂತ್ತೇರಿ!



* * * *

ಅಪ್ರಾಪ್ತ ವಯಸ್ಸಿಗೇ ಸಾಹಿತಿಯಾದೆನೆಂದು ಮೆರೆಯುತ್ತಿದ್ದ ಸುಮತಿ ತಾರುಣ್ಯಕ್ಕೆ ಬರುವಷ್ಟರಲ್ಲಿ ಸೃಜನಾಶೀಲತೆಯನ್ನು ಕಳೆದುಕೊಂಡು ಅವರಿವರು ಏನು ಬರೆದಿದ್ದಾರೆ, ಎಲ್ಲಿ ಕದ್ದಿದ್ದಾರೆ ಎಂಬುದನ್ನು ಹುಡುಕುತ್ತಲೇ ಆಯಸ್ಸು ಮುಗಿಸಿದರಂತಲ್ಲಾ. ಆದರೂ ಸುಮತಿ ಹಿಂದೆ ಹೇಗಿದ್ದರೋ ಹಾಗೇ ಇದ್ದಾರಂತೆ. ಅದೆ ಗವಳ ಕೇಶ, ಪಾಚಿ ಹಲ್ಲು, ಕ್ಕಿ ಕ್ಕಿ ಕ್ಕೀ ನಗು, ಒಂದು ಚೂರೂ ಬದಲಾಗಿಲ್ಲವಂತೆ. ಎಲ್ಲ ವಯಸ್ಸಾದ ಕೆಲ ಮುದಿಯರು ಪುತ್ರವ್ಯಾಮೋಹ, ಜಾತಿ ವ್ಯಾಮೋಹಕ್ಕೆ ತುತ್ತಾಗುವಂತೆ ಚಹರೆ ಸುಮತಿಯಲ್ಲೂ ಕಾಣಿಸಿದ್ದರಿಂದ ವಿಶೇಷ ಅಡುಗೆ ಭಟ್ಟ ತನ್ನ ಪತ್ರಿಕೆಯಲ್ಲಿ ತನಗಾಗದವರ ಮೇಲೆಲ್ಲಾ ಬರೆಸುವ ಹುನ್ನಾರದಿಂದ ಸುಮತಿಯನ್ನು ಕೇಳಿದನಂತಲ್ಲಾ. ಆಗ ತನ್ನ ಹಳೆಗಾಯ ನೋಡಿಕೊಂಡ ಸುಮತಿ ನವ್ಯಕಾಲದ ಪೆನ್ನಿಗೆ ಮಸಿ ತುಂಬಿಕೊಂಡು ಕೆರೆಯುತ್ತ ಕುಳಿತನಂತಲ್ಲಾ, ಥೂತ್ತೇರಿ!!

****

ಥೂತ್ತೇರಿ
ಯಾಹೂ

ಬ್ರಾಮಣ ಕೇರಿಯ ದಾಸಾಚಾರಿ ಉಪ್ಪಿಟ್ಟಿನ ಮೇಲೆ ಎರಗಿದಂತೆ ಸುಮತಿ ಅನಂತಮೂರ್ತಿ ಸಾಹಿತ್ಯದ ಮೇಲೆರಗಿ 'ಲೇಖಕರಾಗಿ ಅನಂತಮೂರ್ತಿ ಎಂದೋ ಕಣ್ಣುಮುಚ್ಚಿದ್ದಾರೆ' ಎಂದು ಆಡಿಕೊಂಡನಂತಲ್ಲಾ. ಅದನ್ನು ಕೇಳಿ "ಈ ನಾಡಿಗ ನೆನಪಿಡುವಂತಹದ್ದು ಏನು ಬರೆದಿದ್ದಾನೆ ಎಂದು ಹುಡುಕಿದರೆ ಅವನ ಸಾಹಿತ್ಯವೂ ದಿವಂಗತವಾಗಿದೆ" ಎಂದು ಅನಂತಮೂರ್ತಿ ಅಭಿಮಾನಿಗಳು ಆಡಿಕೊಳ್ಳುತ್ತಿದ್ದಾರಂತಲ್ಲಾ. ಸುಮತೀಂದ್ರನಂತೆಯೇ ಅನಂತಮೂರ್ತಿಯವರ ಬರವಣಿಗೆ ಮೇಲೆರಗಿರುವ ಬೆಲ್ಜಿಯಂ ಬಾಲವೊಂದು ಆಗಾಗ್ಗೆ ಭಟ್ಟರ ಬೇಲಿ ಹತ್ತಿರ ಕಾಣಿಸಿಕೊಂಡು "ಅನಂತಮೂರ್ತಿ ಸಂಸ್ಕಾರ ಸೆಕ್ಸ್ ಪುಸ್ತಕ. ಬ್ರಾಗಳ್ಯಾರು ಅದನ್ನು ಓದಬೇಡಿ" ಎಂದು ಹೇಳಿ ಓಡುತ್ತಾನಂತಲ್ಲಾ. ಅದಕ್ಕೆ ಅನಂತಮೂರ್ತಿ ಅಭಿಮಾನಿಗಳು "ನಾವಷ್ಟೇ ಅಲ್ಲ, ಅಗ್ರಹಾರದ ಜನಗಳೆಲ್ಲಾ ಅದನ್ನು ಓದಿ ಅರಗಿಸಿಕೊಂಡಾಗಿದೆ. 'ಸಂಸ್ಕಾರ'ದ ಸಿನಿಮಾ ಕಲಾವಿದರೆಲ್ಲಾ ಕಾಲವಾಗಿದ್ದಾರೆ. ಹೀಗಿದ್ದರೂ ಈಗ 'ಸಂಸ್ಕಾರ' ಸುದ್ದಿ ತೆಗೆಯುವವರಿಗೆ ಇನ್ನೆಂತಹ ಆಘಾತವಾಗಿರಬಹುದು" ಎಂದು ಲೊಚಗರಿದರಂತಲ್ಲಾ, ಥೂತ್ತೇರಿ!!

****

ಇತ್ತ ಕನ್ನಡ ಸಾಹಿತ್ಯ ಪರಿಷತ್ತಿನ ಫಲಾನುಭವಿಗಳ ಸುದ್ದಿ ಶಾನೇ ಸ್ವಾರಸ್ಯವಾಗಿದೆಯಂತಲ್ಲಾ. ಬೆಂಗಳೂರಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಮತ್ತು ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಿಂದ ಸ್ಫೂರ್ತಿಗೊಂಡ ನಲ್ಲೂರು ಪ್ರಸಾದ್ ಎಂಬ ಜೆಡಿಎಸ್ ಗಿರಾಕಿ ಮಗನ ಮದುವೆಯನ್ನು ಅರಮನೆ ಆವರಣದಲ್ಲಿ ಅದ್ದೂರಿಯಾಗಿ ಮಾಡಿದನಂತಲ್ಲಾ. ನಲ್ಲೂರರ ಜಾತ್ರೆ ನೋಡಿದ ಉಳಿದ ಸಾಹಿತ್ಯ ಪರಿಷತ್ ಗಿರಾಕಿಗಳು, ತಾಲ್ಲೂಕು, ಹೋಬಳಿ ಮಟ್ಟದಲ್ಲೆಲ್ಲಾ ಸಾಹಿತ್ಯ ಸಮ್ಮೇಳನ ಏರ್ಪಡಿಸುತ್ತಾ, ದೇಣಿಗೆ ಸಂಗ್ರಹಿಸುತ್ತ ತಿರುಗಾಡುತ್ತಿದ್ದಾರಂತಲ್ಲಾ. ಈ ಮಧ್ಯೆ ಶಿವಮೊಗ್ಗದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೊಸ ಸೂಟ್ ಹೊಲಿಸಿಕೊಂಡು, ಡಿ.ಸಿ.ಯಂತೆ ತಿರುಗಾಡುತ್ತಿರುವುದನ್ನು ನೋಡಿದ ಪತ್ರಕರ್ತರು ಹೊಟ್ಟೆಕಿಚ್ಚಿನಿಂದ "ಖಂಡಿತ ಈತನ ಸೂಟು ಸಾಹಿತ್ಯ ಸಮ್ಮೇಳನದ ಸಿಲ್ಕಿನಿಂದ ಹೊಲಿಸಿಕೊಂಡಿರುವಂತದ್ದು" ಎಂದು ಆಡಿಕೊಂಡರಂತಲ್ಲ, ಥೂತ್ತೇರಿ!!

****

ಯಡವಟ್ ಎಡೂರಪ್ಪ ಮತ್ತು ಮೊದ್ದುಮಣಿ ಕುಮಾರಣ್ಣನ ಜಂಗೀ ಕುಸ್ತಿಯ ತೀರ್ಪುಗಾರ ಧರ್ಮಸ್ಥಳದ ಮಂಜುನಾಥ ಎಂದು ಗೊತ್ತಾದ ಕೂಡಲೇ ಯಾರನ್ನಾದರೂ ಮಾತಾಡಿಸಬೇಕು ಅಂತ ಅನ್ನಿಸಿತಲ್ಲಾ.

ಆ ಕೂಡಲೇ ಹೊಳೆದ ಹೆಸರು ಹೆಸರಾಂತ ಜ್ಯೋತಿಷಿ ಸೋಮಯಾಜಿ ಎಂಬ ಆಸಾಮಿಯದ್ದು. ಅವನನ್ನು ಮಾತನಾಡ್ಸೋಣವೆಂದು ಫೋನ್ ಮಾಡಿದರೆ, ರಿಂಗಾಯ್ತು!

ರಿಂಗ್‌ಟೋನ್: "...ತೇಜೋಮಯಂ.... ವಿಶ್ವಮನಂತಮಾದ್ಯಂ... ಯನ್ಮೇ...."

"ಹಲೋ ಯಾರು?"

"ಸಾರ್ ನಾನು ಯಾಹೂ ಅಂತ ಪತ್ರಕರ್ತ. ಒಂದೆರಡು ಪ್ರಶ್ನೆ ಕೇಳಬೇಕಾಗಿತ್ತು, ದಯವಿಟ್ಟು ಕೇಳಿಸಿಗಳಿ ಸಾರ್."

"ಆದೇನ್ಹೇಳಿ ಇವರೆ?"

"ಏನಿಲ್ಲ ಸಾರ್, ನಾನು ಮತ್ತೆ ನಮ್ಮ ದಾಯಾದಿಗಳು ಜಮೀನಿನ ವ್ಯವಹಾರಕ್ಕೆ ಸಂಬಂಧಪಟ್ಟಂಗೆ ಜಗಳ ಆಡಿಕೊಂಡಿದ್ದಿವಿ.. ಈ ಸಂಬಂಧವಾಗಿ ಧರ್ಮಸ್ಥಳದ ಮಂಜುನಾಥನ ಎದುರಿಗೆ ಪ್ರಮಾಣಮಾಡನ ಅಂತ ಹೊಂಟಿದ್ದಿವಿ. ಅದರ ಬಗ್ಗೆ ಹೇಳಿ ಸ್ವಾಮಿ."

"ಧರ್ಮಸ್ಥಳಕ್ಕೋಗಿ ಪ್ರಮಾಣ ಮಾಡದನ್ನ ತಮಾಷೆಯಾಗಿ ತಗೊಂಡಿದ್ದೀರಿ ನೀವು. ಹಾಗೇನಾದ್ರು ಪ್ರಮಾಣ ಮಾಡಿದ್ರೆ ತಪ್ಪಿತಸ್ಥರು ಬುದ್ಧಿಮಾಂದ್ಯರಾಗುತ್ತಾರೆ. ಲಕ್ವ ಹೊಡೆಯುತ್ತೆ ಗೊತ್ತಾ?"

"ಸ್ವಾಮಿ, ನಾನು ನಿಮ್ಮ ಬ್ರಾಹ್ಮಣರ ಕೇರಿಲಿ ತಿರುಗಾಡಿದೆ. ಮನೆಗೊಬ್ಬರಂತೆ ಬುದ್ಧಿಮಾಂದ್ಯರಿದ್ರು. ಅಮೇಲೆ ನಮ್ಮ ಜಾತಿ ಕೇರಿಲಿ ಸುಮಾರು ಜನ ಲಕ್ವ ಹೊಡಿಸಿಗಂಡವ್ರರೆ. ರಾಜಕಾರಣಿಗಳ ಪೈಕಿ ಗೋಪಾಲಗೌಡ್ರು, ವಿರೇಂದ್ರ ಪಾಟೀಲರೆಲ್ಲಾ ಲಕ್ವ ಹೊಡದೇ ಸತ್ತೋದ್ರು, ಇವ್ರುರೆಲ್ಲಾ ಹೋಗಿ ಧರ್ಮಸ್ಥಳದಲ್ಲಿ ಪ್ರಮಾಣ ಮಾಡಿದ್ರಾ?"

"ನೀನ್ಯಾರೋ ಕಿಡಿಗೇಡಿ ಇರಬೇಕು. ಇಡೋ ಫೋನ್ ಮುಂಡೆದೆ."

"ಬೋಸುಡಿಕೆ, ನೀನೇ ಇಟ್ಟಾಗದಿಲವೇ?"

ಥೂತ್ತೇರಿ!!!


ನಾಯಕರ ತೆವಲಿಗೆ ಬಲಿಯಾಯ್ತೆ ಹೋರಾಟ?

...ನಿರಾಣಿಯ ಭೂದಾಹದ ವಿರುದ್ಧ ರೈತರು ಮುಧೋಳದ ತಹಶೀಲ್ದಾರ್ ಕಚೇರಿ ಮುಂದೆ ಧರಣಿ ನಡೆಸಿದ್ದು ...ಲ್ಲೆಯ ಮಟ್ಟಿಗೊಂದು ಐತಿಹಾಸಿಕ ಘಟನೆ. ಆದರೀಗ ಧರಣಿಯನ್ನು ರಾಜಕೀಯ ಉದ್ದೇಶಕ್ಕೆ ಬಳಸುತ್ತಾ ...ಯಕರಂತೆ ಪೋಸು ಕೊಟ್ಟವರ ನರಿಬುದ್ಧಿಯಿಂದಾಗಿ ಇಡೀ ಹೋರಾಟ ಹಳಿತಪ್ಪಿದೆ. ನಿರಾಣಿಯೊಂದಿಗೆ ಡೀಲು ...ದುರಿಸಿಕೊಂಡಿರುವ ಈ ದುಷ್ಟರ ದಂಡು ಧರಣಿಗೆ ಅಂದು ತಿರುಗಿಸಿ ತುಂಬಾ ದಿನಗಳಾಗಿವೆ. ಇದ್ಯಾವುದೂ ...ತ್ತಿಲ್ಲದ ಅಮಾಯಕ ರೈತರ ನಿರೀಕ್ಷೆಗಳು ಹಾಗೇ ಇವೆ.



ಈ ಹೋರಾಟ ರಾಜ್ಯಮಟ್ಟದಲ್ಲಿ ಸುದ್ದಿಯಾಗುತ್ತಲೇ ದೇವೇಗೌಡರು ದೌಡಾಯಿಸಿ ಬಂದರು. ಒಟ್ಟಾರೆ ಹೋರಾಟದ ತೀವ್ರತೆಗೆ ಅಂಜಿದ ನಿರಾಣಿ ತಾನು ಕಬಳಿಸಿರುವ 170 ಎಕರೆಯನ್ನು ಮರಳಿ ರೈತರಿಗೆ ಕೊಡುವುದಾಗಿ ಘೋಷಿಸಿದ್ದಾನೆ. ಈತ ಈ ಹಿಂದೆಯೂ ಲೆಕ್ಕವಿಲ್ಲದಷ್ಟು ಸಲ ಇಂಥ ಘೋಷಣೆ ಮಾಡಿ ಬಡವರ ಮೇಲೇರಿ ಹೋಗಿದ್ದರಿಂದ ರೈತರ್ಯಾರೂ ಆತನನ್ನು ನಂಬುತ್ತಿಲ್ಲ.

ಪಕ್ಕಾ ಕ್ರಿಮಿನಲ್ ಬುದ್ಧಿಯ ನಿರಾಣಿ ಈ ...ತಿಯದ್ದೊಂದು ಬಹಿರಂಗ ಘೋಷಣೆ ಮಾಡಿದ ಬೆನ್ನಿಗೆ ಮುಧೋಳ ಐಬಿಯಲ್ಲೊಂದು ಸಂಚು ಹೆಣೆದಿದ್ದ. ...ಡಿಎಸ್‌ನ ನ್ಯಾಮಗೌಡ, ವಾಸನ್ನ ದೇಸಾಯಿ, ಕಾರಜೋಳನ ಟೀಮು ನಿರಾಣಿ ನೇತೃತ್ವದಲ್ಲಿ ರೈತ ಮುಖಂಡರ ಸಭೆ ...ಯುವ ನಾಟಕ ನಡೆಯಿತು. ರಾಯಣ್ಣ ಹಳವಾಳ ಮುಂತಾದ ಸೋಕಾಲ್ಡ್ ನಾಯಕರು ...ತರ ಮುಖಂಡರ ಪೋಸಿನಲ್ಲಿ ಜಮೆಯಾದದ್ದೇ ಪಕ್ಕಾ ವ್ಯವಹಾರ ನಡೆದು ಹೋಯ್ತು.




ರಾಯಣ್ಣ


... ರೈತರೆತ್ತಿದ ಸಮಸ್ಯೆಗಳ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲದೆ ಈ ದರಿದ್ರ ನಾಯಕರು ...ರಣಿ ಅಂತ್ಯ' ಅಂತ ಸುದ್ದಿ ಸುರಿಸಿದವು. ಬರಗೆಟ್ಟ ಕೆಲ ಪತ್ರಿಕೆಗಳು ಅದನ್ನೇ ಮೊಗೆದು ...ಸ್ತರವಾಗಿಸಿದವು. ಆದರೆ ನಿಜವಾದ ರೈತರು ಮಾತ್ರ ಧರಣಿಯಿಂದ ಹಿಂದೆ ಸರಿದಿಲ್ಲ.

... ರಾಯಣ್ಣ ಹಳವಾಡೆಯೆಂಬ ಐನಾತಿ ಹಲವಾರು ರಾಜಕೀಯ ಅಧಿಕಾರದ ...ಯಿಟ್ಟುಕೊಂಡವನು. ಎಂಎಲ್‌ಸಿ ಸೀಟಿಗೂ ಆಕಾಂಕ್ಷಿಯಾಗಿರುವವನು. ಅದಕ್ಕೆಲ್ಲ ...ಗಾಲಾಕುತ್ತಿದ್ದದ್ದು ನಿರಾಣಿ. ಅದರಿಂದಾಗಿಯೇ ನಿರಾಣಿ ವಿರುದ್ಧದ ಹೋರಾಟದಲ್ಲಿ ...ರಿಕೊಂಡು ನಾಯಕನೆಂಬಂತೆ ಬಿಂಬಿಸಿಕೊಂಡಿದ್ದ.

... ಇಂಥವನು ನಿರಾಣಿಯ ಬಿಡ್ಡಕ್ಕೆ ಹೇಗೆ ಬಿದ್ದ ಎಂಬುದು ಮುಖ್ಯ ಪ್ರಶ್ನೆ. ಈ ಬಗ್ಗೆ ಹುಡುಕಾಡಿದರೆ ...ದಣ್ಣನನ್ನು ಯಾವುದಾದರೊಂದು ನಿಗಮಕ್ಕೆ ಅಧ್ಯಕ್ಷನನ್ನಾಗಿಸುವುದಾಗಿ ನಿರಾಣಿ ಭರವಸೆ ನೀಡಿದ್ದಾನೆಂಬ ಮಾತುಗಳು ...ಕೇಳಿಬರುತ್ತಿವೆ. ಈ ರೀತಿ ತನ್ನ ತೆವಲಿಗೆ ರೈತರ ಬದುಕನ್ನೇ ಬಲಿ ಬೇಳಿಸಿದ, ಹೋರಾಟವನ್ನು ದಿಕ್ಕೆಡಿಸಿದ ...ಯಣ್ಣನಂಥವರಿಗೆ ಯಾವ ಶಿಕ್ಷೆಯಾಗಬೇಕು?



ಯಜುರ್ ಮಂದಿರದ ರಹಸ್ಯ!



ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ಭಗವತಿಯ ಪ್ರೊಟೋಕಾಲ್ ಕಾರು ಮಾರ್ಚ್ 28ರಿಂದ ಜೂನ್ 17ರ ಮಧ್ಯೆ ಕಮ್ಮಿಯೆಂದರೂ ಹದಿನೈದು ಬಾರಿ ಕೋಡಿಕೊಂಡ ಚೆಕ್‌ಪೋಸ್ಟನ್ನು ದಾಟದೆಯೆಂದರೆ ಪುಟ್ಟ ಪರ್ತಿಯ ದುಡ್ಡು ಅಷ್ಟೊಂದು ಸಾರಿ ಬೆಂಗಳೂರಿಗೆ ರವಾನೆಯಾಗಿದೆ!

ಮಾರ್ಚ್ 28 ಭಗವಾನ್ ಸತ್ಯ ಸಾಯಿಯನ್ನು ಪುಟ್ಟ ಪರ್ತಿಯ ಸಾಯಿ ಆಸ್ಪತ್ರೆಗೆ ಸೇರಿಸಿದ ದಿನ. ಜೂನ್ 17 ಯಜುರ್ ಮಂದಿರದ ಬಾಗಿಲನ್ನು ತೆರೆದ ದಿನ. ಅಂದರೆ ಈ 81 ದಿನಗಳ ಅವಧಿಯಲ್ಲಿ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪಿ.ಎನ್. ಭಗವತಿಯವರ ಸರ್ಕಾರಿ ಕಾರು 15 ಬಾರಿ ಹಿಂದೂಪುರ-ಬಾಗೇಪಲ್ಲಿ ಅಂತರರಾಜ್ಯ ಚೆಕ್ ಪೋಸ್ಟನ್ನು ದಾಟದೆ ಮತ್ತು ಅಷ್ಟೇ ಬಾರಿ ವಾಪಸ್ಸು ಆಂಧ್ರದ ಗಡಿಯನ್ನು ಪ್ರವೇಶಿಸಿದೆ. ಸತ್ಯಸಾಯಿ ಬಾಬಾ ಅತ್ತ ಸಾವುಬದುಕಿನ ನಡುವೆ ಆಸ್ಪತ್ರೆಯ ಹಾಸಿಗೆಯಲ್ಲಿ ಬಿದ್ದು ಸೆಣಸಾಡುತ್ತಿರುವಾಗ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯ ಮೂರ್ತಿಯ ಕಾರು ಪುಟ್ಟಪರ್ತಿಯಿಂದ ಬೆಂಗಳೂರಿಗೆ ಮತ್ತು ಬೆಂಗಳೂರಿನಿಂದ ವಾಪಸ್ಸು ಪುಟ್ಟಪರ್ತಿಗೆ ಪದೇಪದೆ ಹೋಗಿ ಬರುವುದು ಮಾಡುತ್ತಿದ್ದುದ್ದಕ್ಕೆ ಮೂಲ ಕಾರಣವೊಂದಿದೆ.

ಅದು ಯಜುರ್ ಮಂದಿರದ ರಹಸ್ಯ!

ರತ್ನಗಿರಿ ರಹಸ್ಯ, ರಾಜದುರ್ಗದ ರಹಸ್ಯ ಇತ್ಯಾದಿ ವಿಠಲಾಚಾರ್ಯನ ಸಿನಿಮಾದಂತೆ ಚಂದಮಾಮ ಕತೆಗಳಂತೆ ಮಂತ್ರವಾದಿಯ ಪ್ರಾಣ ಮತ್ತು ನಿಧಿ ಸಪ್ತಸಾಗರದಾಚೆಯ ದ್ವೀಪದಲ್ಲೋ, ದ್ವೀಪದ ಗುಹೆಯೊಳಗೋ ಅಥವಾ ಆ ಗುಹೆಯೊಳಗಿರುವ ಗಿಣಿಯ ಪ್ರಾಣದೊಳಗೋ ಇರುವಂತೆ ಬಾಬಾ ಮರ್ಮವಿದ್ದುದ್ದೇ ಯಜುರ್ ಮಂದಿರದಲ್ಲಿ.

ರತನ್ ಟಾಟಾ ಬಂದ!

ಪ್ರಶಾಂತಿ ನಿಲಯದ ಗರ್ಭಗುಡಿಯಂತಿದ್ದ ಯಜುರ್ ಮಂದಿರವೆಂದರೆ ಅದು ಬಾಬಾ ಅಂತಃಪುರ. ಬಾಬಾ ಮಲಗುತ್ತಿದ್ದದ್ದು, ವಾಸಿಸುತ್ತಿದ್ದದ್ದು ಮತ್ತು ತನ್ನ ಪರಮಾಪ್ತರ ಜೊತೆ ಮಾತನಾಡುತ್ತಿದ್ದು ಇದೇ ಯಜುರ್ ಮಂದಿರದಲ್ಲಿ. ಜೂನ್ 17ರ ಶುಕ್ರವಾರ ಅಧಿಕೃತವಾಗಿ ಈ ಯಜುರ್ ಮಂದಿರದ ಬಾಗಿಲನ್ನು ತೆರೆಯುತ್ತೇವೆಂದು ಸತ್ಯಸಾಯಿ ಸೆಂಟ್ರಲ್ ಟ್ರಸ್ಟ್‌ನ ಮುಖ್ಯಸ್ಥ ಮತ್ತು ಬಾಬಾ ಸಂಬಂಧಿ ಆರ್.ಜೆ.ರತ್ನಾಕರ್ ಘೋಷಿಸುತ್ತಿದ್ದಂತೆ ಆತನ ನಾಪತ್ತೆಯಾಗಿದ್ದ ಬಾಬಾ ನಿಕಟವರ್ತಿ ಸತ್ಯಜಿತ್ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾಗುತ್ತಾನೆ. ಯಜುರ್ ಮಂದಿರದ ಬಾಗಿಲು ತೆಗೆಯುವ ಹೊತ್ತಿಗೆ ಸತ್ಯಜಿತ್ ಜೊತೆ ಇನ್ನೂ ಒಬ್ಬ ದೈತ್ಯ ಕಾಣಿಸಿಕೊಳ್ಳುತ್ತಾನೆ. ಆತ ದೇಶದ ಮಹಾನ್ ಉದ್ದಿಮೆಪತಿ ರತನ್ ಟಾಟಾ.

2011ರ ಏಪ್ರಿಲ್ 24ರಂದು ಬಾಬಾ ಕಣ್ಮುಚ್ಚುವುದಕ್ಕೂ ಇದ್ದಕ್ಕಿದ್ದಂತೆ ಪ್ರಶಾಂತಿ ನಿಲಯದ ಸುತ್ತ ಚಿತ್ರವಿಚಿತ್ರ ಘಟನಾವಳಿಗಳು ನಡೆಯುವುದಕ್ಕೂ ಯಾವುದೋ ನಿಗೂಢ ಸಂಬಂಧವೊಂದು ಥಳುಕು ಹಾಕಿಕೊಂಡಂತಿದೆ. ನಾಪತ್ತೆಯಾಗಿದ್ದ ಸತ್ಯಜಿತ್ ಏಕಾಏಕಿ ಉದ್ದಿಮೆ ದೈತ್ಯ ರತನ್ ಟಾಟಾ ಜೊತೆ ಏಕೆ ಪ್ರತ್ಯಕ್ಷನಾದ? ಅದೂ ಯಜುರ್ ಮಂದಿರದ ಬಾಗಿಲು ತೆರೆಯುವಾಗಲೇ ಏಕೆ ಹಾಜರಾದ! ಯಜುರ್ ಮಂದಿರದ ಬಾಗಿಲನ್ನು ರತನ್ ಟಾಟಾ ಸಮ್ಮುಖದಲ್ಲೇ ತೆರೆದಿದ್ದೇಕೆ? ಅದಕ್ಕೂ ಮುನ್ನ ಹಿರಿಯ ಕಾಂಗ್ರೆಸ್ ನಾಯಕ ವಿಲಾಸ್‌ರಾವ್ ದೇಶಮುಖ್ ಏಕೆ ವೈಟ್‌ಫೀಲ್ಡ್‌ಗೆ ಬಂದು ಹೋದರು? ರಾಜ್ಯ ಬಿಜೆಪಿಯ ಖಜಾಂಚಿ ಲೆಹರ್‌ಸಿಂಗ್ ಈ ಮಧ್ಯೆ ಐದಾರು ಬಾರಿ ಪುಟ್ಟಪರ್ತಿಗೆ ಹೋಗಿದ್ದೇಕೆ? ಯಜುರ್ ಮಂದಿರದ ಅಪಾರ ನಿಧಿಗೂ ಆಂಧ್ರ-ಕರ್ನಾಟಕದ ಗಡಿಯ ಕೋಡಿಕೊಂಡ ಚೆಕ್‌ಪೋಸ್ಟಿಗೂ ಏನು ಸಂಬಂಧ? ಏಕೆ ಬಸ್ಸು ಕಾರುಗಳಲ್ಲಿ ಮೂಟೆಗಟ್ಟಲೇ ದುಡ್ಡು ಬೆಂಗಳೂರಿಗೇ ಬರುತ್ತಿದೆ? ಅಥವಾ ಬೆಂಗಳೂರಿಗೆ ಬರುವ ದುಡ್ಡನ್ನಷ್ಟೇ ಆಂಧ್ರದ ಕಾಂಗ್ರೆಸ್ ಸರ್ಕಾರ ಹಿಡಿದು ಹಾಕುತ್ತಿದೆಯಾ? ಸತ್ಯಸಾಯಿ ಟ್ರಸ್ಟ್‌ನ ಬೋರ್ಡ್ ಇಲ್ಲದ ವಾಹನಗಳನ್ನಷ್ಟೇ ಆಂಧ್ರ ಪೊಲೀಸರು ಹಿಡಿಯುತ್ತಿದ್ದಾರಾ? ಅಧಿಕೃತವಾಗಿ ನಿವೃತ್ತ ಸುಪ್ರೀಂ ನ್ಯಾಯಮೂರ್ತಿ ಭಗವತಿಯ ಗೂಟದ ಕಾರಿನಲ್ಲೇ ದುಡ್ಡು ಸಾಗಿಸಲಾಯ್ತೇ? ಹಾಗೇ ಸಾಗಿಸಲ್ಪಟ್ಟ ಚಿನ್ನಾಭರಣಗಳ ಪೈಕಿ ಎರಡು ಲಾರಿಗಳು ತುಂಬುವಷ್ಟನ್ನು ಬೆಂಗಳೂರಿಗೆ ಸಾಗಿಸಿದ್ದು ಯಾರು? ಏಕೆ ಬೆಂಗಳೂರಿಗೆ ಸಾಗಿಸುತ್ತಿದ್ದ ಬಾಬಾ ದುಡ್ಡನ್ನಷ್ಟೇ ಆಂಧ್ರ ಸರ್ಕಾರ ಹಿಡಿದು ಹಾಕುತ್ತಿದೆ.

ಆರು ವಜ್ರ ಕಿರೀಟಗಳು

ಇಂಥ ಅಸಂಖ್ಯಾತ ಪ್ರಶ್ನೆಗಳ ಹುತ್ತವಾಗಿದ್ದ ಯಜುರ್ ಮಂದಿರದ ಬಾಗಿಲು ತೆರೆದದ್ದು 2011 ಜೂನ್ 17ರ ಶುಕ್ರವಾರದಂದು. ಅದು ಸರಿಸುಮಾರು ನಲವತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲ್ಪಟ್ಟ ಐಷಾರಾಮಿ ಅರಮನೆ. ಇಡೀ ಯಜುರ್ ಮಂದಿರವೇ ಹವಾ ನಿಯಂತ್ರಣಕ್ಕೊಳಪಟ್ಟಿದೆ. 2006ರಲ್ಲಿ ಅದರ ಉದ್ಘಾಟನೆ ಯಾಗುವ ಹೊತ್ತಿಗೆ ಅಮೆರಿಕನ್ ಡಾಲರ್‌ಗಳ ಲೆಕ್ಕದಲ್ಲಿ ಅದನ್ನು ಹತ್ತು ಮಿಲಿಯನ್ ಡಾಲರ್‌ಗಳ ಸೌಧವೆಂದು ಲೆಕ್ಕ ಹಾಕಲಾಗಿತ್ತು, ಇಟಲಿಯಿಂದ ವಿಶೇಷವಾಗಿ ತರಿಸಿದ ಶಿಲಾ ನೆಲಹಾಸನ್ನು ಬಳಸಲಾಗಿತ್ತು, ಬಾಬಾ ಭೋಜನಾ ಶಾಲೆಯ ಟೇಬಲ್ಲು, ಊಟದ ತಟ್ಟೆ, ಲೋಟ, ಚಮಚ, ವಾಷ್‌ಬೇಸನ್ನಿನ ಟ್ಯಾಪು ಎಲ್ಲವನ್ನೂ ಚಿನ್ನದಿಂದ ನಿರ್ಮಿಸಲಾಗಿತ್ತು,

ಚಿತ್ತಾರದ ಕನ್ನಡಿಗಳು ತರಹೇವಾರಿಯ ಸುಗಂಧ ದ್ರವ್ಯಗಳು, ಬಂಗಾರದ ತಟ್ಟೆಗಳು, ಚಿನ್ನದ ಕೈಗಡಿಯಾರಗಳು, ಚಿನ್ನದ ಚೈನುಗಳು, ಗಣೇಶ ಮತ್ತು ಕೃಷ್ಣನ ಚಿನ್ನದ ಗೊಂಬೆಗಳು, ಪುಟ್ಟಪುಟ್ಟ ಚಿನ್ನದ ಲಕ್ಷ್ಮೀ, ನಾಗಕನ್ನಿಕೆಯರು, ಶಿವನ ಮೂರ್ತಿಗಳು, ಐನೂರು ಜೊತೆ ಪಾದರಕ್ಷೆಗಳು, ಅವುಗಳ ಪೈಕಿ ಚಿನ್ನದ ಒಂದು ಜೊತೆ ಷೂ, ಆರು ವಜ್ರಖಚಿತ ಕಿರೀಟಗಳು, ನೆಕ್ಲೆಸ್‌ಗಳು, ರಾಶಿರಾಶಿ ಚಿನ್ನದ ಆಭರಣಗಳು, ನೂರು ಸೂಟ್‌ಕೇಸ್‌ಗಳ ತುಂಬ ಕ್ಯಾಮೆರಾಗಳು, ಗೋಡೆಗಡಿಯಾರಗಳು, ಕೈಗಡಿಯಾರಗಳು, 750 ರೇಷ್ಮೆ ಜರತಾರಿಗಳು, ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಬಂದಿದ್ದ ದುಬಾರಿ ರೇಷ್ಮೆ ವಸ್ತ್ರಗಳು, ಭಕ್ತರು ಉಡುಗೊರೆಯಾಗಿ ನೀಡಿದ್ದ ಕವರುಗಳ ರಾಶಿ ರಾಶಿ; ಹೀಗೆ ಯಜುರ್ ಮಂದಿರವೆಂಬುದು ಇಡೀ ಬಾಬಾ ಸಾಮ್ರಾಜ್ಯದ ಗರ್ಭಗುಡಿ ಮತ್ತು ಖಜಾನೆಯಂತಿತ್ತು,


ಬಾಬಾ ಹಾಸಿಗೆಯೇ ಹದಿನೈದು ಅಡಿ ಉದ್ದ ಮತ್ತು ಹದಿನೈದು ಅಡಿ ಅಗಲವಿತ್ತು, ಅದರ ಮಂಚದ ಅಡಿಗೆ ವಿವಿಧ ಗಾತ್ರದ ಅಸಂಖ್ಯಾತ ಕಪಾಟುಗಳಿದ್ದವು. ಇಡೀ ಬಾಬಾ ಬೆಡ್‌ರೂಮಿನ ತುಂಬ ವಿವಿಧ ಗಾತ್ರದ ಅಲ್ಮೇರಾಗಳು, ಕಬ್ಬಿಣದ ಪೆಂಡಾರಿಗಳು ವಿಶಿಷ್ಟ ಲಾಕರ್‌ಗಳಿದ್ದ ಗಾದ್ರೇಜ್ ಬೀರುಗಳೇ ತುಂಬಿದ್ದವು. ಅವುಗಳ ತುಂಬಾ ಚಿನ್ನಾಭರಣಗಳ ರಾಶಿ. ಬಾಬಾ ವಾರ್ಡ್ ರೋಬ್ ಅಂತೂ ಯಾವ ಮಹಾರಾಜನಿಗೂ ಮಿಗಿಲಾಗಿತ್ತು, ಷೂಗಳನ್ನು ಇಡಲೆಂದೇ ಪ್ರತ್ಯೇಕ ಅಲ್ಮೇರಾ ಅನ್ನು ಇಡಲಾಗಿತ್ತು, ಹೇರ್‌ಸ್ಪ್ರೇ, ಡ್ರೈಫ್ರೂಟ್ಸ್, ದುಬಾರಿ ಬಿಸ್ಕತ್ತುಗಳನ್ನು ಇಡಲೆಂದೇ ವಿಶಿಷ್ಟ ಕಪಾಟುಗಳಿದ್ದವು. ಬಹುಶಃ ಇನ್ನೂ ಮೂರು ಕಬ್ಬಿಣದ ಪೆಟ್ಟಿಗೆಗಳಲ್ಲಿ ವಜ್ರ ವೈಢೂರ್ಯಗಳನ್ನು ಇಟ್ಟಿದ್ದರೇನೋ?

6 ತಿಂಗಳ ಸಂಪತ್ತು

ಜೂನ್ 17ರ ಶುಕ್ರವಾರ ಯಜುರ್ ಮಂದಿರವನ್ನು ಪ್ರಥಮ ಬಾರಿಗೆಂಬಂತೆ ತೆರೆದಾಗ ಅಲ್ಲಿದ್ದ ದುಡ್ಡನ್ನು ಎಣಿಸಲೆಂದೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಇಪ್ಪತ್ತು ಮಂದಿ ಅಧಿಕಾರಿಗಳನ್ನು ನೇಮಿಸಲಾಗಿತ್ತು, ಕಂತೆಗಳ ರಾಶಿಯಿದ್ದ ನೋಟುಗಳನ್ನು ಎಣಿಸಲೆಂದೇ ಮೂರು ಯಂತ್ರಗಳನ್ನು ತರಿಸಲಾಗಿತ್ತು, ದುಡ್ಡನ್ನು ಎಣಿಸುವುದಕ್ಕೆ 36 ಗಂಟೆಗಳು ಹಿಡಿದವು. ಇದಲ್ಲದೇ ಪ್ರಪಂಚದ ಬೇರೆ ಬೇರೆ ದೇಶಗಳ ಕರೆನ್ಸಿಗಳ ರಾಶಿಯೇ ಇತ್ತು, ಸಿಕ್ಕ ಒಟ್ಟು ಚಿನ್ನದ ಮೊತ್ತವೇ 98 ಕೆ.ಜಿ.ಯಷ್ಟಾಗಿತ್ತು, ಬೆಳ್ಳಿಯ ತಟ್ಟೆ, ಆಭರಣಗಳೆಲ್ಲ ಸೇರಿದರೆ ಅದೇ 307 ಕೆ.ಜಿ.ಯಷ್ಟಿತ್ತು. ನಗದು ಹನ್ನೊಂದೂವರೆ ಕೋಟಿಯಷ್ಟಿತ್ತು,

ಒಂದೇ ಮಾತಲ್ಲಿ ಹೇಳಬೇಕೆಂದರೆ ಯಜುರ್ ಮಂದಿರವೆಂಬುದು ಬಾಬಾ ಸಾಮ್ರಾಜ್ಯದ ಪಾಲಿಗೆ ಮಿನಿ ಸ್ವಿಸ್ ಬ್ಯಾಂಕಿನಂತಿತ್ತು. ಯಾರ ದುಡ್ಡೋ? ಯಾವ ಕಾರಣಕ್ಕೆಂದು ಬಚ್ಚಿಟ್ಟಿದ್ದ ನಿಧಿಯೋ? ಚಿನ್ನದ ಇಟ್ಟಿಗೆಗಳೇ ರಾಶಿರಾಶಿ ಬಿದ್ದಿದ್ದವು. ಒಂದು ಮೂಲದ ಪ್ರಕಾರ ಪ್ರಶಾಂತಿ ನಿಲಯಕ್ಕೆ ಬರುತ್ತಿದ್ದ ಕಾಣಿಕೆ, ದುಡ್ಡು ಒಡವೆ, ನಿಧಿ ಎಲ್ಲವನ್ನೂ ಬಾಬಾ ಪುಟ್ಟಪರ್ತಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿಡುತ್ತಿದ್ದರು. ಆದರೆ 2010ರ ನವೆಂಬರ್ ತಿಂಗಳಿಂದ ಇದ್ದಕ್ಕಿದ್ದಂತೆ ಬಾಬಾ ಆರೋಗ್ಯ ಹದಗೆಟ್ಟತ್ತಲ್ಲ ಆಗಿನಿಂದ ಬಂದ ಕಾಣಿಕೆ, ದುಡ್ಡನ್ನು ಯಜುರ್ ಮಂದಿರದಲ್ಲೇ ಇಡಬೇಕಾಗಿ ಬಂತು. ಅದರರ್ಥ ಇವತ್ತಲ್ಲಾ ನಾಳೆ ಬಾಬಾ ಆರೋಗ್ಯ ಸರಿಹೋಗುವುದರಿಂದ ಬಂದ ಕಾಣಿಕೆಯೆಲ್ಲ ನಿಧಾನವಾಗಿ ಬ್ಯಾಂಕಿಗೆ ಜಮೆ ಮಾಡಲೆಂದು ಎತ್ತಿಟ್ಟದ್ದೇ ಈ ಪಾಟಿ ಸಂಪತ್ತಾಗಿತ್ತು! ಹಾಗೊಮ್ಮೆ ಇದು ನಿಜವೇ ಆಗಿದ್ದರೆ ಇನ್ನು ಶುರುವಿನಿಂದ ಭಕ್ತರು ಕೊಟ್ಟದ್ದು ಹುಂಡಿಗೆ ಬಂದಿದ್ದು ಇನ್ನೆಷ್ಟಾಗಬೇಡ!

ಯಜುರ್ ಮಂದಿರದ ಮಹಿಮೆಯೇ ಹೀಗಿತ್ತೆಂದ ಮೇಲೆ ಅದನ್ನು ತೆರೆದ ಸಂದರ್ಭ, ಇದ್ದ ವ್ಯಕ್ತಿಗಳು, ಸಿಕ್ಕ ವಸ್ತುಗಳು ಇತ್ಯಾದಿಗಳ ಕತೆಯೇ ಇನ್ನು ನಿಗೂಢಗೊಳ್ಳುತ್ತದೆ. ಸುಪ್ರಿಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಹಾಗೂ ಟ್ರಸ್ಟ್‌ನ ಸದಸ್ಯ ಪಿ.ಎನ್.ಭಗವತಿ, ಟ್ರಸ್ಟ್ ಸೆಕ್ರೆಟರಿ ಕೆ.ಚಕ್ರವರ್ತಿ, ಮತ್ತೊಬ್ಬ ಟ್ರಸ್ಟಿ ಮತ್ತು ಚಾರ್ಟರ್ಡ್ ಅಕೌಂಟೆಂಟ್ ಇಂದೂಲಾಲ್ ಷಾ, ಮಗದೊಬ್ಬ ಟ್ರಸ್ಟಿ ಶ್ರೀನಿವಾಸನ್ ಮತ್ತು ಬಾಬಾ ಪರಮಾಪ್ತ ಹಾಗೂ ಸಹೋದರ ಜಾನಕಿರಾಮ್‌ನ ಪುತ್ರ ಆರ್.ಜೆ.ರತ್ನಾಕರ್ ಮುಂತಾದವರ ಸಮ್ಮುಖದಲ್ಲೇ ಯಜುರ್ ಮಂದಿರ ಬಾಗಿಲು ತೆರೆಯ



ಪರಮಾಪ್ತ ಸತ್ಯಜಿತ್



ಟ್ರಸ್ಟಿ ರತ್ನಾಕರ



ಜಸ್ಟೀಸ್ ಭಗವತಿ

ಭ್ರಷ್ಟ ಟ್ರಸ್ಟಿ ರತ್ನಾಕರ್, ಸ್ವಾರ್ಥಿ ಶ್ರೀನಿವಾಸನ್ ಕಪಿಮುಷ್ಟಿಗೆ ಸಾಯಿ ಟ್ರಸ್ಟ್

ಒಂದಾನೊಂದು ಕಾಲಕ್ಕೆ ಸತ್ಯಸಾಯಿ ಸೆಂಟ್ರಲ್ ಟ್ರಸ್ಟ್‌ನ ಮುಖ್ಯಸ್ಥರಾಗಿದ್ದ ಪಿ.ಎನ್. ಭಗವತಿ ಇದ್ದಕ್ಕಿದ್ದಂತೆ ಟ್ರಸ್ಟಿಗೆ ರಾಜೀನಾಮೆ ಸಲ್ಲಿಸಲು ಮುಂದಾಗಿದ್ದೂ ಕಾರಣವಿದೆ.


ಅದು ಮತ್ತೊಬ್ಬ ಟ್ರಸ್ಟಿ ವೇಣು ಶ್ರೀನಿವಾಸನ್‌ನ ದಬ್ಬಾಳಿಕೆ. ಬಾಬಾ ಬದುಕಿದ್ದಷ್ಟೂ ಕಾಲ ಟ್ರಸ್ಟಿಗಳ್ಯಾರೂ ಉಸಿರೆತ್ತಲಿಲ್ಲ, ಟ್ರಸ್ಟಿಗಳ ಪೈಕಿ ಆರ್.ಜೆ. ರತ್ನಾಕರ್ ಒಬ್ಬನೇ ಬಾಬಾ ಸಂಬಂಧಿ. ಬಾಬಾ ತಮ್ಮ ಜಾನಕಿರಾಮನ್ ಮಗನಾದ ರತ್ನಾಕರ್ ಹೇಳಿಕೇಳಿ ಟ್ರಸ್ಟಿ ಶ್ರೀನಿವಾಸನ್‌ನ ಕೈಗೊಂಬೆ. ಮಿಕ್ಕಂತೆ ಇಂದುಲಾಲ್ ಷಾ, ಕರ್ನಾಟಕದ ಹೈಕೋರ್ಟ್ ವಕೀಲ ನಾಗಾನಂದ್, ಕೆ. ಚಕ್ರವರ್ತಿ, ನ್ಯಾಯಮೂರ್ತಿ ಭಗವತಿ, ಅಮೆರಿಕದ ಸತ್ಯಸಾಯಿ ಸಂಘಟನೆಗಳ ಮುಖ್ಯಸ್ಥ ಜಾನ್ ಹಿಸ್ಲಾಪ್, ಅಂತಾರಾಷ್ಟ್ರೀಯ ಸತ್ಯಸಾಯಿ ಸಂಘಟನೆಗಳ ಅಧ್ಯಕ್ಷ ಮೈಕೇಲ್ ಗೋಲ್ಡ್ ಸ್ಟೀನ್, ಅಮೆರಿಕದ ಕುಬೇರ ಇಸಾಕ್ ಟಿಗ್ರೆಟ್ ಮುಂತಾದವರಿರುವ ಸತ್ಯಸಾಯಿ ಸೆಂಟ್ರಲ್ ಟ್ರಸ್ಟ್‌ಗೆ ಸದ್ಯ ಭಗವತಿಯೇ ಮುಖ್ಯಸ್ಥರಾದರೂ ಅಧಿಕಾರ ಸೂತ್ರಗಳಿರುವುದು ವೇಣು ಶ್ರೀನಿವಾಸನ್‌ನ ಕಪಿಮುಷ್ಟಿಯಲ್ಲಿ,

ಏಕೆಂದರೆ ಬಾಬಾ ತಮ್ಮನ ಮಗ ರತ್ನಾಕರ್‌ನನ್ನು ಶ್ರೀನಿವಾಸನ್ ಬುಟ್ಟಿಗೆ ಹಾಕಿಕೊಂಡಿದ್ದಾನೆ. ಹೀಗಾಗಿ ಬಾಬಾ ಸಂಬಂಧಿಗಳ ಪೈಕಿ ಮಿಕ್ಕವರ್‍ಯಾರನ್ನೂ ಶ್ರೀನಿವಾಸನ್ ಲೆಕ್ಕಿಸುತ್ತಿಲ್ಲ, ಯಜುರ್ ಮಂದಿರದ ಬಾಗಿಲು ತೆರೆಯುವ ವೇಳೆ ರತ್ನಾಕರ್‌ನಂತೆ ಮಿಕ್ಕ ಅನೇಕ ಬಾಬಾ ಸಂಬಂಧಿಗಳನ್ನು ಮುಂದಿಟ್ಟುಕೊಂಡೇ ಬಾಗಿಲು ತೆಗೆಯಬಹುದೆಂಬ ಸಂಬಂಧಿಗಳ ನಿರೀಕ್ಷೆ ಹುಸಿಯಾಗಿತ್ತು, ಈ ಪೈಕಿ ಪ್ರಶಾಂತಿ ನಿಲಯದ ಈಶ್ವರಮ್ಮ, ಮಹಿಳಾ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಮುಖ್ಯಸ್ಥೆ ಚೇತನಾ ರಾಜು ಬಾಬಾರ ಹಿರಿಯ ಅಕ್ಕನ ಮಗಳು. ಶುರುವಿನಿಂದಲೂ ಪ್ರಶಾಂತಿ ನಿಲಯದ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದಾಕೆ. ಸತ್ಯಜಿತ್ ಹೊರತಾಗಿ ಬಾಬಾ ಅಂತಃಪುರದಲ್ಲಿ ಸಲುಗೆಯಿದ್ದದ್ದು ಈಕೆಗೆ. ಆದರೆ ಯಜುರ್ ಮಂದಿರದ ಸಂಪತ್ತು ದೋಚಬೇಕಲ್ಲ ರತ್ನಾಕರ್‌ನನ್ನಷ್ಟೇ ಜೊತೆ ಹಾಕಿಕೊಂಡು ಶ್ರೀನಿವಾಸನ್ ಯಜೂರ್ ಮಂದಿರದ ಬಾಗಿಲು ತೆರೆಯುವ ವೇಳೆ ಬೇರೆಲ್ಲ ಸಂಬಂಧಿಗಳನ್ನು ಹೊರಗಿಟ್ಟ. ಈ ಬಗ್ಗೆ ಕೆಂಡಮಂಡಲಳಾದ ಚೇತನಾ ಎಷ್ಟೇ ಬೊಬ್ಬೆಯಿಟ್ಟರೂ ಯಜೂರ್ ಮಂದಿರದ ಸೆಕ್ಯೂರಿಟಿ ಆಫೀಸರ್ ಪ್ರಧಾನ್ ಆಕೆಯನ್ನು ಸೌಜನ್ಯಕ್ಕೂ ಒಳಬಿಡಲಿಲ್ಲ.



ಚೇತನಾ ರಾಜು ಸದ್ಯ ಟ್ರಸ್ಟ್ ವಿರುದ್ಧ ತಿರುಗಿಬಿದ್ದಿದ್ದಾಳೆ. ಬಾಬಾ ಸಂಬಂಧಿಕರಿಗೆ ಟ್ರಸ್ಟ್ ಮುಖ್ಯಸ್ಥರಿಂದ ಜೀವ ಬೆದರಿಕೆ ಇದೆಯೆಂದು ಹೇಳಿಕೆ ಕೊಟ್ಟಿದ್ದಾಳೆ. ಒಂದೆಡೆ ಬಾಬಾ ಸಂಬಂಧಿಗಳು, ಇನ್ನೊಂದೆಡೆ ಜಸ್ಟೀಸ್ ಭಗವತಿ, ಮತ್ತೊಂದೆಡೆ ಬಾಬಾನ ಪರಮಾಪ್ತ ಸತ್ಯಜಿತ್, ಮಗದೊಂದೆಡೆ ಅಸಂಖ್ಯಾತ ಭಕ್ತವೃಂದ; ಒಟ್ಟೊಟ್ಟಾಗಿ ಟ್ರಸ್ಟಿಕೂಟದ ಶ್ರೀನಿವಾಸನ್ ಮತ್ತು ರತ್ನಾಕರ್ ವಿರುದ್ಧ ಬಿದ್ದಿದೆ.

ಬಾಬಾ ಕೂಡಿಟ್ಟಿದ್ದು, ಭಕ್ತರು ಕೊಟ್ಟಿದ್ದು ಪಾಪಿಗಳ ಸೊತ್ತಾಗುವ ಕಾಲ ದೂರವಿಲ್ಲ, ಬಚ್ಚಿಟ್ಟಿದ್ದು ಪರರಿಗೆ ಕೊಟ್ಟಿದ್ದಷ್ಟೇ ತನಗೆಂಬುದು ಬಾಬಾ ವಿಷಯದಲ್ಲೂ ನಿಜವಾಗಿದೆ.




ಸಿಕ್ಕಿಬಿದ್ದ ರೊಕ್ಕ


ಲಾಗಿತ್ತು, ಇಂಥ ಟ್ರಸ್ಟಿಗಳ ಹೊರತಾಗ್ಯೂ ಹಾಜರಿದ್ದ ಇನ್ನಿಬ್ಬರು ಆಸಾಮಿಗಳೆಂದರೆ ಓರ್ವ ಸತ್ಯಜಿತ್ ಮತ್ತು ಇನ್ನೋರ್ವ ರತನ್ ಟಾಟಾ!

ಸತ್ಯಜಿತ್‌ನ ನಂಟು


ಏಕೆಂದರೆ ಬಾಬಾ ಅಂತಃಪುರಕ್ಕೆ ಪ್ರವೇಶವಿದ್ದ ಏಕೈಕ ವ್ಯಕ್ತಿ ಸತ್ಯಜಿತ್. ಯಜುರ್ ಮಂದಿರವೇ ನಿಗೂಢ. ಇನ್ನು ಅದರೊಳಗಿನ ಬಾಬಾ ಬೆಡ್‌ರೂಮ್ ಇನ್ನೆಷ್ಟು ನಿಗೂಢವಾಗಿರಬೇಡ? ಅಲ್ಲಿದ್ದ ಅನೇಕ ಕಂಪ್ಯೂಟರ್‌ಗಳಲ್ಲಿ ಬಾಬಾರ ಇಡೀ ಹಣಕಾಸಿನ ವ್ಯವಹಾರದ ದಾಖಲೆಗಳಿದ್ದವು ಮತ್ತು ಬಾಬಾ ಹಣಕಾಸಿನ ಅಷ್ಟೂ ವ್ಯವಹಾರ ಅವರ ಕಂಪ್ಯೂಟರ್ ವಿವರಗಳ ಸಮಗ್ರ ಪರಿಚಯವಿದ್ದುದ್ದೇ ಸತ್ಯಜಿತ್‌ಗೆ. ಇಂಥ ಸತ್ಯಜಿತ್ ಬಾಬಾ ಸತ್ತಿದ್ದೇ ಪುಟ್ಟಪರ್ತಿ ಬಿಟ್ಟು ಮುಂಬೈ ಸೇರಿಕೊಂಡಿದ್ದ. ಇಂಥವನನ್ನು ಅದ್ಹೇಗೋ ಮಸ್ಕಾ ಹೊಡೆದು ಕರೆತಂದದ್ದು ರತನ್ ಟಾಟಾ.




ಲೆಹರ್ ಸಿಂಗ್




ಆದಿಕೇಶವುಲು



ರತನ್ ಟಾಟಾ



ಪವಾರ್



ದೇಶಪಾಂಡೆ

ಯಾವತ್ತು ಯಜುರ್ ಮಂದಿರದ ಬಾಗಿಲು ತೆರೆದು ಚಿನ್ನ-ಬೆಳ್ಳಿಯ ರಾಶಿ ರಾಶಿಯೇ ಬೆಳಕಿಗೆ ಬಂತೋ, ಸಹಜವಾಗೇ ಅದು ಕೇಂದ್ರದ ಇನ್‌ಕಂ ಟ್ಯಾಕ್ಸ್ ಇಲಾಖೆಯ ಕಣ್ಣಿಗೆ ಬಿದ್ದಿದೆ. ಸತ್ಯಜಿತ್ ಮತ್ತು ಬಾಬಾ ಅಣ್ಣನ ಮಗ ಆರ್.ಜೆ.ರತ್ನಾಕರ್‌ರ ಮೊಬೈಲ್, ಲ್ಯಾಂಡ್‌ಲೈನ್‌ಗಳನ್ನು ಸದ್ದಿಲ್ಲದೆ ಟ್ಯಾಪ್ ಮಾಡಿದ್ದಾರೆ. ಸದ್ಯ ಆಂಧ್ರದಲ್ಲಿರುವುದು ಕಾಂಗ್ರೆಸ್ ಸರ್ಕಾರ. ಮಾರ್ಚ್ 28ರಂದು ಪುಟ್ಟಪರ್ತಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬಾಬಾರನ್ನು ದಾಖಲು ಮಾಡಿದ್ದೇ ತಡ, ದೇಶದಾದ್ಯಂತ ರಾಜಕಾರಣಿಗಳು, ಕೈಗಾರಿಕೋದ್ಯಮಿಗಳ ಹಿಂಡೇ ಪುಟ್ಟಪರ್ತಿಯತ್ತ ಧಾವಿಸಲಾರಂಭಿಸಿದೆ. ಈ ಪೈಕಿ ಬಹುತೇಕರು ಭೇಟಿಯಾಗುತ್ತಿದ್ದದ್ದು ಸತ್ಯಜಿತ್‌ನನ್ನು!

ಹೀಗೆ ಸತ್ಯಜಿತ್‌ನನ್ನು ಕಂಡ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ವಿಲಾಸ್ ರಾವ್ ದೇಶಮುಖ್ ಆ ನಂತರ ಬೆಂಗಳೂರಿನ ವೈಟ್‌ಫೀಲ್ಡಿನಲ್ಲಿ ಪ್ರತ್ಯಕ್ಷರಾದರು. ಹೀಗೆ ದೇಶಮುಖ್ ಬೆಂಗಳೂರಿನ ವೈಟ್‌ಫೀಲ್ಡಿನ ಬೃಂದಾವನದಲ್ಲಿ ಕಾಣಿಸುವ ಹೊತ್ತಿಗಾಗಲೇ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಭಗವತಿಯವರ ಪ್ರೊಟೋಕಾಲ್ ಕಾರು ನಾಲ್ಕೈದು ಬಾರಿ ಬೆಂಗಳೂರಿಗೆ ಬಂದುಹೋಗಿತ್ತು.

ಅದು ಪ್ರೊಟೋಕಾಲ್ ಕಾರಾದ್ದರಿಂದ ಆಂಧ್ರ-ಕರ್ನಾಟಕದ ಗಡಿ ಚೆಕ್‌ಪೋಸ್ಟ್‌ನ್ನು ಯಾರೂ ಮುಟ್ಟುವಂತಿರಲಿಲ್ಲ, ಇನ್ನೂ ವಿಶೇಷವೆಂದರೆ ಬಾಬಾ ಕಾಯಿಲೆ ಬಿದ್ದು ಆಸ್ಪತ್ರೆಗೆ ದಾಖಲಾಗುವ ಹೊತ್ತಿಗಾಗಲೇ ಕೇಂದ್ರ ಮತ್ತು ಆಂಧ್ರದ ಸರ್ಕಾರಿ ವರಿಷ್ಠರಿಂದ ಪುಟ್ಟಪರ್ತಿ ಆಶ್ರಮದ ಯಾವುದೇ ವಾಹನ ತಪಾಸಿಸದಂತೆ ಪೊಲೀಸರಿಗೆ ಆದೇಶ ರವಾನೆಯಾಗಿತ್ತು, ಇನ್‌ಕಮ್ ಟ್ಯಾಕ್ಸ್ ಮೂಲಗಳೇ ಹೇಳುವಂತೆ ಕೇಂದ್ರ ಮಂತ್ರಿ ಶರದ್ ಪವಾರ್ ಒಬ್ಬರೇ ಪುಟ್ಟಪರ್ತಿ ಬಾಬಾ ಬಳಿ ಸಾವಿರ ಕೋಟಿಯಷ್ಟಾಗುವಷ್ಟು ಹಣವಿಟ್ಟಿದ್ದರು!

ಬ್ಲಾಕ್ ಮನಿ ಕುಬೇರರು

ಬಿಜೆಪಿ ನಾಯಕರಾಗಿದ್ದ ಪ್ರಮೋದ್ ಮಹಾಜನ್, ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ್ ಜೋಷಿ, ಕಾಂಗ್ರೆಸ್‌ನ ವೈ.ಎಸ್.ರಾಜಶೇಖರರೆಡ್ಡಿ, ಲಿಕ್ಕರ್ ದೊರೆ ಮತ್ತು ಆಂಧ್ರದ ಸಂಸದ ಆದಿಕೇಶವುಲು, ವಿಟ್ರಿಯಾ ಹೋಟೆಲ್ ಮತ್ತು ಸನ್‌ರೇ ಕಂಪ್ಯೂಟರ್ಸ್ ಮುಖ್ಯಸ್ಥ ಚಿನ್ನಸ್ವಾಮಿರಾಜು, ಈತನ ಅಣ್ಣ ಕುಪ್ಪರಾಜು, ರೇವಾ ಕಾಲೇಜು ದೊರೆ ಶಾಮರಾಜು, ಚಿಕ್ಕಪೇಟೆಯ ಪ್ರಮುಖ ಹವಾಲಾ ದೊರೆ ಮತ್ತು ಲೆಹರ್‌ಸಿಂಗ್‌ನ ಪರಮಾಪ್ತ ಮುರಳಿ ಸರಾಫ್, ಚೈನಾ ರೇಷ್ಮೆ ಸ್ಮಗ್ಲರ್ ಪಟೇಲ್ ಅಂಗಾಡಿಯಾ, ಜೈಪುರಿಯಾ, ಸ್ಕಿಲ್‌ಗೇಮ್ ಖದೀಮ ಶಿವಾನಿ, ಕಾಂಗ್ರೆಸ್ ನಾಯಕ ಆರ್.ವಿ.ದೇಶಪಾಂಡೆ, ಬಿಜೆಪಿ ರಾಷ್ಟ್ರನಾಯಕ ವೆಂಕಯ್ಯನಾಯ್ಡು, ಅರುಣ್ ಜೇಟ್ಲಿ ಹೀಗೆ ದೇಶದ ಅಸಂಖ್ಯಾತ ರಾಜಕಾರಣಿಗಳ ಪಾಲಿಗೆ ಪುಟ್ಟಪರ್ತಿಯೇ ಲೋಕಲ್ ಸ್ವಿಸ್ ಬ್ಯಾಂಕ್‌ನಂತಿತ್ತು, ಭ್ರಷ್ಟ ಐಎಎಸ್ ಅಧಿಕಾರಿಗಳು, ಸುಪ್ರೀಂ ಕೋರ್ಟ್ ಜಡ್ಜುಗಳು, ಮಿಲಿಟರಿ ಉನ್ನತಾಧಿಕಾರಿಗಳು ಮತ್ತು ದೇಶಾದ್ಯಂತದ ಕೈಗಾರಿಕೋದ್ಯಮಿಗಳು, ಕುಬೇರರ ಹಿಂಡೇ ಪುಟ್ಟಪರ್ತಿ ಭಕ್ತಾದಿಗಳ ಪಟ್ಟಿಯಲ್ಲಿತ್ತು.

ಅದೇನೋ, ಆದಿಚುಂಚನಗಿರಿ ಸ್ವಾಮಿ ಜೊತೆ ವೈಮನಸ್ಸು ಭುಗಿಲೆದ್ದ ಮೇಲೆ ಮಾಜಿ ಪ್ರಧಾನಿ ದೇವೇಗೌಡರೂ ಪದೇಪದೆ ಪುಟ್ಟಪರ್ತಿಗೆ ಹೋಗಿ ಬರಲಾರಂಭಿಸಿದ್ದರು. ಅಂತಿಮವಾಗಿ ಏಪ್ರಿಲ್ 24ರಂದು ಬಾಬಾ ಕೊನೆಯುಸಿರೆಳೆಯುತ್ತಿದ್ದಂತೆ ಪುಟ್ಟಪರ್ತಿಯೇ ಬೆಚ್ಚಿಬೀಳುವಂಥ ಸುದ್ದಿ ಹೊರಬಿತ್ತು. ಪ್ರಶಾಂತಿ ನಿಲಯದಿಂದ ಹೊರಬಿದ್ದ ಎರಡು ಟ್ರಕ್ಕುಗಳ ತುಂಬ ವಜ್ರಾಭರಣಗಳನ್ನು ಹೊರಸಾಗಿಸಲಾಗಿತ್ತು. ಬೆನ್ನಲ್ಲೇ ದಿನಕ್ಕೆರಡು ಟ್ರಕ್ಕುಗಳಂತೆ ಪ್ರಶಾಂತಿ ನಿಲಯದಿಂದ ಹೊರಬೀಳತೊಡಗಿದವು. ಯಜುರ್ ಮಂದಿರದ ಬಾಗಿಲನ್ನು ತೆರೆಯುವ ಮೊದಲೇ ಹತ್ತಾರು ಟ್ರಕ್ಕುಗಳು ಪ್ರಶಾಂತಿ ನಿಲಯದಿಂದ ಹೊರಬಿದ್ದಿದ್ದವು.

ಆಗಲೇ ಬಾಬಾ ನಿಧಿಯನ್ನು ಟ್ರಸ್ಟಿಗಳು ಕದ್ದು ಸಾಗಿಸುತ್ತಿದ್ದಾರೆಂಬ ಸುದ್ದಿ ಹಬ್ಬಿದ್ದು. ಇಷ್ಟಾಗಿದ್ದೇ ಹುಷಾರಾದ ಟ್ರಸ್ಟಿಗಳೇ ಪ್ರಶಾಂತಿ ನಿಲಯದಿಂದ ಹೊರಬಿದ್ದ ಟ್ರಕ್ಕುಗಳ ಕತೆಯನ್ನು ಮುಚ್ಚಿಡಬೇಕಲ್ಲ; ಅದಕ್ಕಾಗಿ ಹೊಸ ವರಸೆಯೊಂದನ್ನು ಶುರುವಿಟ್ಟರು. ಅದು ಯಜುರ್ ಮಂದಿರದ ಬಾಗಿಲನ್ನು ತೆರೆಯುವುದು.

ಇಲ್ಲೂ ಸತ್ಯಜಿತ್‌ನ ಅಪಾಯ ಟ್ರಸ್ಟಿಗಳನ್ನು ಬಾಧಿಸಿದೆ. ಯಜುರ್ ಮಂದಿರದೊಳಗಿರುವ ಮುಕ್ಕಾಲು ಪಾಲನ್ನು ಈಗಾಗಲೇ ಹೊರಸಾಗಿಸಿದ್ದಾಗಿದೆ. ಉಳಿದಿರುವುದು ಏನಿದ್ದರೂ ತೃಣ ಮಾತ್ರ. ಆದರೆ ಅಸಲಿಯತ್ತನ್ನು ಸತ್ಯಜಿತ್ ಬಾಯಿಬಿಟ್ಟರೆ? ಯಜುರ್ ಮಂದಿರದಲ್ಲಿ ಏನೇನಿತ್ತೆಂಬುದನ್ನು, ಅದು ಯಾರ್‍ಯಾರಿಗೆ ಎಷ್ಟೆಷ್ಟು ಸೇರಬೇಕು ಎಂಬುದನ್ನು ಹೊರಗೆಡಹಿದರೆ ಟ್ರಸ್ಟಿಗಳ ಬಂಡವಾಳ ಬಯಲಾಗುತ್ತದೆ. ಅದಕ್ಕೆಂದು ಮುಂಬಯಿಯಲ್ಲಿದ್ದ ಸತ್ಯಜಿತ್‌ನನ್ನು ಟ್ರಸ್ಟಿಗಳೇ ಗೋಗರೆದು ಪುಟ್ಟಪರ್ತಿಗೆ ಕರೆಸಿಕೊಂಡರು. ಜೊತೆಗೆ ರತನ್ ಟಾಟಾನನ್ನು ಕರೆಸಿಕೊಂಡರು. ಆಂಧ್ರದ ಎಲ್ಲಾ ಶಾಲಾಮಕ್ಕಳಿಗೆ ಸತ್ಯಸಾಯಿ ಟ್ರಸ್ಟ್‌ನಿಂದ ಉಚಿತ ಕಂಪ್ಯೂಟರ್ ಕಲ್ಪಿಸುವ ವಿದ್ಯಾವಾಹಿನಿ ಎಂಬ ಯೋಜನೆಯನ್ನು ರತನ್ ಟಾಟಾ ಕೈಯಲ್ಲೇ ಉದ್ಘಾಟಿಸಿ, ಅದಕ್ಕೆ ಸತ್ಯಜಿತ್‌ನನ್ನೇ ಮುಖ್ಯಸ್ಥನನ್ನಾಗಿ ನೇಮಿಸಿ, ಅದೇ ಹೊತ್ತಿಗೆ ಸರಿಯಾಗಿ ಯಜುರ್ ಮಂದಿರದ ಬಾಗಿಲನ್ನು ತೆರೆಯುವ ಕಾರ್ಯಕ್ರಮವನ್ನೂ ಒಟ್ಟೊಟ್ಟಿಗೆ ಇಟ್ಟುಕೊಂಡಿದ್ದರು.

ಸಿಕ್ಕಿಬಿದ್ದ ಕ್ವಾಲೀಸ್

ನೆಪಕ್ಕೆ ವಿದ್ಯಾವಾಹಿನಿಯನ್ನು ಉದ್ಘಾಟಿಸಿದಂತಾಗಬೇಕು. ಸತ್ಯಜಿತ್‌ನನ್ನು ಸಂತೃಪ್ತಿಗೊಳಿಸಿದಂತೆಯೂ ಆಗಬೇಕು. ಜೊತೆಗೆ ಯಜುರ್ ಮಂದಿರದ ರಹಸ್ಯದ ಬಗೆಗಿರುವ ಭಕ್ತಾದಿಗಳ ಕುತೂಹಲವೂ ತಣಿಯಬೇಕು. ಈ ಎಲ್ಲವನ್ನೂ ಲೆಕ್ಕ ಹಾಕಿಯೇ ಜೂನ್ 17ರ ಶುಕ್ರವಾರ ಯಜುರ್ ಮಂದಿರದ ಬಾಗಿಲು ತೆರೆಯಲಾಯ್ತು, ಕಪಟ ಬಯಲಾಗದ ಹಾಗೆ ಸತ್ಯಜಿತ್‌ನನ್ನೂ ಜೊತೆಗಿಟ್ಟುಕೊಳ್ಳಲಾಯ್ತು.

ಆದರೆ ಸತ್ಯ ಬಯಲಾಗಲೇ ಬೇಕಲ್ಲ, ಯಜುರ್ ಮಂದಿರದಲ್ಲಿ ಸಿಕ್ಕದ್ದೇನಿದ್ದರೂ ಸಾಗರದೊಳಗಣ ಮಂಜುಗಡ್ಡೆಯ ತುಣುಕಷ್ಟೇ ಎಂಬುದು ಐಟಿ ಅಧಿಕಾರಿಗಳಿಗೆ ಗೊತ್ತಾಗಿತ್ತು, ಇದೇ ಹೊತ್ತಿಗೆ ಟ್ರಸ್ಟಿಗಳಾದ ರತ್ನಾಕರ್, ವೇಣು ಶ್ರೀನಿವಾಸ್, ಇಂದೂಲಾಲ್ ಷಾ, ಭಗವತಿ ಮುಂತಾದವರ ಫೋನ್ ಕರೆಗಳನ್ನು ಇಂಟಲಿಜೆನ್ಸ್ ಅಧಿಕಾರಿಗಳು ಟ್ಯಾಪ್ ಮಾಡಲಾರಂಭಿಸಿದ್ದರು. ಯಜುರ್ ಮಂದಿರದ ಬಾಗಿಲು ತೆರೆದಾಗಿತ್ತಾದ್ದರಿಂದ ಟ್ರಸ್ಟ್‌ನ ಅಧಿಕೃತ ಕಾರುಗಳಲ್ಲಿ ರೊಕ್ಕ ಸಾಗಿಸುವಂತಿಲ್ಲ, ಹಾಗೊಮ್ಮೆ ಸಾಗಿಸುತ್ತಿದ್ದ ರೊಕ್ಕ ಸಿಕ್ಕಿತ್ತೆಂದರೆ ಯಜುರ್ ಮಂದಿರದ ಬಾಗಿಲು ತೆರೆಯುವ ಅಧಿಕೃತ ಕಾರ್ಯಕ್ರಮವೇ ಪೊಳ್ಳೆಂದು, ಅದಕ್ಕೂ ಮೊದಲೇ ದುಡ್ಡು-ಚಿನ್ನವನ್ನು ಸಾಗಿಸಲಾಗಿತ್ತೆಂದೂ ನಿಸ್ಸಂಶಯವಾಗಿ ಬಯಲಾಗುತ್ತದೆ. ಇಂಥ ಗುಮಾನಿಗೆ ಆಸ್ಪದವೇ ಆಗದಂತೆ ಪುಟ್ಟಪರ್ತಿಯಿಂದ ಬೆಂಗಳೂರಿಗೆ ರೊಕ್ಕ ಸಾಗಿಸುವ ಕಾರಸ್ಥಾನಕ್ಕೆ ಕೈಯಿಟ್ಟವರು ಟ್ರಸ್ಟಿ ವೇಣು ಶ್ರೀನಿವಾಸನ್ ಮತ್ತು ರತ್ನಾಕರ್!

ಜೂನ್ 18ರಂದು ಬಾಬಾ ಮಹಾಸಮಾಧಿಯ ಇಂಜಿನಿಯರ್ ಸೋಹನ್ ಶೆಟ್ಟಿಯ ಜೊತೆ ಕಳಿಸಿದ್ದ 35 ಲಕ್ಷವನ್ನು, ಆಂಧ್ರ-ಕರ್ನಾಟಕ ಗಡಿಯಲ್ಲೇ ಪೊಲೀಸರು ಹಿಡಿದುಬಿಟ್ಟರು. 35 ಲಕ್ಷದ ನೋಟಿನ ಕಂತೆಗಳನ್ನು ತನ್ನ ಕಾರಿಗೆ ತುಂಬಿಸಿಕೊಂಡು ಬರುತ್ತಿದ್ದ ಚಂದ್ರಶೇಖರ್ ಉರ್ಫ್ ಶೇಖರ್ ಬೇರೆ ಯಾರೂ ಅಲ್ಲ ಸತ್ಯ ಸಾಯಿ ಟ್ರಸ್ಟ್‌ನ ಟ್ರಸ್ಟಿ ಮತ್ತು ಚೆನ್ನೈನ ಡಬ್ಲ್ಯೂ.ಎಸ್. ಇಂಡಸ್ಟ್ರೀಸ್‌ನ ಮಾಲೀಕ ವೇಣು ಶ್ರೀನಿವಾಸನ್!

ಇದಾದ ಮರುದಿನ ಅಂದರೆ ಜೂನ್ 18ರಂದು ಆಂಧ್ರ-ಕರ್ನಾಟಕ ಗಡಿಯ ಕೊತ್ತಚೆರವು ಸಮೀಪದ ಅದೇ ಕೋಡಿಕೊಂಡ ಚೆಕ್‌ಪೋಸ್ಟ್ ಮತ್ತೊಂದು ಘಟನೆಗೆ ಸಾಕ್ಷಿಯಾಗಿತ್ತು, ಬೆಂಗಳೂರಿನ ವೋಲ್ವೋ ಬಸ್ ಒಂದರಲ್ಲಿ ಎರಡು ಮೂಟೆ ಗೋಣಿಚೀಲಗಳ ತುಂಬ ಪುಟ್ಟಪರ್ತಿಯ ನೋಟಿನ ಕಂತೆಗಳನ್ನು ಸಾಗಿಸಲಾಗುತ್ತಿತ್ತು. ಅದನ್ನು ಸಾಗಿಸುತ್ತಿದ್ದ ಇಬ್ಬರು ತಮಿಳರನ್ನು ಹಿಡಿದು ಪೊಲೀಸರು ಬಾಯಿಬಿಡಿಸಿದರೆ ಅವರು ಪುಟ್ಟಪರ್ತಿಯ ಬಾಬಾ ಮಹಾಸಮಾಧಿಯ ಸೈಟ್ ಇಂಜಿನಿಯರ್ ಹರಿಶ್ಚಂದ್ರ ಶೆಟ್ಟಿಯ ಹೆಸರು ಹೇಳಿದ್ದಾರೆ. ಹರಿಶ್ಚಂದ್ರ ಶೆಟ್ಟಿಯ ಬಾಯಿಬಿಡಿಸಲಾಗಿ ಆತ ಪ್ರಶಾಂತಿ ನಿಲಯದ ಸೆಕ್ಯೂರಿಟಿ ಆಫೀಸರ್ ಪ್ರಧಾನ್‌ನ ಹೆಸರು ಹೇಳಿದ್ದಾನೆ. ಪ್ರಧಾನ್ ಯಜುರ್ ಮಂದಿರದ ಚೀಫ್ ಸೆಕ್ಯೂರಿಟಿ ಆಫೀಸರ್ ಕೂಡ.

ಅಲ್ಲಿಗೆ ಜೂನ್ 18ರಂದು ಕ್ವಾಲೀಸ್‌ನಲ್ಲಿ ಸಿಕ್ಕಿದ 35 ಲಕ್ಷ ಮತ್ತು ಅದರ ಮರುದಿನ ಕೆಎಸ್ಸಾರ್‌ಟಿಸಿ ವೋಲ್ವೋ ಬಸ್ಸಿನಲ್ಲಿ ಜಪ್ತಾದ 5 ಕೋಟಿ ರೂಪಾಯಿಗಳು ಪೂರ್ತಿ ಯಜುರ್ ಮಂದಿರದ ದುಡ್ಡೇ!

ಲೆಹರ್‌ಸಿಂಗ್ ಬೇನಾಮಿ ಸರಾಫ್

ಸಾಗಿಸುತ್ತಿದ್ದ ದುಡ್ಡಿನ ಮೂಲಕ್ಕೆ ಅನಂತಪುರದ ಪೊಲೀಸ್ ವರಿಷ್ಠಾಧಿಕಾರಿ ಷಾನವಾಜ್ ಖಾಸಿಮ್ ಕೈಹಾಕಿದ್ದೆ ತಡ. ಮೊದಲು ಬಂಧಿಸಿದ್ದು ಸೆಕ್ಯೂರಿಟಿ ಆಫೀಸರ್ ಪ್ರಧಾನ್‌ನನ್ನು. ಪ್ರಧಾನ್ ಅರೆಸ್ಟಾಗುತ್ತಿದ್ದಂತೆ ಟ್ರಸ್ಟಿ ರತ್ನಾಕರ್ ಅದು ಬೆಂಗಳೂರಿನ ಅನೇಕ ಮಂದಿ ಭಕ್ತರಿಗೆ ಸೇರಬೇಕಾದ ರೊಕ್ಕ ಎಂಬ ಹೇಳಿಕೆ ಕೊಟ್ಟ. ಕೆಎಸ್ಸಾರ್‌ಟಿಸಿ ಬಸ್ಸಿನಲ್ಲಿ ಸಿಕ್ಕ ಎರಡು ಗೋಣಿ ಚೀಲದ ತುಂಬ ದುಡ್ಡು ಯಾರಿಗೆ ಸೇರಿದ್ದೆಂಬುದನ್ನೂ ಟ್ರಸ್ಟಿಗಳು ಬಾಯಿ ಬಿಡುತ್ತಿಲ್ಲ. ಹಕೀಕತ್ತೆಂದರೆ ಈ ರೀತಿ ಗೋಣಿ ಚೀಲಗಳಲ್ಲಿ ಸಾಗಿಸುತ್ತಿದ್ದ ಐದುಕೋಟಿ ದುಡ್ಡು ರಾಜ್ಯ ಬಿಜೆಪಿ ಖಜಾಂಚಿ ಲೆಹರ್‌ಸಿಂಗ್‌ಗೆ ಪರಮಾಪ್ತನಾಗಿದ್ದ ಚಿಕ್ಕಪೇಟೆಯ ಮಾರ್ವಾಡಿ ಮುರಳಿ ಸರಾಫ್ ಎಂಬಾತನಿಗೆ ಸೇರಬೇಕಿತ್ತು. ಇದು ಗೊತ್ತಾಗಿಯೇ ಆಂಧ್ರ ಸರ್ಕಾರ ಹುಷಾರಾಯಿತು. ಚೆನ್ನೈ ಮಾರ್ಗವಾಗಿ, ಹೈದರಾಬಾದ್ ಮೂಲಕ ಮುಂಬಯಿ ಮುಂತಾದೆಡೆ ಪ್ರತಿನಿತ್ಯ ಸಾಗಾಣಿಕೆಯಾಗುವ ಮೂಟೆ ಲೆಕ್ಕ ದುಡ್ಡಿನ ಬಗ್ಗೆ ಯಾವುದೇ ಕ್ರಮವಿಲ್ಲ, ಲಾರಿಗಳಲ್ಲಿ ಈಗಾಗಲೇ ಸಾಗಿಸಿದ ಚಿನ್ನಾಭರಣಗಳ ಬಗ್ಗೆ ಸೆಕ್ಯೂರಿಟಿ ಆಫೀಸರ್ ಪ್ರಧಾನ್ ಇನ್ನೂ ಬಾಯಿಬಿಟ್ಟಿರಲಿಕ್ಕಿಲ್ಲ. ಈ ರೀತಿ ಲಾರಿಗಳಲ್ಲಿ ರವಾನೆಯಾಗಿದ್ದು ಕೇಂದ್ರ ಮಂತ್ರಿ ಶರದ್ ಪವಾರ್‌ನ ದುಡ್ಡೆ? ಅಡ್ವಾಣಿ, ಪ್ರಮೋದ್ ಮಹಾಜನ್, ವೆಂಕಯ್ಯ, ಜೇಟ್ಲಿ ಮುಂತಾದವರಿಟ್ಟಿದ್ದ ದುಡ್ಡು ರವಾನೆ ಯಾಗಿದ್ದು ಹೇಗೆ? ಆರ್.ವಿ.ದೇಶಪಾಂಡೆ ಕೆಐಎಡಿಬಿಯನ್ನು ದೋಚಿ ರೈತರನ್ನು ಬೀದಿಗೆ ಹಾಕಿದ ದುಡ್ಡೇನಾಯಿತು? ಬಾಬಾ ಸಾವಿನ ಜೊತೆ ಅಧಿಕಾರಸ್ಥರ ಬ್ಲಾಕ್‌ಮನಿಯೂ ಮಣ್ಣುಗೂಡಿತೇ? ಅಥವಾ ಟ್ರಸ್ಟಿಗಳು ಒಂದೊಂದಾಗಿ ಲೆಕ್ಕ ಚುಕ್ತಾ ಮಾಡಲು ನಿಂತಿದ್ದರಿಂದಲೇ ಗೋಣಿ ಚೀಲಗಳಲ್ಲಿ ಕಾರು-ಬಸ್ಸುಗಳಲ್ಲಿ ಯಜುರ್ ಮಂದಿರದ ರೊಕ್ಕ ಸಿಕ್ಕಿಬೀಳುತ್ತಿದೆಯೇ?

ಬಂಧಿಸಲ್ಪಟ್ಟ ಸೆಕ್ಯೂರಿಟಿ ಆಫೀಸರ್ ಪ್ರಧಾನ್ ಅದೇನು ಬಾಯಿಬಿಡುತ್ತಾನೆಂಬುದರ ಮೇಲೆ ಪುಟ್ಟಪರ್ತಿಯ ಸ್ವಿಸ್ ಬ್ಯಾಂಕ್ ಮರ್ಮ ಬಯಲಾಗಬಹುದು ಅಥವಾ ಸಿಬಿಐ ತನಿಖೆಯೊಂದೇ ಇದಕ್ಕೆ ಉತ್ತರವೇ?

-ರಾ.ಸೋಮನಾಥ್

ಹುಚ್ಚ ಬೆಪ್ಪ

ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪನನ್ನು 'ಹುಚ್ಚ' ಎಂದು ಘೋಷಿಸಲು ಇನ್ನು ಹೆಚ್ಚು ಸಾಕ್ಷಿ-ಪುರಾವೆಗಳು ಬೇಕಾಗಿಲ್ಲ ಎನಿಸುತ್ತಿದೆ.

ಕಳ್ಳತನವನ್ನೇ ಕಸುಬಾಗಿಸಿಕೊಂಡಿರುವ ಯಡ್ಡಿ ಧರ್ಮಸ್ಥಳಕ್ಕೆ ಬಂದು ಆಣೆ ಮಾಡುತ್ತೇನೆಂದು ಅನೌನ್ಸ್ ಮಾಡಿದಾಗ ಮೊದಲು ಕಂಗಾಲಾಗಿದ್ದೇ ವೀರೇಂದ್ರ ಹೆಗ್ಗಡೆ. ಯಾಕೆಂದರೆ ಜೂನ್ 27 ರಂದು ಯಡ್ಡಿ ಹಾಗೂ ಕುಮಾರಸ್ವಾಮಿ ಇಬ್ಬರೂ ಅಲ್ಲಿಗೆ ಹೋಗಿ ಆಣೆ ಪ್ರಮಾಣ ಮಾಡುವುದು ಗ್ಯಾರಂಟಿಯಾಗಿತ್ತು, ಅದಾಗಿದ್ದಲ್ಲಿ, ಇವರಿಬ್ಬರೂ ಸತ್ಯವಂತರೇ ಅಂತ ಆಗಿಬಿಟ್ಟರೆ ಸುಳ್ಳುಗಾರನಾಗುವುದು ಸಾಕ್ಷಾತ್ ಮಂಜುನಾಥ ಸ್ವಾಮಿ ತಾನೆ?

ಇಷ್ಟು ಯೋಚಿಸಿದ ಹೆಗ್ಗಡೆ ಪೇಜಾವರ, ಸುತ್ತೂರು ಸ್ವಾಮಿ ಜೊತೆ ಬೇಡಿಕೊಂಡು ಯಡ್ಡಿ-ಹೆಚ್ಡಿಕೆ ಆಣೆ ಮಾಡಲು ಬರದಂತೆ ತಡೆಯುವ ಕಾರ್ಯಾಚರಣೆ ಆರಂಭಿಸಿದರು.

ಅದೀಗ ಈಡೇರಲೂಬಹುದು. ಯಡ್ಡಿ ಜೂನ್ 27 ಕ್ಕೆ ಧರ್ಮಸ್ಥಳಕ್ಕೆ ಹೋಗುತ್ತಾರೆ, ಆದರೆ ಆಣೆ ಮಾಡುವುದಿಲ್ಲ, ಹಾಗಾಗಿ ಕುಮಾರಸ್ವಾಮಿಯೂ ಆಣೆ ಮಾಡುವುದಿಲ್ಲ, ಅಲ್ಲಿಗೆ ಈ ಅಪಹಾಸ್ಯಕರ ಪ್ರಹಸನ ಕೊನೆಗೊಳ್ಳಲಿದೆ. ಆದರೆ ಈಗಿನ ಪ್ರಶ್ನೆ ಅದರಾಚೆಗಿನದು.

ಹುಚ್ಚನ ದಿನಚರಿ

ಯಡ್ಡಿಯೂರಪ್ಪ ಈ ರಾಜ್ಯದ ಜನರಿಗೆ ಕಣ್ಣಿಲ್ಲ, ಕಿವಿಯಿಲ್ಲ ಎಂದು ನಂಬಿಕೊಂಡಿದ್ದಾರಾ?


ದಿನನಿತ್ಯ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ನಡೆಸುತ್ತಿರುವ ಭ್ರಷ್ಟಾಚಾರ, ಲೂಟಿಗಳು ಜನರಿಗೆ ತಿಳಿಯುತ್ತಿಲ್ಲ ಎಂದುಕೊಂಡಿದ್ದಾರಾ?

ಸಂಸದ ರಾಘವೇಂದ್ರನ ಬಿಡಿಎ ಸೈಟು ಹಗರಣ, ಯಡ್ಡಿಯ ಶಿವಮೊಗ್ಗೆ ಕಾಲೇಜುಗಳ ಭೂಗಳ್ಳತನ, ಪತ್ನಿ ಮೈತ್ರಾದೇವಿಯ ಕೊಲೆ, ಡಿನೋಟಿಫಿಕೇಷನ್ ಡೀಲ್‌ಗಳು, ಸೋಮಣ್ಣ, ಲೆಹರ್ ಸಿಂಗ್, ಮುರುಗೇಶ್ ನಿರಾಣಿ, ಶೋಭಾ ಕರಂದ್ಲಾಜೆ ಜೊತೆ ಸೇರಿ ನಡೆಸುತ್ತಿರುವ ಲೂಟಿಗಳೆಲ್ಲ ಈಗ ಯಾವುದೂ ರಹಸ್ಯವಾಗಿ ಉಳಿದಿಲ್ಲ, ಕರ್ನಾಟಕ ಹೈಕೋರ್ಟ್, ಕರ್ನಾಟಕದ ಲೋಕಾಯುಕ್ತರು, ಸುಪ್ರೀಂ ಕೋರ್ಟ್ ಸೇರಿದಂತೆ ಅನೇಕರು ಯಡ್ಡಿ ಸರ್ಕಾರ ದೇಶದ ನಂ 1 ಭ್ರಷ್ಟ ಸರ್ಕಾರ ಎಂದೇ ಘೋಷಿಸಿವೆ. ಸ್ವತಃ ಯಡ್ಡಿ & ಸನ್ಸ್ ವಿರುದ್ಧ ಅನೇಕ ಭ್ರಷ್ಟಾಚಾರದ ಕೇಸ್‌ಗಳ ತನಿಖೆಯಾಗುತ್ತಿದೆ.

ವಸ್ತುಸ್ಥಿತಿ ಹೀಗಿರುವಾಗ ಧರ್ಮಸ್ಥಳದ ಮಂಜುನಾಥನಾಗಲಿ, ಆಣೆ ಪ್ರಮಾಣಗಳಾಗಲಿ ಯಡ್ಡಿಗೆ ಸತ್ಯ ಹರಿಶ್ಚಂದ್ರನೆಂದು ಸರ್ಟಿಫಿಕೇಟ್ ಕೊಟ್ಟೇ ಬಿಟ್ಟಿದ್ದರೂ ಅದನ್ನು ಜನ ನಂಬುತ್ತಿರಲಿಲ್ಲ.

ಸದ್ಯಕ್ಕೆ ಈ ಪ್ರಹಸನ ಮುಂದುವರೆಯುವ ಛಾನ್ಸಿಲ್ಲ, ಆದರೆ ಬಿಜೆಪಿ ನಾಯಕರು ಹುಚ್ಚನಂತಾಡುತ್ತಿರುವ ಯಡ್ಡಿಯ ತಲೆ ಮೇಲೆ ಮೊಟಕಿ ಊಗಿಯದೇ ಹೋದರೆ ಬಿಜೆಪಿಯ ಮರ್ಯಾದೆ ಪೂರ್ತಿ ಕಳಚಿ ಬೀಳುತ್ತದಷ್ಟೆ.

ಇಲ್ಲಿ ಕುಮಾರಸ್ವಾಮಿಗೆ ಹೇಳಬೇಕಾದ ಕಿವಿ ಮಾತೊಂದಿದೆ. ಹುಚ್ಚನ ಜೊತೆ ಸೇರಿ ತಾನೂ ಬೆಪ್ಪನಂತಾಡುವುದರಿಂದ ಏನೂ ಪ್ರಯೋಜನವಿಲ್ಲ, ಯಡ್ಡಿಯ ಹುಚ್ಚಾಟಗಳನ್ನು ಜನರ ತೀರ್ಮಾನಕ್ಕೆ ಬಿಟ್ಟು ಕುಮಾರಸ್ವಾಮಿ ಇನ್ನು ಮುಂದಾದರೂ ನೈಜ ಪ್ರತಿ ಪಕ್ಷದ ನಾಯಕನಂತೆ ತೂಕದಿಂದ ವರ್ತಿಸಬೇಕಲ್ಲವೆ?



ಧಾರ್ಮಿಕ ದಂಧೆಕೋರರು


ಗೌರಿ ಲಂಕೇಶ್ ಮತ್ತು ಪಾರ್ವತೀಶ

"ಹಿಂದೂ ಧರ್ಮದಲ್ಲಿ ಸರ್ವಸಂಗಪರಿತ್ಯಾಗಿಗಳಿಗೆ ವಿಶೇಷ ಸ್ಥಾನಮಾನವಿದೆ. ಆದರೆ ಇತ್ತೀಚೆಗೆ ಈ ಢೋಂಗಿ ಪರಿತ್ಯಾಗಿಗಳೇ ಅಪಾರ ಸಂಪತ್ತನ್ನೂ ಹೊಂದಿರುವವರಾಗಿದ್ದಾರೆ! ಎಂತಹ ಸೋಜಿಗ!"

– ಪಾಲ್ ಜಖಾರಿಯಾ

ಇತ್ತೀಚೆಗೆ ಮಡಿದ ಸಾಯಿಬಾಬಾನ ಬೆಡ್‌ರೂಮಿನಲ್ಲಿ ಕೋಟ್ಯಂತರ ರೂಪಾಯಿ ಹಣ, ವಜ್ರ, ವೈಢೂರ್ಯ, ಚಿನ್ನ, ಬೆಳ್ಳಿ ಪತ್ತೆಯಾಗಿರುವುದು...

ಭ್ರಷ್ಟಾಚಾರದ ವಿರುದ್ಧ ಮೊನ್ನೆಯ ತನಕ ಬಾಯಿ ಬಡಿದುಕೊಳ್ಳುತ್ತಿದ್ದ ಬಾಬಾ ರಾಮದೇವನೇ ಅಕ್ರಮವಾಗಿ ಕೋಟ್ಯಂತರ ರೂಪಾಯಿಗಳ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾನೆ ಎಂಬುದು ಜಗಜ್ಜಾಹೀರಾಗಿರುವುದು...







ಬೆಂಗಳೂರಿನ ಇಸ್ಕಾನ್ ಎಂಬ ಕೃಷ್ಣ ಭಕ್ತರ ಗುಂಪು ಮೋಸ, ವಂಚನೆ ಇತ್ಯಾದಿಗಳನ್ನು ಮಾಡಿ ಕೋಟ್ಯಂತರ ರೂಪಾಯಿಗಳ ಆಸ್ತಿಯನ್ನು ಲಪಟಾಯಿಸಲು ಹೊಂಚುಹಾಕಿದೆ ಎಂದು ಹೈಕೋರ್ಟ್ ತೀರ್ಪು ನೀಡಿರುವುದು...

ಶ್ರೀ ಶ್ರೀ ರವಿಶಂಕರ್ ಎಂಬ ವ್ಯಾಪಾರಿ ನೋಡುನೋಡುತ್ತಲೇ ಬೆಂಗಳೂರಿನ ಹೊರವಲಯದಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಸಾಮ್ರಾಜ್ಯವನ್ನು ಸ್ಥಾಪಿಸಿ ಅಲ್ಲೊಂದು ಮಾನವ ನಿರ್ಮಿತ ಕೆರೆಯನ್ನೇ ಕಟ್ಟಿಸಿಕೊಂಡಿರುವುದು...

ಇದೆಲ್ಲ ಏನನ್ನು ತೋರುತ್ತದೆ?

ಕಾವಿಯನ್ನೋ, ಬಿಳಿ ಬಟ್ಟೆಯನ್ನೋ ತೊಟ್ಟ ಖದೀಮನೊಬ್ಬ ಸರ್ವಸಂಗ ಪರಿತ್ಯಾಗಿಯಂತೆ ಪೋಸು ಕೊಟ್ಟರೆ ಸಾಕು, ಆತ ಅಪಾರ ಹಣವನ್ನು, ಆಸ್ತಿಪಾಸ್ತಿಯನ್ನು ಗಳಿಸಬಹುದು ಎಂಬುದನ್ನಲ್ಲವೇ? ಅಂದರೆ ಇಂಥವರು ವಿವಿಧ ಧಾರ್ಮಿಕ ಮುಖವಾಡಗಳನ್ನು ತೊಟ್ಟು ಧರ್ಮದ ಹೆಸರಿನಲ್ಲಿ ದಂಧೆ ನಡೆಸುತ್ತಿದ್ದಾರೆ ಎಂಬುದನ್ನಲ್ಲವೇ?

ಎರಡು ತಿಂಗಳ ಹಿಂದೆ ಮಡಿದ ಸಾಯಿಬಾಬಾ ಪ್ರಜ್ಞಾಹೀನ ಸ್ಥಿತಿಯನ್ನು ತಲುಪುವ ಮುನ್ನ ತನ್ನ ಖಾಸಗಿ ಬೆಡ್‌ರೂಮಿನಲ್ಲೇ ಬಹಳ ಕಾಲ ಕಳೆಯುತ್ತಿದ್ದನಂತೆ. ತಾನೊಬ್ಬ ದೈವಾಂಶಸಂಭೂತ ಎಂಬಂತೆ ಪೋಸು ಕೊಡುತ್ತಿದ್ದ ಸಾಯಿಬಾಬಾನಿಗೆ ಹಣ, ಚಿನ್ನ, ವಜ್ರಗಳೆಂದರೆ ಎಷ್ಟು ಪ್ರಿಯವಾಗಿತ್ತೆಂದರೆ ಆತ ಅವುಗಳನ್ನು ತನ್ನ ಬೆಡ್‌ರೂಮಿನ ವಿವಿಧ ಕಡೆ ಬಚ್ಚಿಟ್ಟಿದ್ದನಂತೆ. ಗೂಡುಗಳಲ್ಲಿ, ಡಬ್ಬಾಗಳಲ್ಲಿ, ರಹಸ್ಯ ಬೀರುಗಳಲ್ಲಿ, ದೊಡ್ಡದೊಡ್ಡ ಆಲ್ಮೇರಾಗಳಲ್ಲಿ ಮಾತ್ರವಲ್ಲ, ತನ್ನ ನಿಲುವಂಗಿಯ ಅಂಚಿನಲ್ಲಿ, ಕಾಚಾದ ಸಂಧಿಗಳಲ್ಲಿ ವಜ್ರಗಳಿದ್ದ ಚೀಲಗಳನ್ನು ಹೊಲಿಸಿಕೊಂಡಿದ್ದನಂತೆ. ತಾನು ದೇವಮಾನವ ಎಂದುಕೊಂಡಿದ್ದ ಸಾಯಿಬಾಬಾ ತನ್ನೊಂದಿಗೆ ಇದನ್ನೆಲ್ಲ ಪರಲೋಕಕ್ಕೆ ತೆಗೆದುಕೊಂಡು ಹೋಗಬಹುದು ಎಂದು ಭಾವಿಸಿದ್ದನೋ ಏನೋ?!

ಸಾಯಿಬಾಬಾನ ರೂಮಿನಲ್ಲಿದ್ದ ಅಪಾರ ಸಂಪತ್ತನ್ನು ನೋಡಿದ ಆತನ ಟ್ರಸ್ಟಿನ ಜನರೇ ತಬ್ಬಿಬ್ಬಾದರಂತೆ.

ಚಿನ್ನದಲ್ಲಿ ಮಾಡಲಾಗಿದ್ದ ಗಣೇಶ, ಲಕ್ಷ್ಮಿ, ಶಿವ, ನಾಗಕನ್ಯೆಯ ವಿಗ್ರಹಗಳು, ವಜ್ರಖಚಿತ ಕಿರೀಟಗಳು, ಚಿನ್ನದ ಚಪ್ಪಲಿ, ನೆಕ್‌ಲೇಸ್, ಉಂಗುರು ಬಟ್ಟಲುಗಳು, ಭಕ್ತರು ನೀಡಿದ್ದ ಕ್ಯಾಮೆರಾಗಳು, ಕಲಾವಸ್ತುಗಳು ಇತ್ಯಾದಿಗಳು ತುಂಬಿದ್ದ ನೂರಾರು ಸೂಟ್‌ಕೇಸ್‌ಗಳು, ಬಿಳಿ ಮತ್ತು ಕಾವಿ ಬಣ್ಣದ ೭೫೦ ಕ್ಕೂ ಹೆಚ್ಚು ನಿಲುವಂಗಿಗಳು, ನೈಕಿ ಮತ್ತು ಅಡಿಡಾಸ್ ಸೇರಿದಂತೆ ೫೦೦ಕ್ಕೂ ಹೆಚ್ಚು ಜೊತೆ ಶೂಗಳು, ಚಪ್ಪಲಿಗಳು, ಬೀರುಗಳಲ್ಲಿ ತುಂಬಿತುಳುಕುತ್ತಿದ್ದ ಸುಗಂಧದ ಬಾಟಲಿಗಳು, ಕೂದಲಿಗೆ ಸಿಂಪಡಿಸಿಕೊಳ್ಳುವ ಸ್ಪ್ರೇಗಳು,

ಬಾಬಾ ಮಲಗುತ್ತಿದ್ದ 15X15 ಅಡಿ ವಿಸ್ತಾರವಾದ ಮಂಚದೊಳಗಿದ್ದ ರಹಸ್ಯ ಗೂಡುಗಳು...

ಎಲ್ಲೆಂದರಲ್ಲಿ ಬಿದ್ದಿದ್ದ ನೋಟಿನ ಕಂತೆಗಳು. ಇವುಗಳನ್ನು ಯಾರಿಂದಲೂ ಲೆಕ್ಕ ಮಾಡುವುದು ಅಸಾಧ್ಯ ಎಂದೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಹಣ ಲೆಕ್ಕಿಸುವ ಮೂರು ಮೆಷಿನ್‌ಗಳನ್ನು ತರಿಸಲಾಯಿತು. ಈ ಮೆಷಿನ್‌ಗಳು ನಿರಂತರವಾಗಿ 36 ಗಂಟೆಗಳ ಕಾಲ ಅಲ್ಲಿದ್ದ ನೋಟಿನ ಕಂತೆಗಳನ್ನು ಎನಿಸಿದರೂ ಅವುಗಳ ಕಾರ್ಯ ಮುಗಿಯಲಿಲ್ಲ.

ಈ ದುಡ್ಡು, ಚಿನ್ನ, ವಜ್ರ, ಬೆಳ್ಳಿ ಯಾರದ್ದು? ಎಲ್ಲಿಂದ ಬಂತು? ಲೆಕ್ಕ ಇದೆಯಾ? ಎಂಬೆಲ್ಲ ಪ್ರಶ್ನೆಗಳು ಒಂದೆಡೆ ಇರಲಿ. ಆದರೆ ಅಂದು ಆ ಕೊಠಡಿಯಲ್ಲಿದ್ದ ಎಲ್ಲಾ ವಸ್ತುಗಳ ಮೌಲ್ಯವನ್ನು ಲೆಕ್ಕಹಾಕಿದ ನಂತರದ ದಿನಗಳಲ್ಲಿ ಅದೇ ಪುಟ್ಟಪರ್ತಿಯಿಂದ ಎಸ್ಕೇಪ್ ಆಗಿ ಬೆಂಗಳೂರಿನತ್ತ ಸಾಗುತ್ತಿದ್ದ ಲಕ್ಷ/ಕೋಟಿ ಹಣ ಪೊಲೀಸರಿಗೆ ಸಿಕ್ಕಿಬಿದ್ದಿದೆ ಎಂದು ಮಾಧ್ಯಮಗಳು ವರದಿ ಮಾಡಿದವಲ್ಲ? ಆ ಹಣ ಯಾರದ್ದು? ಅದನ್ನು ಯಾರಿಗೆ ಕಳುಹಿಸುತ್ತಿದ್ದರು? ಯಾತಕ್ಕೆ ಕಳುಹಿಸುತ್ತಿದ್ದರು? ಎಂಬೆಲ್ಲ ಪ್ರಶ್ನೆಗಳು ಹುಟ್ಟಿಕೊಂಡಿವೆ.

ವಿಚಿತ್ರವೆಂದರೆ ತಾವು ಕೋಟ್ಯಾಂತರ ರೂಪಾಯಿಗಳನ್ನು ವಶಪಡಿಸಿಕೊಂಡಿದ್ದೇವೆ ಎಂದು ಪೊಲೀಸರು ಇಲ್ಲಿಯತನಕ ದೃಢಪಡಿಸಿಲ್ಲ. ಯಾರಿಗೆ ಗೊತ್ತು, ಸಿಕ್ಕಿಹಾಕಿಕೊಂಡಿರುವ ಹಣದಲ್ಲಿ ಅದೆಷ್ಟು ಪೊಲೀಸರ ಪಾಲಾಗುತ್ತೋ? ಅದೆಷ್ಟು ಕೇಸುಗಳು ಹಳ್ಳ ಹಿಡಿಯುತ್ತವ್ರೋ ಏನೋ?

ಆದರೆ ಇದೆಲ್ಲದರಿಂದ ಒಂದಂತೂ ಸ್ಪಷ್ಟವಾಗಿದೆ. ಅದೇನೆಂದರೆ ಕಳ್ಳ ಸಾಯಿಬಾಬಾ ಲೂಟಿ ಮಾಡಿದ್ದ ಹಣವನ್ನೆಲ್ಲ ಇವತ್ತು ಟ್ರಸ್ಟ್ ಸದಸ್ಯರು ಮತ್ತು ಪೊಲೀಸರು ಎಂಬ ಕಳ್ಳರು ಮತ್ತೊಮ್ಮೆ ಲೂಟಿ ಮಾಡುತ್ತಿದ್ದಾರೆ!!

ಎಲ್ಲ ಧರ್ಮಗಳು ಹುಟ್ಟಿಕೊಂಡಾಗ ಮಾನವೀಯತೆಯನ್ನೇ ತಮ್ಮ ಆದರ್ಶವಾಗಿಟ್ಟುಕೊಂಡಿದ್ದವು. ಆದರೆ ಆನಂತರದ ದಿನಗಳಲ್ಲಿ ಕೆಲವರು ಆ ಧರ್ಮಗಳನ್ನೇ ಬಂಡವಾಳ ಮಾಡಿಕೊಂಡು ಜನರ ಮೇಲೆ ದಬ್ಬಾಳಿಕೆ ನಡೆಸುವ ದಂಧೆ ಶುರುಮಾಡಿಕೊಂಡರು. ಇತ್ತೀಚೆಗಂತೂ ಹಲವು ಗುರುಗಳು ಹೊರಗಡೆ ಧಾರ್ಮಿಕತೆಯನ್ನು ಬೋಧಿಸುತ್ತಿದ್ದರೆ ಒಳಗೊಳಗೆ ಅಪ್ಪಟ ವ್ಯಾಪಾರಸ್ಥರಾಗಿದ್ದಾರೆ. ಈ ಮಾತು ಅಮೆರಿಕಕ್ಕೂ, ಭಾರತಕ್ಕೂ ಅನ್ವಯಿಸುತ್ತದೆ.

ಧರ್ಮದ ಹೆಸರಲ್ಲಿ ದಂಧೆ ನಡೆಸುತ್ತಿರುವ ಇಂತಹ ಗುರುಗಳು ಪ್ರಖ್ಯಾತ ಉದ್ಯಮಿಗಳನ್ನೂ ಮೀರಿಸುವಂತಹ ಚಾಣಾಕ್ಷತೆಯನ್ನು ಹೊಂದಿರುತ್ತಾರೆ. ಆ ಕಾರಣಕ್ಕೇ ಅವರು ಧರ್ಮದ ಹೆಸರಿನಲ್ಲಿ ದೊಡ್ಡ ಉದ್ಯಮಗಳನ್ನು ನಡೆಸುತ್ತಾರೆ, ಭೂಮಾಲೀಕರಂತೆ ದೊಡ್ಡ ಸಂಪತ್ತಿನ ಮೇಲೆ ಅಧಿಕಾರ ಚಲಾಯಿಸುತ್ತಾರೆ, ವಾದವಿವಾದಗಳನ್ನು ನ್ಯಾಯಾಧೀಶರಂತೆ ಇತ್ಯರ್ಥ ಮಾಡುತ್ತಾರೆ, ರಾಜಕಾರಣಿಗಳಿಗೆ ಸಲಹೆ ನೀಡುತ್ತಾರೆ, ಅಧಿಕಾರಸ್ಥರನ್ನು ಬಳಸಿಕೊಂಡು ತಮಗೆ ಬೇಕಾದ ಸವಲತ್ತುಗಳನ್ನು ಪಡೆಯುತ್ತಾರೆ. ತಮ್ಮ ಇಂತಹ ಬಲದಿಂದಲೇ ಅಪಾರ ಸಂಖ್ಯೆಯ ಅಭಿಮಾನಿಗಳ ಸೈನ್ಯವನ್ನೇ ಕಟ್ಟಿಕೊಳ್ಳುತ್ತಾರೆ. ಅಂದರೆ ಧರ್ಮದ ಹೆಸರಿನಲ್ಲಿ ಅಕ್ಷರಶಃ ಸಾರ್ವಜನಿಕರ ಸಂಪತ್ತಿನ ಲೂಟಿಗೆ ನಿಲ್ಲುತ್ತಾರೆ...

ಮಾಧ್ಯಮ ವರ್ಗದ ಕೊಡುಗೆ

ಒಂದೆರಡು ದಶಕಗಳ ಹಿಂದೆ ನಮ್ಮ ನಾಡಿನ ಬಡವರೇ ಢೋಂಗಿ ಬಾಬಾ/ಗುರುಗಳನ್ನು ಬೆಳೆಸುತ್ತಿದ್ದರೆ ಇತ್ತೀಚೆಗೆ ನಮ್ಮ ಮಧ್ಯಮ ವರ್ಗ ಈ ಪ್ರಕ್ರಿಯೆಗೆ ದೊಡ್ಡ ಕೊಡುಗೆಯನ್ನು ನೀಡಿದೆ. ಜಾಗತೀಕರಣ, ಉದಾರೀಕರಣದಿಂದಾಗಿ ಇವತ್ತು ಹೆಚ್ಚು ಹಣವನ್ನು ಗಳಿಸುತ್ತಿರುವ ಮಧ್ಯಮ ವರ್ಗದಲ್ಲಿ ಆಧ್ಯಾತ್ಮಿಕತೆಯತ್ತ ಒಲವು ಹೆಚ್ಚಾಗಿದೆ. ಆದರೆ ಈ ಆಧ್ಯಾತ್ಮ ತುಂಬಾ ಆಳವಾಗಿರಕೂಡದು ಮತ್ತು ತಮ್ಮ ಜಗತ್ತಿನ ಹೊರಗೆ ಇರುವ ವಾಸ್ತವದೊಂದಿಗೆ ನಂಟು ಇಟ್ಟುಕೊಂಡಿರಕೂಡದು. ಇಂತಹ ಬಾಲಿಶ ಆಧ್ಯಾತ್ಮ ಮಧ್ಯಮ ವರ್ಗಕ್ಕೆ ಬೇಕಿರುವುದರಿಂದಲೇ ಯಾವಳೋ ಒಬ್ಬಳು ಕೊಡುವ ಅಪ್ಪುಗೆ, ಮತ್ತ್ಯಾವನೋ ಯೋಗದ ಹೆಸರಲ್ಲಿ ನಡೆಸುವ ಕುಣಿತ, ಇನ್ನೊಬ್ಬ ಆರೋಗ್ಯದ ನೆಪದಲ್ಲಿ ನಡೆಸುವ ಹೋರಾಟ ಮುಖ್ಯವಾಗುತ್ತದೆ ಮತ್ತು ಕ್ರಾಂತಿಯಂತೆ ಕಾಣಿಸುತ್ತದೆ.....

ಇವತ್ತಿನ ಎಲ್ಲಾ ಧಾರ್ಮಿಕ ಗುರುಗಳ ಸುತ್ತ ನೆರೆದಿರುವ ಮಧ್ಯಮ ವರ್ಗದ ಜನರನ್ನು ಮತ್ತು ಈ ಢೋಂಗಿ ಬಾಬಾಗಳಿಗೆ ನೀಡುವ ಬೆಂಬಲವನ್ನು ನೋಡಿದರೆ ನಮ್ಮ ಮಧ್ಯಮ ವರ್ಗ ಎಂತಹ ದೈನೇಸಿ ಸ್ಥಿತಿ ತಲುಪಿದೆ ಎಂದು ಅರ್ಥವಾಗುತ್ತದೆ.

ಕಳ್ಳರೊಂದಿಗೆ ನಾಯಕರ ನಂಟು

ಕೋಟ್ಯಾಧಿಪತಿಗಳಾದ ಈ ಸರ್ವಸಂಗಪರಿತ್ಯಾಗಿಗಳ ಮತ್ತು ರಾಜಕಾರಣಿಗಳ ನಡುವಿನ ನಂಟು ಸ್ವತಂತ್ರ ಭಾರತದಲ್ಲಿ ಮೊದಲು ಗೋಚರಿಸಿದ್ದು ೭೦ರ ದಶಕದಲ್ಲಿ ಧೀರೇಂದ್ರ ಬ್ರಹ್ಮಚಾರಿಯ ರೂಪದಲ್ಲಿ. ಬಾಬಾ ರಾಮದೇವನಂತೆಯೇ ಈ ಬ್ರಹ್ಮಚಾರಿಯೂ ಯೋಗ ಗುರುವಾಗಿದ್ದು ಆಗಿನ ಪ್ರಧಾನಿ ಇಂದಿರಾ ಗಾಂಧಿಗೆ ಹತ್ತಿರದವನಾಗಿದ್ದ. ಭಾರತವನ್ನು ಹೇಗೆ ನಡೆಸಬೇಕೆಂದು ಇಂದಿರಾ ಗಾಂಧಿಗೆ ಸಲಹೆಗಳನ್ನು ಕೊಡುತ್ತಿದ್ದ ಧೀರೇಂದ್ರ ಬ್ರಹ್ಮಚಾರಿ ಹಲವೊಮ್ಮೆ ಸಚಿವ ಸಂಪುಟದ ಸಭೆಗಳಲ್ಲೂ ಭಾಗವಹಿಸುವಷ್ಟು ಪ್ರಭಾವಶಾಲಿಯಾಗಿದ್ದ.

ಆಗ ಇದ್ದದ್ದು ದೂರದರ್ಶನ ಎಂಬ ಒಂದೇ ಟಿವಿ ಚಾನೆಲ್. ಆಗ ಅದರಲ್ಲೇ ಈ ಬ್ರಹ್ಮಚಾರಿ ಯೋಗವನ್ನು ಹೇಳಿಕೊಡುತ್ತಿದ್ದ. ಆಗಿನ ಕಾಲದಲ್ಲಿ ಈತ ಭಾರತ ಸರ್ಕಾರದ ಮೇಲೆ ಎಂತಹ ಹಿಡಿತ ಹೊಂದಿದ್ದನೆಂದರೆ ಹಲವರು ಧೀರೇಂದ್ರ ಬ್ರಹ್ಮಚಾರಿಯನ್ನು 'ಭಾರತದ ರಾಸ್ಪುಟಿನ್' ಎಂದೇ ಕರೆಯುತ್ತಿದ್ದರು.

ಇಂದಿರಾ ಗಾಂಧಿ ಅವರ ಮರಣದ ನಂತರ ಈ ಬ್ರಹ್ಮಚಾರಿಯ ನಿಜ ಬಣ್ಣ ಬಯಲಾಯಿತು. ಈತ ನಡೆಸುತ್ತಿದ್ದ ಆಶ್ರಮ ಒಂದರಲ್ಲಿ ಗನ್ ಮತ್ತು ಬಾಂಬ್‌ಗಳು ತಯಾರಾಗುತ್ತಿದ್ದದ್ದು ಹೊರಬಿದ್ದಿತು. ಬಂದೂಕಿಗೂ, ಶವಾಸನಕ್ಕೂ ಎತ್ತಿಂದೆತ್ತಣ ಸಂಬಂಧ ಎಂದು ಕೇಳುವಷ್ಟರಲ್ಲಿ ಈತ ತನ್ನ ಖಾಸಗಿ ವಿಮಾನದಲ್ಲಿ ಹೋಗುತ್ತಿದ್ದಾಗ ಅಪಘಾತ ಸಂಭವಿಸಿ ಸತ್ತುಹೋದ. ಆತನ ಸಾವು ಇವತ್ತಿಗೂ ನಿಗೂಢವಾಗಿದೆ.

ಧೀರೇಂದ್ರ ಬ್ರಹ್ಮಚಾರಿಯ ನಂತರ ಪ್ರಸಿದ್ಧಿ ಪಡೆದ ಮತ್ತೋರ್ವ ಸರ್ವಸಂಗ ಪರಿತ್ಯಾಗಿಯ ಹೆಸರು ಚಂದ್ರಾಸ್ವಾಮಿ. ಶಾಲೆಯನ್ನೂ ಸಂಪೂರ್ಣಗೊಳಿಸದಿದ್ದ ಈತ ಯಜ್ಞನಲ್ಲಿ ಎಕ್ಸ್‌ಪರ್ಟ್ ಎನಿಸಿಕೊಂಡಿದ್ದ. ತೊಂಬತ್ತರ ದಶಕದಲ್ಲಿ ಈತ ಎಷ್ಟು ಪ್ರಭಾವಶಾಲಿ ಆಗಿದ್ದನೆಂದರೆ ಆಗಿನ ಕಾಲದಲ್ಲೇ ಇವನ ವಿಶ್ವ ಧರ್ಮಯಾಟನ ಸಂಸ್ಥೆ 1,000 ಕೋಟಿ ರೂಪಾಯಿಗಳ ಆಸ್ತಿಯನ್ನು ಹೊಂದಿತ್ತು. ಅದಕ್ಕಿಂತ ಮುಖ್ಯವಾಗಿ ಆಗಿನ ಪ್ರಧಾನಿ ಪಿ.ವಿ. ನರಸಿಂಹ ರಾವ್ ಎಂಬ ಎಡಬಿಡಂಗಿ ಚಂದ್ರಾಸ್ವಾಮಿಯ ಅಪ್ಪಟ ಶಿಷ್ಯನಾಗಿದ್ದ. ಈ ಗುರು-ಶಿಷ್ಯ ಸಂಬಂಧ ಎಂತಹದ್ದಾಗಿತ್ತೆಂದರೆ ಚಂದ್ರಾಸ್ವಾಮಿ ಹಾಕಿದ್ದ ಗೆರೆಯನ್ನು ಪಿವಿಎನ್ ದಾಟುತ್ತಿರಲಿಲ್ಲ!

ವಿಪರ್ಯಾಸದ ಸಂಗತಿ ಯಾವುದೆಂದರೆ, ಜಾತ್ಯತೀತರಾಗಿದ್ದ ಜನಪರರಾಗಿದ್ದ ಮತ್ತೋರ್ವ ಪ್ರಧಾನಿ ಚಂದ್ರಶೇಖರ್ ಕೂಡ ಈ ಕಪಟ ಚಂದ್ರಾಸ್ವಾಮಿಯ ಹಿಂಬಾಲಕರಾಗಿದ್ದರು.

ಈ ಚಂದ್ರಾಸ್ವಾಮಿ ಎಂದೂ ತೋರಿಕೆಗಾದರೂ ಸಮಾಜ ಸೇವೆ ಮಾಡಿದ ಉದಾಹರಣೆಗಳಿಲ್ಲ. ಆದರೂ ಭಾರತದ ಇಬ್ಬರು ಪ್ರಧಾನಿಗಳಲ್ಲದೆ, ಬ್ರೂನೈ ದೇಶದ ಸುಲ್ತಾನ, ಶಸ್ತ್ರಾಸ್ತ್ರಗಳ ದಲ್ಲಾಳಿ ಅದ್ನಾನ್ ಖಶೋಗಿ, ಖ್ಯಾತ ಹಾಲಿವುಡ್ ನಟಿ ಎಲಿಜಬೆತ್ ಟೇಲರ್, ಅಮೆರಿಕದ ಮಾಜಿ ಅಧ್ಯಕ್ಷ ರೊನಾಲ್ಡ್ ರೇಗನ್‌ನ ಪತ್ನಿ ನ್ಯಾನ್ಸಿ ರೇಗನ್ ಈತನ ಅಭಿಮಾನಿಗಳಾಗಿದ್ದರು. ಅದಕ್ಕೆ ಕಾರಣ ಚಂದ್ರಾಸ್ವಾಮಿಯ ಆಧ್ಯಾತ್ಮಿಕತೆ ಖಂಡಿತವಾಗಿಯೂ ಅಲ್ಲ, ಬದಲಾಗಿ ಆತ ಕಪ್ಪು ಹಣದ ಬ್ಯಾಂಕಿನಂತಿದ್ದದ್ದು ಮತ್ತು ಅಕ್ರಮ ವ್ಯವಹಾರಗಳ ಕೇಂದ್ರವಾಗಿದ್ದದ್ದು. ಇಂತಹ ಚಂದ್ರಾಸ್ವಾಮಿಯ ನಿಜ ಬಣ್ಣವನ್ನು ಕೊನೆಗೂ ಬಯಲುಗೊಳಿಸಿದ್ದು ಲಂಡನ್‌ನಲ್ಲಿ ಉಪ್ಪಿನಕಾಯಿ ವ್ಯಾಪಾರಿಯಾಗಿದ್ದ ಕೋಟ್ಯಾಧೀಶ ಲಕ್ಕುಭಾಯ್ ಪಾಟಕ್ ಎಂಬ ಭಾರತೀಯ ಮೂಲದ ಉದ್ಯಮಿ. ತನಗೆ ಒಂದು ಲಕ್ಷ ಡಾಲರ್‌ಗಳನ್ನು ಚಂದ್ರಾಸ್ವಾಮಿ ವಂಚಿಸಿದ್ದಾನೆಂದು ಪಾಟಕ್ 1996ರಲ್ಲಿ ಭಾರತ ಸರ್ಕಾರಕ್ಕೆ ದೂರಿದ. ಆಗ ವಿದೇಶ ವಿನಿಮಯ ಕಾನೂನನ್ನು ಉಲ್ಲಂಘಿಸಿದ್ದಕ್ಕೆ ಚಂದ್ರಾಸ್ವಾಮಿಯನ್ನು ಜೈಲಿಗೆ ದೂಡಲಾಗಿತ್ತು. ಕೆಲ ತಿಂಗಳ ಕಾಲ ಜೈಲಿನಲ್ಲಿದ್ದ ಚಂದ್ರಾಸ್ವಾಮಿ ಆನಂತರ ಜಾಮೀನಿನ ಮೇಲೆ ಹೊರಬಂದನಾದರೂ ಆ ಕೇಸ್ ಇನ್ನೂ ನಡೆಯುತ್ತಿದೆ. ಕೆಲ ವರ್ಷಗಳ ಹಿಂದೆ ಲಕ್ಕೂಭಾಯಿ ಪಾಟಕ್ ನಿಧನ ಹೊಂದಿದರು. ಒಂದೆರಡು ವಾರಗಳ ಹಿಂದೆ ಈ ಕೇಸ್‌ಗೆ ಸಂಬಂಧಪಟ್ಟಂತೆ ಚಂದ್ರಾಸ್ವಾಮಿ ಎದುರಿಸುತ್ತಿರುವ ಜಂಜಾಟಗಳಿಂದ ಬಿಡುಗಡೆ ಪಡೆಯಲು ತಾನು ಒಂಭತ್ತು ಕೋಟಿ ರೂಪಾಯಿಗಳ ದಂಡ ಕಟ್ಟಲು ಸಿದ್ಧ ಇದ್ದೇನೆಂದು ಚಂದ್ರಾಸ್ವಾಮಿ ಸುಪ್ರೀಂ ಕೋರ್ಟಿನ ಮುಂದೆ ಹೇಳಿದ.

ಇವತ್ತು ದೇವಮಾನವರಂತೆ ಮೆರೆದಾಡುತ್ತಿರುವ ರವಿಶಂಕರ್, ರಾಮದೇವ್, ಅಪ್ಪಿಕೊ ಅಮ್ಮನಂಥವರ ಮುಂದೆ ಈ ಚಂದ್ರಾಸ್ವಾಮಿ ಯಾವ ಲೆಕ್ಕಕ್ಕೂ ಇಲ್ಲ. ಆದರೂ ಈತ ಒಂಭತ್ತು ಕೋಟಿ ರೂಪಾಯಿಗಳನ್ನು ದಂಡರೂಪದಲ್ಲಿ ಕಟ್ಟುತ್ತೇನೆ ಎಂದು ಸುಪ್ರೀಂ ಕೋರ್ಟಿನ ಮುಂದೆ ಘೋಷಿಸುತ್ತಾನೆಂದರೆ ಇವತ್ತಿಗೂ ಇವನ ಹತ್ತಿರ ಅದೆಷ್ಟು ಹಣ ಇರಬೇಕೆಂದು ಊಹಿಸಬಹುದು.

ಅವತ್ತು ಯೋಗದ ಮುಖವಾಡದಡಿ ಬಾಂಬ್-ಬಂದೂಕು ತಯಾರಿಸುತ್ತಿದ್ದ ಧೀರೇಂದ್ರ ಬ್ರಹ್ಮಚಾರಿ, ಯಜ್ಞಗಳ ಹೆಸರಲ್ಲಿ ದಲ್ಲಾಳಿ ಕೆಲಸ ಮಾಡುತ್ತಿದ್ದ ಚಂದ್ರಾಸ್ವಾಮಿಯ ಆಧುನಿಕ ಅವತಾರಗಳೇ ರವಿಶಂಕರ್, ರಾಮದೇವ್, ಅಮೃತಾನಂದಮಯಿ ಎಂಬ ಸರ್ವಸಂಗ ಪರಿತ್ಯಾಗಿ ಕೋಟ್ಯಾಧಿಪತಿಗಳು!!!

ಬುದ್ಧಿ ಬರುವುದೆಂದು?

ಧರ್ಮವನ್ನೇ ದಂಧೆಯಾಗಿಸಿಕೊಂಡು ಲೆಕ್ಕವಿಲ್ಲದಷ್ಟು ಆಸ್ತಿ ಗಳಿಸಿರುವ, ಲಕ್ಷಾಂತರ ಜನರನ್ನು ವಂಚಿಸುತ್ತಿರುವ ಹಲವು ಡೋಂಗಿ ದೇವಮಾನವರನ್ನು ಕುರಿತು ಇಲ್ಲಿ ಪ್ರ[illegible]ಸಿದ್ದೇವೆ. ಆದರೆ ನಿರಂತರ ಜನಜಾಗೃತಿಯ ನಡುವೆಯೂ ಧ[illegible]ದ ಹೆಸರಲ್ಲಿ ಥರಥರದ ವಂಚಕರು ಹುಟ್ಟಿಕೊಳ್ಳುತ್ತಿದ್ದಾರೆ. ನೋ[illegible]ತನೋಡುತ್ತಿದ್ದಂತೆ ಅವರ ಭಕ್ತರ ದಂಡೂ ಹೆಚ್ಚುತ್ತಿದೆ. ಕಪ್ಪು ಹಣ ಕೂಡಿಡುವುದೂ ಸೇರಿದಂತೆ ಹಲವಾರು ದಂ[illegible]ಗಳಿಗಾಗಿ ನಾಯಕರೆಂಬ ನಾಲಾಯಕ್ ಎಲಿಮೆಂಟು ಗಳು ವಂಚಕರ ಬೆನ್ನಿಗೆ ನಿಲ್ಲುತ್ತಿದ್ದಾರೆ. ವಿವೇಚನೆ ಸತ್ತವರಂತೆ ವಂಚಕರಿಗೆ ಶರಣೆನ್ನುವ ಜನರಿಗೆ ಬುದ್ಧಿ ಬರುವುದೆಂದು? ಇವರೆಲ್ಲರ ಮುಖವಾಡ ಬಯಲಾಗುವುದೆಂದು?



ಅಪ್ಪಿಕೋ ಅಮ್ಮ ಉರುಫ್ ಸುಧಾಮಣಿ ಒಂದು ಸಾವಿರ ಕೋಟಿ ರೂ. ತೂಗುತ್ತಾಳೆ

ಇವತ್ತು ಸುಧಾಮಣಿ ಇಡಾಮಗ್ಯೆಲ್ ಅಂದರೆ ತಕ್ಷಣ ಯಾರಿಗೂ ಗೊತ್ತಾಗುವುದಿಲ್ಲ, ಮಾತಾ ಅಮೃತಾನಂದಮಯಿ ಉರೂಫ್ ಅಪ್ಪಿಕೋ ಅಮ್ಮನ ಒರಿಜಿನಲ್ ಹೆಸರಿದು. ಇಂಡಿಯಾ ದೇಶದ ಅತೀ ಶ್ರೀಮಂತ ಆಧ್ಯಾತ್ಮಿಕ ಹೆಂಗಸೆಂದರೆ ಅದು ಈ ಮಾತಾ. ಈಕೆಯ ಆಧ್ಯಾತ್ಮದ ಬ್ಯುಸಿನೆಸ್‌ನ ವರ್ಷದ ಟರ್ನ್‌ಓವರ್ 400 ಕೋಟಿ ರೂಪಾಯಿ ಅಂದರೆ ನೀವು ನಂಬುತ್ತೀರಾ!

ಅದರ ವಿವರಗಳನ್ನೊಮ್ಮೆ ಓದಿ: ಮಾತಾ ಅಮೃತಾನಂದಮಯಿ ತನ್ನದೇ ಒಂದು ಸ್ವಂತ ಯೂನಿವರ್ಸಿಟಿ ನಡೆಸುತ್ತಾಳೆ. ಕೊಲ್ಲಂ, ಕೊಚ್ಚಿ ಕೊಯಮತ್ತೂರು, ಬೆಂಗಳೂರು, ಮೈಸೂರು–ಹೀಗೆ ಐದು ಸಿಟಿಗಳಲ್ಲಿ ಅದರ ಕ್ಯಾಂಪಸ್‌ಗಳಿವೆ. ಕೇವಲ ಇದೊಂದೇ ಯುನಿವರ್ಸಿಟಿಯು ಮಾತೆಗೆ ವರ್ಷಕ್ಕೆ ನೂರಾ ಎಪ್ಪತ್ತೈದು ಕೋಟಿ ಬ್ಯುಸಿನೆಸ್ ಕೊಡುತ್ತಿದೆ. ಇದಲ್ಲದೆ ಅಮೃತ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಇಂಜಿನಿಯರಿಂಗ್, ಜರ್ನಲಿಸಂ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳ ಕಾಲೇಜುಗಳು, 33 ಶಾಲೆಗಳು, ಒಂದು ಸುಸಜ್ಜಿತ ಆಸ್ಪತ್ರೆ ಮಾಲೀಕಳಿವಳು. ಇವುಗಳ ಪೈಕಿ ಜನ ಅವಳ ಶಾಲಾಕಾಲೇಜುಗಳಿಗೇ ಹೋಗಲಿ ಅಥವಾ ಕಾಯಿಲೆಯಾಗಿ ಆಸ್ಪತ್ರೆ ಸೇರಲಿ ಫೀಸು ಮಾತ್ರ ಬಲು ದುಬಾರಿ. ದೇಶದ ಟಾಪ್ ಇನ್‌ಸ್ಟಿಟ್ಯೂಟ್‌ಗಳ ಲೆವೆಲ್ಲದು. ಇದಲ್ಲದೆ ಈ ಮಾತೆ 12 ದೇವಸ್ಥಾನ ಹೊಂದಿದ್ದಾಳೆ. ಇವೆಲ್ಲಾ ಒಂಥರಾ ಶಾಪಿಂಗ್ ಮಾಲ್‌ಗಳಿದ್ದ ಹಾಗೆ. ಜೊತೆಗೆ ತನ್ನ ಹುಟ್ಟೂರಾದ ವಳ್ಳಿಕಾವು ಎಂಬ ದ್ವೀಪದಲ್ಲಿ ಐದಂತಸ್ತಿನ ವೈಭವೋಪೇತ ಆಶ್ರಮ ಕಟ್ಟಿಸಿಕೊಂಡಿದ್ದಾಳೆ. ಇಷ್ಟೆಲ್ಲಾ ಇದ್ದ ಮೇಲೆ ಈ ಮಾತೆಯ ಮಹಿಮೆ ಸಾರುವ ಮೀಡಿಯಾನೂ ಒಂದಿರಬೇಕಲ್ಲ.

ಹಾಗಾಗಿ ಅಪ್ಪಿಕೋ ಅಮ್ಮ ತನ್ನದೇ ಒಂದು ಸ್ವಂತ ಟಿವಿ ಚಾನಲ್ ಅನ್ನು ತೇಲಿಬಿಟ್ಟಿದ್ದಾಳೆ.

ಇದೆಲ್ಲಾ ಸೇರಿದರೆ ಅಮೃತಾನಂದಮಯಿಯ ಪ್ರತಿ ವರ್ಷದ ವ್ಯಾಪಾರ ನಾಲ್ಕು ನೂರು ಕೋಟಿ ರೂಪಾಯಿ ತಲುಪುತ್ತದೆ. ಈಕೆ ಹೊಂದಿರುವ ಒಟ್ಟು ಆಸ್ತಿಯ ಬೆಲೆ ಒಂದು ಸಾವಿರ ಕೋಟಿ ರೂಪಾಯಿ!

ಇಂಡಿಯಾ ದೇಶದ ಕುರಿಮಂದೆ ಮಾತ್ರವಲ್ಲದೆ ವಿದೇಶಿಯರೂ ಮಾತೆಗೆ ದೊಡ್ಡದೊಡ್ಡ ಡೊನೇಷನ್ ಕೊಡುತ್ತಿರುತ್ತಾರೆ. 1998-99 ರಲ್ಲಿ ಮಾತೆಗೆ ಹರಿದುಬಂದ ಫಾರಿನ್ ಫಂಡ್ 51 ಕೋಟಿ ರೂ. ವಿಶ್ವಸಂಸ್ಥೆ ಕೂಡ ಇಂಡಿಯಾದ ಎನ್‌ಜಿಓಗಳ ಕುರಿತಂತೆ ವರದಿ ನೀಡುವ ಸ್ಪೆಷಲ್ ಕನ್‌ಸಲ್ಟೇಷನ್ ಸ್ಟೇಟಸ್ ಅನ್ನೇ ಮಾತೆಗೆ ಕೊಟ್ಟಿದೆ. ಆ ಲೆಕ್ಕದಲ್ಲಿ ಅತಿಹೆಚ್ಚು ಫಾರಿನ್ ಫಂಡು ಪೀಕುತ್ತಿರುವ ಚಾಲಾಕಿಯೆಂದರೆ ಈ ಮಾತೆಯೆ. ಇವಳ ವ್ಯವಹಾರಗಳ ಬಗ್ಗೆ ಯಾವ ಸರ್ಕಾರವ್ರೂ ಇನ್‌ಕಂ ಟ್ಯಾಕ್ಸಿನವರೂ ಲೆಕ್ಕ ಕೇಳುವುದಿಲ್ಲ, ಇವಳ ಭಕ್ತರ ಪೈಕಿ ಕೇರಳದ ಮಾಜಿ ಮುಖ್ಯಮಂತ್ರಿ ಹಾಲಿ ರಕ್ಷಣಾ ಸಚಿವ ಎ.ಕೆ. ಆಂಟನಿ ತರಹದವರೆಲ್ಲಾ ಇರುವಾಗ ಲೆಕ್ಕ ಕೇಳುವ ಧೈರ್ಯ ಯಾರಿಗೆ ತಾನೆ ಬರುತ್ತವೆ.

ಕರ್ನಾಟಕದಲ್ಲೂ ಎರಡು ವರ್ಷಗಳ ಹಿಂದೆ ಪ್ರವಾಹ ಬಂದಾಗ ನೊಂದ ಜನರಿಗೆ ಫ್ರೀಯಾಗಿ ಮನೆ ಕಟ್ಟಿಸುತ್ತೇನೆಂದು ಹೇಳಿದ್ದಳು. ಆದರೆ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಿಸುವ ಮೊದಲೇ ಬೆಂಗಳೂರಿನ ಹತ್ತಿರ ಕೋಟಿಗಟ್ಟಲೆ ಬೆಲೆಬಾಳುವ ಜಮೀನನ್ನು ಸರ್ಕಾರದಿಂದ ಪಡೆದು ಲಾಭ ಮಾಡಿಕೊಂಡ ತಾಲಾಕಿ ಹೆಂಗಸಿವಳು. ಅಂದಹಾಗೆ ತನ್ನನ್ನು ಹುಡುಕಿಕೊಂಡು ಬರ[illegible] ಭಕ್ತರನ್ನು ಹತ್ತಿರಕ್ಕೆ ಎಳೆದುಕೊಂಡು ಸ್ವಲ್ಪಹೊತ್ತು ತಬ್ಬಿಕೊಂಡು ಆಮೇಲ[illegible] ಕಳಿಸುವ ವಿಶೇಷ ಆಧ್ಯಾತ್ಮಿಕತೆ ಈಕೆಯದ್ದು! ಇಂತಹ ಎ ಸರ್ಟಿಫಿಕೇ[illegible] ಆಧಾತ್ಮ ಪಾಪ್ಯುಲರ್ ಆಗದೆ ಇನ್ನೇನು?

ರಾಮಕೃಷ್ಣ ಯಾದವ್ ಅಲಿಯಾಸ್ ಬಾಬಾ ರಾಮದೇವ್

ವಾರ್ಷಿಕ ಟರ್ನ್ ಓವರ್: 500 ಕೋಟಿ ರೂಪಾಯಿ

ಒಟ್ಟು ಆಸ್ತಿಯ ಮೌಲ್ಯ: 1,000 ಕೋಟಿ ರೂಪಾಯಿ

ದಂಧೆಯ ಕೇಂದ್ರಗಳು: ಹರಿದ್ವಾರದಲ್ಲಿರುವ ಪತಂಜಲಿ ಯೋಗ ...ಠ, ದಿವ್ಯ ಯೋಗಮಂದಿರ, ಪತಂಜಲಿ ...ಯುರ್ವೇದ ಕಾಲೇಜ್, ಪತಂಜಲಿ ಚಿಕಿತ್ಸಾಲಯ, ...ಯೋಗ ಗ್ರಾಮ, ಗೋಶಾಲೆ, ಪತಂಜಲಿ ಫುಡ್ ...ಅಂಡ್ ಹರ್ಬಲ್ ಪಾರ್ಕ್ ಇತ್ಯಾದಿ.



ಇಲ್ಲಿರುವ ಫೋಟೊ ನೋಡಿ. ಕೇವಲ ...ದಿನೈದು ವರ್ಷಗಳ ಹಿಂದೆ ಹರಿದ್ವಾರದ ...ಸ್ತೆಗಳಲ್ಲಿ ಒಂದು ಲಡಾಸ್ ಸೈಕಲನ್ನು ತುಳಿಯುತ್ತಾ ...ಲವು ಜನರ ಮನೆಯಲ್ಲಿ ಪೂಜೆ, ಯಜ್ಞ ...ತ್ಯಾದಿಗಳನ್ನು ಮಾಡಿ ಹೊಟ್ಟೆಹೊರೆಯುತ್ತಿದ್ದ ...ಬಾಬಾ ರಾಮದೇವನ ಅಂದಿನ ಚಿತ್ರ ಇದು.


ಆದರೀಗ ಅದೇ ರಾಮದೇವ್ ಸ್ವಂತ ...ಮಾನವನ್ನು ಇಟ್ಟುಕೊಂಡಿದ್ದಾನೆ, ಐಶಾರಾಮಿ ...ರುಗಳಲ್ಲಿ ಸುತ್ತಾಡುತ್ತಾನೆ, ಇತ್ತೀಚೆಗೆ ...ಕಾಟ್‌ಲ್ಯಾಂಡಿನಲ್ಲಿ ಒಂದು ದ್ವೀಪವನ್ನೇ ...ಕೊಂಡುಕೊಂಡಿದ್ದಾನೆ...

ಇದನ್ನೆಲ್ಲ ಆತ ಸಕ್ರಮವಾಗಿ ...ಂಡಿತವಾಗಿಯೂ ಗಳಿಸಿಲ್ಲ. ಇಲ್ಲವೆಂದರೆ ಮೊನ್ನೆತನಕ ಭ್ರಷ್ಟಾಚಾರದ ವಿರುದ್ಧ ಗಂಟಲು ಹರಿದುಹೋಗುವಂತೆ ಕಿರುಚಾಡುತ್ತಿದ್ದ ರಾಮದೇವ್ ಅದ್ಯಾಕೆ ತನ್ನ ಆಸ್ತಿಪಾಸ್ತಿಗಳ ಸಂಪೂರ್ಣ ವಿವರಗಳನ್ನು ಬಹಿರಂಗಪಡಿಸಲಿಲ್ಲ?

ಉದಾಹರಣೆಗೆ ರಾಮದೇವ್ ತನ್ನ ಟ್ರಸ್ಟ್‌ಗಳ ಆರ್ಥಿಕ ವಿವರಗಳನ್ನು ನೀಡಿದ್ದಾನೆಯೇ ಹೊರತು ಆತ ನಡೆಸುವ ಪತಂಜಲಿ ಆಯುರ್ವೇದ ಕಂಪನಿ (ಟರ್ನ್ ಓವರ್ 320 ಕೋಟಿ), ದಿವ್ಯ ಫಾರ್ಮಸಿ ಕಂಪನಿ (ಟರ್ನ್ ಓವರ್ 300 ಕೋಟಿ) ಸೇರಿದಂತೆ ವಿವಿಧ ಕಂಪನಿಗಳ ಆದಾಯದ ಬಗ್ಗೆ ರಾಮದೇವ್ ತುಟಿಪಿಟಿಕ್ ಎಂದಿಲ್ಲ!

ರಾಮದೇವ್ ಅಕ್ರಮವಾಗಿ ಪಡೆದಿರುವ ಹಣ ಮತ್ತು ಭೂಮಿಯಲ್ಲೇ ತನ್ನ ಸಾಮ್ರಾಜ್ಯವನ್ನು ಕಟ್ಟಿಕೊಂಡಿರುವುದೂ ಈಗ ಎಲ್ಲರಿಗೆ ಗೊತ್ತಾಗಿದೆ.





ಈ ರಾಮದೇವ್ ಎಂತಹ ಅವಿವೇಕಿ ಎಂದರೆ ಆತ ದೆಹಲಿಯಲ್ಲಿ ಉಪವಾಸ ಕೂತಿದ್ದಾಗ ವಿದೇಶಿ ಕಂಪನಿಗಳ ವಿರುದ್ಧವೂ ಕೆಂಡಕಾರಿದ್ದ, ಅವುಗಳನ್ನು ಬಹಿಷ್ಕರಿಸಿದರೆ ದೇಶದ ಸಂಪತ್ತು ಇಲ್ಲೇ ಉಳಿಯುತ್ತದೆ ಎಂದಿದ್ದ.

ಆದರೆ ಇದೇ ರಾಮದೇವನ ಪತಂಜಲಿ ಆಯುರ್ವೇದ ಕಂಪನಿ ತಯಾರಿಸುವ ಜ್ಯೂಸ್ ಅನ್ನು ಮಾರಲು ಆತ ಒಪ್ಪಂದ ಒಂದಕ್ಕೆ ಸಹಿ ಹಾಕಿರುವುದು ಜಗತ್ತಿನ ಅತಿ ದೊಡ್ಡ ಹಾಗು ವಿದೇಶಿ ಕಂಪನಿಯಾದ ಟೆಟ್ರಾ ಪ್ಯಾಕ್ ಕಂಪನಿಯೊಂದಿಗೆ! ಅಷ್ಟೇ ಅಲ್ಲ, ಇತ್ತೀಚೆಗೆ ಈತ ಅಮೆರಿಕದ ಹರ್ಬೋ ವೇದ್ ಎಂಬ ಕಂಪನಿಯನ್ನು ಖರೀದಿಸಿದ್ದಾನೆ. ಆದರೆ ಅದಕ್ಕೆ ತಾನು ತೆತ್ತ ಹಣವೆಷ್ಟು ಎಂಬುದನ್ನು ಈಗಲೂ ಗೌಪ್ಯವಾಗಿಟ್ಟಿದ್ದಾನೆ!!

ಈತನಿಗೆ ಭ್ರಷ್ಟಾಚಾರದ ವಿರುದ್ಧವಾಗಲಿ, ವಿದೇಶಿ ಕಂಪನಿಗಳ ವಿರುದ್ಧವಾಗಲಿ ದನಿ ಎತ್ತುವ ನೈತಿಕತೆ ಇದೆಯೇ.

...ದೆಹಲಿ ಇಸ್ಕಾನ್‌ರವರ, ವಿಚಿತ್ರ ದಂಧೆಗಳು

ಒಂದು ಬ್ಯಾಂಕಿಗೆ ನೂರಾರು ಬ್ರಾಂಚ್‌ಗಳಿರುವುದು, ಒಂದು ಸರ್ಕಾರಿ ಇಲಾಖೆಯು ...ತ್ತಾರು ಸ್ಥಳಗಳಲ್ಲಿ ಕಚೇರಿಗಳನ್ನು ಹೊಂದಿರುವುದು ಸಹಜ.

ಆದರೆ

ಒಂದು ಧಾರ್ಮಿಕ ಗುಂಪು ನಾನೂರು ದೇವಸ್ಥಾನಗಳನ್ನು, ಒಂದು ನೂರು ಹೋಟೆಲುಗಳನ್ನು ...ಡೆಸುತ್ತಿದ್ದರೆ ಅದನ್ನು ...ನನ್ನುತ್ತೀರಿ?



ಬೇರೇನು ಅದನ್ನು ಇಸ್ಕಾನ್ ...ನ್ನಬೇಕು ಅಷ್ಟೆ.

ನೀವು ನಂಬುತ್ತೀರೋ ...ಲ್ಲವೊ. ಕೇವಲ ಒಂದು ...ಶಕದ ಹಿಂದೆ ದೆಹಲಿಯ ...ಸ್ಕಾನ್‌ನವರ ಕೈಲಿ ...ಮೂಪೈಸೆಯೂ ಇರಲಿಲ್ಲ. ...ಮಿಡಲ್‌ಕ್ಲಾಸಿನ ಭಕ್ತರು ...ಕೊಡುವ ಚಿಲ್ಲರೆ ...ಕಾಸಿನಿಂದಲೇ ಈ ಕೃಷ್ಣ ...ಭಕ್ತರು ಕಾಲಾಯಾಪನೆ ಮಾಡುತ್ತಿದ್ದರು. ಇದರಿಂದ ರೋಸಿಹೋದ ದೆಹಲಿಯ ...ಸ್ಕಾನ್‌ನವರಿಗೆ ಒಂದು ದಿನ ಜ್ಞಾನೋದಯ ಆಗಿಯೇ ಹೋಯಿತು. ಅವರೀಗ ...ನೂರಾರು ಇಸ್ಕಾನ್ ದೇವಾಲಯ ಹಾಗೂ ಹೋಟೆಲ್‌ಗಳನ್ನು ನಡೆಸುತ್ತಿದ್ದಾರೆ. ...ಧರ್ಮ-ದೇವರ ಹೆಸರಲ್ಲಿ!

'ಸಂಕಟ ಬಂದಾಗ ವೆಂಕಟರಮಣ' ಎಂದು ಬರುವ ಮಿಡಲ್ ಕ್ಲಾಸಿನವರಿಗಿಂತ Neo ...rich ಜನರಿಗೆ ಇಸ್ಕಾನ್ ಬಲೆ ಬೀಸಿತು. ಈ ಕ್ಯಾಟಗರಿಯ ಜನ ತಮಗೆ ಸಿಗುತ್ತಿದ್ದ ಭಾರಿ ...ಣ, ಸಂಬಳ, ಸುಖಗಳನ್ನು ನಂಬಲಾಗದೆ ಅಂಥದನ್ನು ಬಿಟ್ಟಿರಲೂ ಆಗದೆ ಕಕ್ಕಾಬಿಕ್ಕಿಯಾಗುವ ...ನ ಇವರು. ಅಂಥವರಿಗೆ ಗಲೀಜು ದೇವಸ್ಥಾನಗಳು, **unsophisticated** ಆಗಿ ಕಾಣುವ ...ಪೂಜಾರಿಗಳ ಬಗ್ಗೆ ನಿರುತ್ಸಾಹ. ಆದರೆ ನಿತ್ಯಜೀವನದಲ್ಲಿ ನೆಂಚಿಕೊಳ್ಳಲು ಕೊಂಚ ಆಧ್ಯಾತ್ಮವೂ ...ಬೇಕಲ್ಲ, ಅಂಥವರಿಗೆ ಇಸ್ಕಾನ್ ಒಳ್ಳೇ ಪರಿಹಾರದ ದಾರಿ ತೋರಿಸಿತು. ಇಂಗ್ಲಿಷ್ ಮಾತನಾಡುವ ...ಪುರೋಹಿತರು, ಅರ್ಥವಾಗದ ಪಾರಮಾರ್ಥಿಕ ಮಾತನಾಡುತ್ತಾ ಗೊತ್ತೇ ಆಗದಂತೆ ಕಾಸು ಕಿತ್ತು ಕಳಿಸುವ ದಂಧೆಯಲ್ಲಿ ಇಸ್ಕಾನ್ ಪಳಗಿತು.



ದೆಹಲಿಯ ಇಸ್ಕಾನ್‌ನಲ್ಲಿ ಬ್ರಿಜೇಂದ್ರ ನಂದನ ದಾಸ ಅಂತೊಬ್ಬನಿದ್ದಾನೆ.

We need cream not crowd

-ಅನ್ನುತ್ತಾನವನು.

ಅಂದರೆ ಜೇಬನಲ್ಲಿ ದುಡ್ಡಿರದ ಜನಜಂಗುಳಿಗಿಂತ ಶ್ರೀಮಂತ ಹೆಡ್ಡರು ನಮಗೆ ಸಿಕ್ಕರೆ ಸಾಕೆಂಬ ...ಲುವು ಅದು. ದಿನಬೆಳಗಾದರೆ ತಮ್ಮ ಸ್ಪಿರಿಚ್ಯುವೆಲ್ ಬ್ಯುಸಿನೆಸ್ ವಿಸ್ತರಿಸುವ ದಾರಿ ...ಹುಡುಕುವ ಇಸ್ಕಾನ್‌ಗೆ ಬೆಂಗಳೂರು, ನೋಯ್ಡಾ, ತಿರುಪತಿ, ಗಾಜಿಯಾಬಾದ್‌ಗಳಲ್ಲೂ ...ಬ್ರಾಂಚ್ ಮಾಡುವ ಪ್ಲಾನಿದೆ.

...ನಟಿ ಹೇಮಾಮಾಲಿನಿ, ಲಾಲೂ ಪ್ರಸಾದ್ ಮಕ್ಕಳ ಪೈಕಿ ಒಬ್ಬ ದೆಹಲಿ ಇಸ್ಕಾನ್ ...ಭಕ್ತರಾಗಿದ್ದಾರೆ. ಹೇರಳವಾಗಿ ಹಣ ಕೊಡುತ್ತಿದ್ದಾರೆ. ನೀವ್ಯಾರಾದರೂ ಇಸ್ಕಾನ್‌ಗೆ ಮೆಂಬರ್ ...ಆಗಬೇಕೆಂದರೆ ಅದರ ಮೊತ್ತವೇ ಹತ್ತು ಸಾವಿರ ರೂಪಾಯಿಗಳಾಗುತ್ತದೆ. ಈಗ ಇದೊಂದು ...ಸ್ಟೇಟಸ್ ಸಿಂಬಲ್ಲೂ ಹೌದು.

...ಜನಮರುಳೋ....



ವಾರ್ಷಿಕ ಟರ್ನ್ ಓವರ್: 400 ಕೋಟಿ ರೂಪಾಯಿ

ಒಟ್ಟು ಆಸ್ತಿಯ ಮೌಲ್ಯ: 1,000 ಕೋಟಿ ರೂಪಾಯಿ

ದಂಧೆಯ ಕೇಂದ್ರಗಳು: ಬೆಂಗಳೂರಿನಲ್ಲಿರುವ ಆರ್ಟ್ ಆಫ್ ಲಿವಿಂಗ್‌ನ ಕೇಂದ್ರ ಕಚೇರಿ, ಶ್ರೀ ಶ್ರೀ ರವಿಶಂಕರ್ ವಿದ್ಯಾ ಮಂದಿರ ಟ್ರಸ್ಟ್, ಬೆಂಗಳೂರಿನಲ್ಲಿನ ಪಿಯು ಕಾಲೇಜ್, ಶ್ರೀ ಶ್ರೀ ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್ ಬೆಂಗಳೂರು, ಶ್ರೀ ಶ್ರೀ ವಿಶ್ವವಿದ್ಯಾಲಯ, ಅಮೆರಿಕದಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಂಡ್ ಎಜುಕೇಶನಲ್ ಟ್ರಸ್ಟ್ ಇತ್ಯಾದಿ.. ಇತ್ತೀಚೆಗೆ ಚೀನಾದಲ್ಲೂ ಒಂದು ಬೃಹತ್ ಆಶ್ರಮ ತೆರೆದಿದ್ದಾನೆ.

ಮೂಲತಃ ತಮಿಳುನಾಡಿನವನಾದ ಈ ವ್ಯೆಯಾರಿ ರವಿಶಂಕರ್ ರತ್ನಂನ ಹೆಸರು ಮೊದಲು ಕೇಳಬರಲಾರಂಭಿಸಿದ್ದು 1980ರ ದಶಕದ ಆರಂಭದಲ್ಲಿ, ಆಗಿನ್ನೂ ಇವನ ಸುದರ್ಶನ ಕ್ರಿಯಾ ಇಷ್ಟೊಂದು ಜನಪ್ರಿಯವಾಗಿರಲಿಲ್ಲ, ಈಗಿರುವಷ್ಟು ಮಾಧ್ಯಮಗಳ ಮತ್ತು ರಾಜಕಾರಣಿಗಳ ಬೆಂಬಲ ಇವನಿಗಿರಲಿಲ್ಲ.

ರವಿಶಂಕರ್ ರತ್ನಂ ಅಲಿಯಾಸ್ ಶ್ರೀ ಶ್ರೀ ರವಿಶಂಕರ್

ಆದರೆ ಈತ ಎಂತಹ ಚಾಣಾಕ್ಷನೆಂದರೆ ಮೊದಮೊದಲು ಜಗತ್ತಿನ ಯಾವುದೇ ದಿಕ್ಕಿನಲ್ಲಿ ಏನೇ ನಡೆದರೂ ಅದರ ಬಗ್ಗೆ ಬಾಲಿಷ ಪ್ರತಿಕ್ರಿಯೆಗಳನ್ನು ನೀಡಲಾರಂಭಿಸಿದ. ನಿಧಾನವಾಗಿ ತನ್ನ ಕೇಂದ್ರದಲ್ಲೇ ಪತ್ರಿಕಾಗೋಷ್ಠಿಗಳನ್ನು ಏರ್ಪಡಿಸಲಾರಂಭಿಸಿದ. ಕೆಲ ತಲೆಕೆಟ್ಟ ಪತ್ರಿಕಾ ಸಂಪಾದಕರ ತಲೆ ಸವರಿ ಅವರ ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆಯಲಾರಂಭಿಸಿದ. ಅಪ್ಪಟ ಪ್ರಚಾರ ಪ್ರಿಯನಾದ ರವಿಶಂಕರ ಹೀಗೆ ದಿನನಿತ್ಯ ಮಾಧ್ಯಮಗಳಲ್ಲಿ ಮಿಂಚಲಾರಂಭಿಸಿದ.

ಇದೇ ಹೊತ್ತಿಗೆ ತನ್ನ ಸುದರ್ಶನ ಕ್ರಿಯೆಯಿಂದ ಬದುಕಿನಲ್ಲಿ ನೆಮ್ಮದಿ ಸಿಗುತ್ತದೆಂದು ಬೊಗಳಲು ಶುರುಹಚ್ಚಿಕೊಂಡ. ಅದನ್ನು ಕೆಲ ಮಧ್ಯಮ ವರ್ಗದ ತಿಕ್ಕಲರು ನಂಬಿದರು ಕೂಡ. ಅಷ್ಟೇ ಅಲ್ಲ, ಈತ ಕೃಷ್ಣನ ಸಂಗೀತ ಹಾಕಿ ವ್ಯೆಯಾರಿಯಂತೆ ಕುಣಿಯುತ್ತಾ ಎಲ್ಲರೂ ಕುಣಿಯುವಂತೆ ಮಾಡುವುದೂ ಆಧ್ಯಾತ್ಮ ಎಂದು ನಂಬಿದರು. ಅಂಥವರಲ್ಲಿ ಬಾಲಿವುಡ್ ನಟಿಯರು, ಟೈಮ್ಸ್ ಆಫ್ ಇಂಡಿಯಾದ ಮಾಲಕಿ ಇಂದೂ ಜೈನ್, ಐಟಿ ವಲಯದ ಅಬ್ಬೆಪಾರಿಗಳು, ವಿದೇಶಿ ಮಂಗಗಳೂ ಇದ್ದಾರೆ.

ಇಂತಹ ಜನರ ಬೆಂಬಲದೊಂದಿಗೆ ರವಿಶಂಕರ್ ಬೆಳೆಯಲಾರಂಭಿಸಿದ. ಆತನ ಭಟ್ಟಂಗಿಗಳ ಪ್ರಕಾರ ಇವತ್ತು ಜಗತ್ತಿನ 151 ದೇಶಗಳಲ್ಲಿ ಒಟ್ಟು 300 ಮಿಲಿಯನ್ ಬೆಂಬಲಿಗರಿದ್ದಾರಂತೆ. ಸ್ವತಃ ರವಿಶಂಕರ್ ಹೇಳಿಕೊಳ್ಳುವ ಪ್ರಕಾರ ಆತ ಇತರೆ ದೇವಮಾನವರಿಗಿಂತ ಹೆಚ್ಚು ಜನಪ್ರಿಯನಂತೆ. ಇಷ್ಟೇ ಅಲ್ಲದೆ, ಈತ ಐರ್‌ಲ್ಯಾಂಡಿನ ಭಿನ್ನಮತೀಯರಿಗೆ ಸಾಂತ್ವನ ಹೇಳಿ ಅವರು ಸ್ವಾತಂತ್ರ್ಯಕ್ಕಾಗಿನ ತಮ್ಮ ಹೋರಾಟವನ್ನು ಕೈಬಿಟ್ಟಿದ್ದಾರಂತೆ, ಶ್ರೀಲಂಕಾದ ತಮಿಳರು ಇವನ ಸುದರ್ಶನ್ ಕ್ರಿಯಾ ಮಾಡುವ ಮೂಲಕವೇ ಅಲ್ಲಿನ ಸಿಂಹಳೀಯರೊಂದಿಗೆ ಸ್ನೇಹ ಬೆಳೆಸಿದ್ದಾರಂತೆ, ಆಂಧ್ರ ಪ್ರದೇಶದ ನಕ್ಸಲರೂ ಇವನಿಂದ ಯೋಗ ಕಲಿತು ತಮ್ಮ ಹೋರಾಟವನ್ನು ತ್ಯಜಿಸಿದ್ದಾರಂತೆ. ಇಂತಹ ಅಂತೆಕಂತೆಗಳನ್ನು ಹೇಳಿಕೊಳ್ಳುತ್ತಾ ಈ ವ್ಯೆಯಾರಿ ಪ್ರತಿಷ್ಠಿತ ನೊಬೆಲ್ ಬಹುಮಾನ ಗೆಲ್ಲುವ ಸ್ಕೆಚ್ ಹಾಕಿದ್ದಾನೆ. ಹಾಗೊಮ್ಮೆ ಆ ಪ್ರಶಸ್ತಿ ಇವನಿಗೆ ದಕ್ಕಿದರೆ ಅದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿರುವುದಿಲ್ಲ.

ಈ ರವಿಶಂಕರ್ ಬೆಂಗಳೂರು-ಕನಕಪುರ ನಡುವೆ ಒಂದು ಐಷಾರಾಮಿ ಆಶ್ರಮವನ್ನು ತೆರೆದಿದ್ದಾನೆ. ಅದಕ್ಕೊಂದು ರಾಜ್ಯ ಸರ್ಕಾರದಿಂದ ಒಂದಷ್ಟು ಭೂಮಿಯನ್ನು 99 ವರ್ಷಗಳಿಗೆ ಲೀಸ್ ಮೇಲೆ ಪಡೆದಿದ್ದಾನೆ. ಆದರೆ 'ಅಂತರರಾಷ್ಟ್ರೀಯ' ಗುರುವಾಗಿರುವವನ ಐಲಾಟಗಳಿಗೆ ಅಷ್ಟು ಭೂಮಿ ಎಲ್ಲಿ ಸಾಕಾಗುತ್ತದೆ? ಅದಕ್ಕೆ ಅವನೀಗ ಅಕ್ಕಪಕ್ಕದ ರೈತರನ್ನು, ದಲಿತರನ್ನು ಬೆದರಿಸಿ ಅವರ ಆಸ್ತಿಗಳನ್ನು ಕಬ್ಜಾ ಮಾಡಿಕೊಳ್ಳುತ್ತಿದ್ದಾನೆ. ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಕಬಳಿಸುತ್ತಿದ್ದಾನೆ.

ಹೋಗಲಿ, ಇಷ್ಟೆಲ್ಲ ಜಾಗದಲ್ಲಿ ಏನೇನಿದೆ ಎನ್ನುತ್ತೀರಾ? ಮೂರು ಅಂತಸ್ತಿನ ಐಶಾರಾಮಿ ಆಶ್ರಮ ಇದೆ, ಮಾನವ ನಿರ್ಮಿತ ಕೆರೆ ಇದೆ, ವಿವಿಐಪಿಗಳಿಗೆಂದು ಹೆಲಿಪ್ಯಾಡ್ ಇದೆ, ಸೈಬರ್ ಕೆಫೆ, ಪುಸ್ತಕದ ಅಂಗಡಿ, ರವಿಶಂಕರ್ ತಯಾರಿಸುವ ಆಯುರ್ವೇದದ ಔಷಧಿಗಳನ್ನು ಮಾರುವ ಮಳಿಗೆ, ಭಕ್ತರು ಉಳಿದುಕೊಳ್ಳಲು ಕೊಠಡಿಗಳು ಇತ್ಯಾದಿ ಇದೆ.

ಅಂದಹಾಗೆ ಇದ್ಯಾವುದೂ ಪುಕ್ಕಟೆಯಾಗಿ ಲಭ್ಯವಿಲ್ಲ. ಇಲ್ಲಿಗೆ ಬಂದು ಸುದರ್ಶನ ಕ್ರಿಯಾ ಕಲಿಯಬೇಕೆಂದರೆ ಸಾವಿರಾರು ರೂಪಾಯಿಗಳನ್ನು ಕೊಡಬೇಕು. ಹೋದ ವರ್ಷ ಆರ್ಟ್ ಆಫ್ ಲಿವಿಂಗ್ ಒಂದು ಸಭೆಯನ್ನು ಏರ್ಪಡಿಸಿದಾಗ 5,000 ರೂಪಾಯಿಗಳನ್ನು ತೆತ್ತ 5,50,000 ಜನ ಅದರಲ್ಲಿ ಭಾಗವಹಿಸಿದ್ದರು. ಅದರ ಮೊತ್ತವೇ 275 ಕೋಟಿ!

ಜನರ ಮರುಳನ್ನು ಹೀಗೂ ಲಾಭವಾಗಿಸಿಕೊಳ್ಳುತ್ತಾರೆ ರವಿಶಂಕರನಂತಹ ಢೋಂಗಿ ಗುರುಗಳು!!








ಸ್ವರ್ಣವಲ್ಲಿ ಸ್ವಾಮಿಗೇಕೆ ಪರಿಸರ ಪ್ರಶಸ್ತಿ?


ಸ್ವರ್ಣವಲ್ಲಿ ಸ್ವಾಮಿ ಗಂಗಾಧರೇಂದ್ರ ಸರಸ್ವತಿ

ಸ್ವಜಾತಿ ಹವ್ಯಕ ಶಿಷ್ಯ ಗಣದಿಂದ 'ಹಸಿರು ಸ್ವಾಮಿ' ಎಂಬ ಅಡ್ಡಹೆಸರು ಪಡೆದಿರುವ ಶಿರಸಿಯ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಪೀಠಾಧಿಪತಿ ಗಂಗಾಧರೇಂದ್ರರಿಗೆ ಪರಿಸರ ಪ್ರಶಸ್ತಿ ಕೊಡಬಹುದಾ? ಆತನಿಗೆ ಆ ಪುರಸ್ಕಾರ ಪಡೆಯುವ ಯೋಗ್ಯತೆ ಇದೆಯಾ? ಸ್ವಾಮೀಜಿಗೆ ಪರಿಸರ ಪ್ರಶಸ್ತಿ ಕೊಡಿಸಿ ಅರ್ಹರಿಗೆ ಅನ್ಯಾಯ ಮಾಡಿರುವ ಅಧಿಕಾರಸ್ಥ ಹೈಗರ ಮಾಣಿಗಳಿಗೆ ಮಾನ-ಮರ್ಯಾದೆ-ಆತ್ಮಸಾಕ್ಷಿ ಎಂಬುದಿದೆಯಾ? ಧರ್ಮಕಾರಣದ ಯಡ್ಡಿ ದರ್ಬಾರಿನಲ್ಲಿ ಅನರ್ಹರು-ಅಯೋಗ್ಯರೇ ಮಹಾ ಸಾಧಕರಂತೆ ಮೆರೆಯುತ್ತಿದ್ದಾರಲ್ಲವಾ? ಹೇ...ರಾಮ್... ಕರ್ನಾಟಕಕ್ಕೆಂದು ಮುಕ್ತಿ?!

ಶಿರಸಿ ಸೀಮೆಯ ಬ್ರಾಹ್ಮಣರ ಮಠಾಧೀಶ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗೆ ಯಡ್ಡಿಯ ಪುರೋಹಿತಶಾಹಿ ಸರ್ಕಾರ 'ಪರಿಸರ ಪ್ರಶಸ್ತಿ' ಕೊಟ್ಟು ಕೃತಾರ್ಥವಾಗಿದೆ!. ಉತ್ತರ ಕನ್ನಡ ಮತ್ತು ಪಶ್ಚಿಮಘಟ್ಟದ ಪರಿಸರ ಕಾಪಾಡಿದ 'ಸಾಧನೆ'ಗಾಗಿ ಸ್ವಾಮೀಜಿಯು ಬಿರುದು-ಬಾವಲಿಗೆ ಭಾಜನರಾಗಿದ್ದಾರೆ. ಕಾವಿಗಳ ಕೈಯಲ್ಲಿರುವ ಬಿಜೆಪಿ ಸರ್ಕಾರ ಸ್ವಾಮಿಗಳಿಗೆ ನೀಡುವ ಕೋಟಿ-ಕೋಟಿ ಕಾಸು-ಪ್ರಶಸ್ತಿ-ಪುರಸ್ಕಾರದಲ್ಲಿ ಹೆಚ್ಚುಗಾರಿಕೆ ಏನಿಲ್ಲ; ಬೇಕಾಬಿಟ್ಟಿಯಾಗಿ ಅನರ್ಹ ಕಾವಿಗಳಿಗೆಲ್ಲ ಪಡೆಯುತ್ತಿರುವ ಪ್ರಶಸ್ತಿ-ಸನ್ಮಾನಕ್ಕೆ ಅದ್ಯಾವ ಪಾವಿತ್ರ್ಯ-ಪ್ರಾಮುಖ್ಯತೆಯೂ ಇಲ್ಲ!

ಸ್ವಜಾತಿ ಹವ್ಯಕ ಶಿಷ್ಯ ಗಣದಿಂದ 'ಹಸಿರು ಸ್ವಾಮಿ' ಎಂಬ ಅಡ್ಡಹೆಸರು ಪಡೆದಿರುವ ಶಿರಸಿಯ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಪೀಠಾಧಿಪತಿ ಗಂಗಾಧರೇಂದ್ರರಿಗೆ ಅದೇ ಬ್ರಾಹ್ಮಣ ಲಾಬಿ ಈಗ ಸರ್ಕಾರಿ ಪರಿಸರ ಪ್ರಶಸ್ತಿ ಕೊಡಿಸಿದೆ. ಉತ್ತರ ಕನ್ನಡದ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಮಾಣಿ, ಸೋಗಲಾಡಿ ಸಂಸದ ಅನಂತ್ಮಾಣಿ, ಪಶ್ಚಿಮಘಟ್ಟ ಕಾರ್ಯಪಡೆ ಅಧ್ಯಕ್ಷ-ಅರಣ್ಯಾಗ್ನಿ ಅನಂತ ಹೆಗಡೆ ಆಶೀಸರ ಮತ್ತು ಪಾನ ಸಂಯಮ ಮಂಡಳಿ ಅಧ್ಯಕ್ಷ-ಮನುವಾದಿ ಸಚ್ಚಿದಾನಂದ ಹೆಗಡೆ ಎಂಬ ಗೂಟದ ಕಾರಿನ ಚಿಡ್ಡಿಧೀರರು ಸ್ವರ್ಣವಲ್ಲಿ ಮಠದ ಶಿಷ್ಯೋತ್ತಮರು. ಈ ದುಷ್ಟ ಚತುಷ್ಟಯರು ರಹಸ್ಯ ಕಾರ್ಯಾಚರಣೆ ನಡೆಸಿ ತಮ್ಮ ಪೂಜ್ಯ ಗುರುವರ್ಯನಿಗೆ ಬರೋಬ್ಬರಿ ಒಂದು ಲಕ್ಷ ಇನಾಮು-ಪರಿಸರ ಸಂರಕ್ಷಕನೆಂಬ ಕಿರೀಟ ಕೊಡಿಸಿದ್ದಾರೆ.


ಮಂತ್ರಿ ಕಾಗೇರಿ

ಈ ಕಾವಿಜೀವಿಗೆ ಹಸಿರು ಪ್ರಶಸ್ತಿ ಕೊಡಲು ಮಾಲಿನ್ಯ ನಿಯಂತ್ರಣ ಮಂಡಳಿ ಪರಿಗಣಿಸಿರುವ ಕ್ಯಾಲಿಬರ್‌ಗಳಾವುದು ಗೊತ್ತಾ? ಬೇಡ್ತಿ ಜಲ ವಿದ್ಯುತ್, ಅಘನಾಶಿನಿ ಜಲವಿದ್ಯುತ್, ತದಡಿ ಉಷ್ಣ ವಿದ್ಯುತ್ ಮತ್ತು ಹಣಕೋಣ ಉಷ್ಣ ವಿದ್ಯುತ್ ಯೋಜನೆಗಳು ಈ ಸ್ವಾಮೀಜಿಯ 'ನೇತೃತ್ವ'ದಲ್ಲಿ ನಡೆದಿದೆಯಂತೆ; ಆತ ಹಳ್ಳಿ-ಹಳ್ಳಿಗೆ ಹೋಗಿ ಸಸಿ ವಿತರಿಸಿ ಪರಿಸರ ಜಾಗೃತಿ ನಡೆಸಿದ್ದಾರಂತೆ. ಈ 'ಪುಣ್ಯ ಕಾರ್ಯ'ಕ್ಕಾಗಿ ಸದ್ರಿ ಪರಿಸರ ಪ್ರಶಸ್ತಿಯಂತೆ. ಆದರೆ ಇದೆಲ್ಲ "ಸಿಲ್ಲಿ ಅರ್ಹತೆ!" ಈ ಸ್ವಾಮಿಗಿಂತ ನಿಸ್ಪೃಹವಾಗಿ -ಪ್ರಾಮಾಣಿಕವಾಗಿ- ಜೀವನವನ್ನೇ ನೆಲ-ಜಲ-ಕಾಡು-ಪ್ರಾಣಿ-ಪಕ್ಷಿ-ಜಂತುಗಳಿಗಾಗಿ ಮುಡುಪಾಗಿಟ್ಟ ಅನೇಕರು ಉತ್ತರ ಕನ್ನಡದಲ್ಲೇ ಇದ್ದಾರೆ.


ಹಾಗೆ ನೋಡಿದರೆ ಈ ಫುಲ್ ಟೈಮ್ 'ಧರ್ಮಕಾರಣಿ'ಗೆ ಪರಿಸರ ಪ್ರೀತಿ ಎಂಬುದು ಸೈಡ್ ಬಿಜಿನೆಸ್. ಸರ್ಕಾರಿ ಯೋಜನೆಗಳಿಂದ ಸ್ವಜಾತಿ ಹೈಗರ ಅಡಿಕೆ ತೋಟ-ಗದ್ದೆ-ಮನೆಮಠ ಮುಳುಗುತ್ತದೆ ಎಂದಾಗಷ್ಟೇ ಸ್ವರ್ಣವಲ್ಲಿ ಶ್ರೀಗಳಲ್ಲಿ ಪರಿಸರ ಕಾಳಜಿ ಉಕ್ಕುಕ್ಕಿ ಹರಿಯುತ್ತದೆ. ಇದಾತ ಭಾಗವಹಿಸಿದ-ಭಾಗವಹಿಸದ ಸರ್ಕಾರಿ ಯೋಜನಾ ವಿರೋಧಿ ಹೋರಾಟಗಳೇ ಸಾಬೀತುಪಡಿಸಿದೆ! 1992ರಲ್ಲಿ ಬೇಡ್ತಿ ಜಲವಿದ್ಯುತ್ ಯೋಜನೆ ಜಾರಿಗೊಳಿಸಲು ಸರ್ಕಾರ ಅಣಿಯಾದಾಗ ಶಿರಸಿ-ಯಲ್ಲಾಪುರ-ಸಿದ್ದಾಪುರ ಭಾಗದ ಜನ ತಿರುಗಿಬಿದ್ದಿದ್ದರು. ಬೇಡ್ತಿ ನದಿಗೆ ದೊಡ್ಡ ಅಣೆಕಟ್ಟು ಕಟ್ಟಿದ್ದೇ ಆದರೆ ಹೆಚ್ಚು ಮುಳುಗುತ್ತಿದ್ದುದು ಈ ಭಾಗದ ಬ್ರಾಹ್ಮಣರ ತೋಟ-ಕೃಷಿ ಭೂಮಿಯಾಗಿತ್ತು. ಹಾಗಾಗಿ 'ಜಾಣ' ಹೈಗರು ಸಂಘಟಿತರಾಗಿ ಹೋರಾಟದ ನೇತೃತ್ವವನ್ನು ಸ್ವ-ಜಾತಿ ಸ್ವಾಮಿ ಗಂಗಾಧರೇಂದ್ರಜೀಗೆ ಕೊಟ್ಟಿದ್ದರು.

ಹಾಗೆ ನೋಡಿದರೆ ಈ ಹೋರಾಟ ಆರಂಭವಾಗಿದ್ದು 1978ರಲ್ಲೇ. ಆದರೆ ಯೋಜನೆ ನೆನೆಗುದಿಗೆ ಬಿದ್ದಿದ್ದರಿಂದ ಹೋರಾಟವೂ ತಣ್ಣಗಾಗಿತ್ತು. ಹೈಗರ ವಿರೋಧಿ-ಹಿಂದುಳಿದವರ ಹಿತೈಷಿ ಎನಿಸಿದ್ದ 'ಬಂ' ಮುಖ್ಯಮಂತ್ರಿಯಾಗಿದ್ದಾಗ ಮತ್ತೆ ಬೇಡ್ತಿ ಭೂತ ಎದ್ದುಕುಳಿತಿತ್ತು. 'ಬಂ' ಬೇಕಂತಲೇ ಹೈಗರ ಮುಳುಗಿಸುವ ಮಸಲತ್ತು ಮಾಡುತ್ತಿದ್ದಾರೆಂದು ಹುಯಿಲೆಬ್ಬಿಸಲಾಗಿತ್ತು. ಸ್ವಾಮೀಜಿಗೆ ಹೋರಾಟದ ಲೀಡರಿಕೆ ಕೊಟ್ಟರೆ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಪ್ರತಿಭಟನೆಗೆ ಇಳಿಸಿ ಸರ್ಕಾರವನ್ನು ಮಣಿಸಬಹುದೆಂಬ ಲೆಕ್ಕಾಚಾರ ವಿಪ್ರೋತ್ತಮರು ಹಾಕಿದ್ದರು. ಇದು ಒಳರಾಜಕೀಯ.

ಆಗತಾನೇ ಸ್ವರ್ಣವಲ್ಲಿ ಮಠದ ಪೀಠವೇರಿದ ಯುವಕ ಗಂಗಾಧರೇಂದ್ರರನ್ನು ಮುಂದಿಟ್ಟುಕೊಂಡು ಬ್ರಾಹ್ಮಣರು ಬೃಹತ್ ರ್‍ಯಾಲಿ ನಡೆಸಿದರು. 'ಬಂ' ಸರ್ಕಾರ ಬ್ರಾಹ್ಮಣರ ಬಡಿವಾರಕ್ಕೆ ಹೆದರಿತೋ ಅಥವಾ ಯೋಜನೆಯಿಂದ ಶೂದ್ರರಿಗೂ ತೊಂದರೆಯೆಂದು ಬಗೆಯಿತೋ? ಒಟ್ಟಿನಲ್ಲಿ ಬೇಡ್ತಿ ಜಲ ಯೋಜನೆಗೆ ಬ್ರೇಕ್ ಬಿತ್ತು; ಸ್ವರ್ಣವಲ್ಲಿ ಹೈಗರ ಸ್ವಾಮಿಗೆ 'ಪರಿಸರ ಸ್ವಾಮಿ' ಎಂಬ ಪ್ರತೀತಿಯೂ ಬಂತು. ಹಾಗಂತ ಕೈಗಾ ಅಣುಸ್ಥಾವರ ಸ್ಥಾಪನೆ ನಿಲ್ಲಿಸಲು ಈ ಸ್ವಾಮಿಯಿಂದಾಗಲಿ, ಆತನ ಹೈಗರ ಬಳಗದಿಂದಾಗಲಿ ಆಗಲೇ ಇಲ್ಲ. ಕೈಗಾ ವಿರೋಧಿ ಆಂದೋಲನದಲ್ಲಿದ್ದ ಸ್ವರ್ಣವಲ್ಲಿ ಸ್ವಾಮಿ ಅದೇ ಕೈಗಾ ಅಣುಸ್ಥಾವರ ದೇಶಕ್ಕೆ ಅರ್ಪಿಸಲೆಂದು ಅಂದಿನ ಬಿಜೆಪಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕಾರವಾರ (ಕೈಗಾ)ಕ್ಕೆ ಬಂದಾಗ ಭೇಟಿಯಾಗಿ ಕುಶಲೋಪರಿ ನಡೆಸಿ ಬಂದಿದ್ದರು. ಅಂದು ವಾಜಪೇಯಿ-ಸ್ವರ್ಣವಲ್ಲಿ ಸ್ವಾಮಿ ಭೇಟಿಗೆ ವಿಶೇಷ ಮುತುವರ್ಜಿ ವಹಿಸಿದ್ದು ಶಾಸಕನಾಗಿದ್ದ ಇಂದಿನ ಮಂತ್ರಿ ಕಾಗೇರಿ ಮಾಣಿ! ಇದು ಸ್ವರ್ಣವಲ್ಲಿ ಸ್ವಾಮೀಜಿಯ ಡಬ್ಬಲ್‌ಗೇಮ್ ಪರಿಸರ ಪ್ರೇಮ!!

ಹಾಗೆಯೇ ಕೈಗಾ ಅಣುಸ್ಥಾವರ, ಕದಂಬ ಸೀಬರ್ಡ್, ಕೊಡಸಳ್ಳಿ ಜಲವಿದ್ಯುತ್ ಯೋಜನೆ ಮುಂತಾದ ಮಾರಕ ಪ್ರಾಜೆಕ್ಟ್‌ಗಳಿಗೆ ಬಲಿಯಾದ ಜನ ಪರಿಹಾರ-ಪುನರ್ವಸತಿ ಸಿಗದೆ ರೌರವ ನರಕದಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ. ಇವರ ಬಗ್ಗೆ ಎಂದೂ ಸ್ವರ್ಣವಲ್ಲಿ ಸ್ವಾಮಿಗೆ ಕರುಣೆ-ಕನಿಕರ ಮೂಡಿದ್ದಿಲ್ಲ. ಈ ನಿರಾಶ್ರಿತರ ಬಗ್ಗೆಯೂ ಈ ಸ್ವಾಮಿ ಧ್ವನಿ ಎತ್ತಿದ್ದು ಪ್ರತಿಭಟನೆ-ಹೋರಾಟ ಮಾಡಿದ್ದಿಲ್ಲ. ಇವರೆಲ್ಲ ಶೂದ್ರರಾಗಿದ್ದೇ ಇದಕ್ಕೆ ಕಾರಣ ಇರಬಹುದಾ?


ತುಳಸಿಗೌಡ


ಸ್ನೇಕ್ ಮಾರ್ಷಲ್


ಕೊಡಸಳ್ಳಿ ಯೋಜನೆಯ ಸಂತ್ರಸ್ಥರು

ಬೇಡ್ತಿ ಹೋರಾಟದ ಬಳಿಕ ಈ ಸ್ವಾಮಿ ಸಕ್ರಿಯರಾಗಿದ್ದು ಅಘನಾಶಿನಿ ಜಲ ವಿದ್ಯುತ್ ಯೋಜನೆ ಪ್ರಸ್ತಾಪವಾದಾಗ! ಈ ಸರಣಿ ಮಿನಿಡ್ಯಾಮ್ ಪ್ರಾಜೆಕ್ಟ್‌ನಿಂದ ಅಘನಾಶಿನಿ ದಂಡೆಯುದ್ದಕ್ಕೂ ಇರುವ ಜನರಿಗೆ ಅಪಾರ ಹಾನಿಯಾಗುತ್ತಿತ್ತು. ಈ ಯೋಜನಾ ಬಾಧಿತರಲ್ಲಿ ಹೈಗರೂ ಗಣನೀಯ ಸಂಖ್ಯೆಯಲ್ಲಿದ್ದರು. ಹಾಗಾಗಿ ಸ್ವಾಮಿಗೆ ಪರಿಸರ ಕಾಳಜಿ ಕಾಡಿತ್ತು! ಹಾಗೆಯೇ ಕರಾವಳಿಯ ತದಡಿ ಉಷ್ಣ ವಿದ್ಯು[ತ್] ಯೋಜನೆ ಮತ್ತು ಹಣಕೋಣ ಥರ್ಮಲ್ ಪ್ರಾಜೆ[ಕ್ಟ್] ವಿರೋಧಿ ಆಂದೋಲನದಲ್ಲಿ ಒಮ್ಮೆ ಮುಖ ತೋರಿ[ಸಿ] ಮಠ ಸೇರಿಕೊಂಡಿದ್ದರು ಸ್ವರ್ಣವಲ್ಲಿ ಸ್ವಾಮಿ. ಅದು ಸ್ಥಳೀಯ ಹೋರಾಟಗಾರರ ಆಹ್ವಾನದ ಮೇರೆಗೆ ಹೋಗಿದ್ದ[ರೆ] ಹೊರತು ಸ್ವಯಂಸ್ಫೂರ್ತಿಯಿಂದಲ್ಲ. ಸ್ವರ್ಣವಲ್ಲಿ ಮಠ[ದ] ಶಿಷ್ಯ ಕೋಟೆ ಹೆಚ್ಚಿರುವುದು ಘಟ್ಟದ ಮೇಲೆ. ಹೀಗಾ[ಗಿ] ಘಟ್ಟದ ಕೆಳಗಿನ ಉಷ್ಣಸ್ಥಾವರಗಳ ಬಗ್ಗೆ 'ಪರಿಸರ ಸ್ವಾಮಿ' ತಲೆ ಕೆಡಿಸಿಕೊಂಡಿರಲಿಲ್ಲ ಎನ್ನುವವರೂ ಇದ್ದಾರೆ.


ಕುಮಟಾದ ತದಡಿ ಮತ್ತು ಹಣಕೋಣದಲ್ಲಿ ಉ[ಷ್ಣ] ಸ್ಥಾವರ ಸ್ಥಾಪನೆ ಮಾಡದಂತೆ ತಡೆದ ಶ್ರೇಯಸ್ಸು ಸ್ಥಳೀಯ ಜನರಿಗೆ ಸೇರಬೇಕೇ ಹೊರತು ಸ್ವರ್ಣವಲ್ಲಿ ಸ್ವಾಮಿಗಲ್ಲ. ತದಡಿಯಲ್ಲಿ ಥರ್ಮಲ್ ಪ್ರಾಜೆಕ್ಟ್ ಬರದಂತೆ ಮಾಡಿದ[ು] ಅಂದು ಉತ್ತರ ಕನ್ನಡದಲ್ಲಿ ರಾಜಕೀಯ ಮಾಡುತ್ತಿದ[್ದ] ಮಾಜಿ ಸಂಸದೆ ಮಾರ್ಗರೆಟ್ ಆಳ್ವ. ಈ ಯೋಜನೆಯಿಂದ ಶೂದ್ರರಿಗೆ ಯಾವ ಪರಿ ಅನ್ಯಾಯ ಆಗುತ್ತದೆಂಬುದು ಆಕೆಗೆ ಅರ್ಥವಾಗಿತ್ತು; ಸ್ಥಳೀಯರ ಸ್ಥಾವರ ವಿರೋಧಿ ಹೋರಾಟಕ್ಕೂ ಆಕೆ ಸ್ಪಂದಿಸಿದ್ದರು. ದಿಲ್ಲಿಯಲ್ಲಿ ತನಗಿದ[್ದ] ಪ್ರಭಾವ ಬಳಸಿ ತದಡಿ ಉಷ್ಣ ಸ್ಥಾವರಕ್ಕೆ ಶಾಶ್ವತವಾಗಿ ತಡ[ೆ] ಹಾಕಿಸಿದ್ದರು.

ಕಾರವಾರದ ಹಣಕೋಣಕ್ಕೆ ಬಂದು ಕಾಲೂರಿದ[್ದ] ಬಿಜೆಪಿಯ ಮಾತಾಡುವ ಬೊಂಬೆ ವೆಂಕಯ್ಯನಾಯ್ಡುವ[ಿನ] ಉಷ್ಣ ವಿದ್ಯುತ್ ಪ್ರಾಜೆಕ್ಟ್ ಓಡಿಸಿದ್ದು ಸ್ಥಳೀಯರು. ಇದೊಂದು ದೊಡ್ಡ ಜನಾಂದೋಲನ; ಈ ಹೋರಾಟಕ[್ಕೆ] ಯಾವ ಢೋಂಗಿ ಪರಿಸರವಾದಿ ಅಥವಾ ಕಾವಿ ಸ್ವಾಮಿಯ[ೂ] ಹಂಗಿರಲಿಲ್ಲ. ಸ್ಥಳೀಯ ಹೆಂಗಸರು-ಮುದುಕರು-ಮಕ್ಕಳೂ ಹಣಕೋಣ ಹೋರಾಟದಲ್ಲಿ ಸಕ್ರಿಯರಾಗಿದ್ದರು. ಯಡ್ಡಿ ಸರ್ಕಾರ ಹೋರಾಟನಿರತ ಹೆಂಗಸರು-ಮುದುಕರ ಮೇಲೆ ಪೊಲೀಸರನ್ನು ಛೂಬಿಟ್ಟಿತ್ತು, ರಕ್ತಪಾತ ಮಾಡಿಸಿತ್ತು. ಹೆಂಗಸರೂ ಸೇರಿದಂತೆ ಅನೇಕರು ಪೊಲೀಸರ ಲಾಠಿ-ಬೂಟಿನ ಏಟಿಗೆ ಆಸ್ಪತ್ರೆ ಸೇರಿದ್ದರು. ಹಣಕೋಣ ಹೋರಾಟಗಾರರ ಮೇಲೆ ಯಡ್ಡಿ ಸರ್ಕಾರ ಹೇಯ-ಬರ್ಬರ-ಭಯಾನಕ ದೌರ್ಜನ್ಯ ನಡೆಸಿತ್ತು. ಈ ಹಿಂಸಾಚಾರದಲ್ಲಿ ಯಾವ[ೊಬ್ಬ] ಸಾಧು-ಸನ್ಯಾಸಿ-ಪರಿಸರವಾದಿಗೂ ಏಟುಬಿದ್ದಿಲ್ಲ; ಜೈಲು ಕಂಡಿಲ್ಲ. ಪ್ರಭುತ್ವದ ಪಾತಕವನ್ನು ಸಮರ್ಥವಾಗಿ ಎದುರಿಸಿದ[್ದು] ಕಡಲ ಮಕ್ಕಳು-ಹಿಂದುಳಿದ ವರ್ಗದ ಜನಸಮುದಾಯ. ಆಂಧ್ರವಾಳ್ಳುಗಳ ಕರೆಂಟ್ ಕಂಪನಿ ಕಂಬಿ ಕಿತ್ತುಕೊಂಡು ಹೋಗುವಂತೆ ಮಾಡಿತ್ತು. ಸೋಕಾಲ್ಡ್ ಪರಿಸರವಾದಿ[ಗಳು,] ಕಾವಿಧಾರಿಗಳು ಈ ಹೋರಾಟದಲ್ಲಿದಿದ್ದರೇ ಅದು ಹಳ[್ಳ] ಹಿಡಿದು ಹೋಗುತ್ತಿತ್ತು. ಅಧಿಕಾರಸ್ಥರ ಸ್ಥಾವರ ಜನಾಭಿಪ್ರಾಯ[ವನ್ನು] ಬುಲ್ಡೋಜ್ ಮಾಡಿ ತಲೆ ಎತ್ತುತ್ತಿತ್ತು. ಕಾವಿಗಳ-ಪರಿಸರವಾದಿಗಳ ಸೋಂಕಿಲ್ಲದ್ದೇ ಈ ಹೋರಾಟದ ಯಶಸ್ಸಿಗೆ ಕಾರಣ!!

ಸ್ವರ್ಣವಲ್ಲಿ ಸ್ವಾಮಿಯ ಪರಿಸರವಾದ-ಧರ್ಮದಂಡಗಳು ಪ್ರಯೋಗವಾಗುವುದು ಸ್ವಜಾತಿ ಹೈಗರ ಹಿತಕ್ಕಷ್ಟೇ. ತೀರಾ ಈಚೆಗೆ ಈ ಬ್ರಾಹ್ಮಣ ಗುರು ಅಡಿಕೆ ಬೆಳೆಗಾರರ ಬೃಹತ್ ಸಮಾವೇಶವನ್ನು ಶಿರಸಿಯಲ್ಲಿ ನಡೆಸಿದ್ದರು. ಸಾಕ್ಷಾತ್ ಸಿಎಂ ಯಡ್ಡಿ-ಕೇಂದ್ರದ ಮಂತ್ರಿಗಳನ್ನೆಲ್ಲ ಕರೆದಿದ್ದರು. ಅವರ್‍ಯಾರೂ ಈ ಸಮಾವೇಶಕ್ಕೆ ಬರಲಿಲ್ಲ ಬಿಡಿ. ಅಡಿಕೆ ತೋಟಗರಲ್ಲಿ ಬಹುತೇಕರು ಹವ್ಯಕರು. ಇವರೆಲ್ಲ ಅಡಿಕೆ ಬೆಳೆನಾಶ, ದರ ಕುಸಿತದಿಂದ ದುರಂತದ ಸ್ಥಿತಿ ತಲುಪಿದ್ದಾರೆಂದು ಹುಯಿಲೆಬ್ಬಿಸಿದ್ದರು.

ಈ ಅಡಿಕೆ ಬೆಳೆಗಾರರು ಸಹಕಾರಿ ಸಂಘಗಳಲ್ಲಿ ತೆಗೆದ ಸಾಲ ಮನ್ನಾ ಮಾಡಿಸುವ ಹುನ್ನಾರ ಈ ಸಮಾವೇಶದ ಹಿಂದಡಗಿತ್ತು. ಆಳುವವರನ್ನು ಕರೆದು 'ಆಸಾಮಿ ಸಾಲ' ಮನ್ನಾ ಮಾಡಿಸುವಂತೆ ಒತ್ತಡ ಹಾಕುವ ತಂತ್ರಗಾರಿಕೆ ಸ್ವಾಮಿ ಪಟಾಲಂ ಮಾಡಿತ್ತು. ಆಗ ಈ ಸ್ವರ್ಣವಲ್ಲಿ ಸ್ವಾಮಿ ಚರ್ಚೆ ವಿವಾದಕ್ಕೆ ಸಿಲುಕಿದ್ದರು. ಬೀದರ್‌ನ ಸಿಖ್ ಸಂತನೊಬ್ಬನ ಹಿಡಿದು ಕೇಂದ್ರ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿಯನ್ನೇ ಬುಕ್ ಮಾಡುವ ಡೀಲೂ ಸ್ವಾಮಿ ಗ್ಯಾಂಗ್ ಮಾಡಿತ್ತು. ಈ ಸಿಖ್ ಸಂತನ ಅನುಯಾಯಿಯಾದ ಪ್ರಣಬ್‌ನಿಂದ ಹೇಗಾದರೂ ಮಾಡಿ ಆಸಾಮಿ ಸಾಲ ಮನ್ನಾ ಮಾಡಿಸುವ ಮಸಲತ್ತು ಈಗಲೂ ಜಾರಿಯಲ್ಲಿದೆ....

ಹಾಗೆಯೇ ಯಲ್ಲಾಪುರದ ಅಗ್ನಿಶಾಮಕ ಠಾಣೆಗೆಂದು ಮೀಸಲಿಟ್ಟಿದ್ದ ಜಾಗವನ್ನು ಮಠದ ಆಸ್ಪತ್ರೆ ಕಟ್ಟಲೆಂದು ಈ ಸ್ವಾಮಿ ಕಬಳಿಸಲು ಕರಾಮತ್ತು ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಜಿಲ್ಲಾ ಮಂತ್ರಿ ಕಾಗೇರಿಯಿಂದ ಹಿಡಿದು ಮುಜರಾಯಿ ಮಂತ್ರಿ ಡಾ.ವಿ.ಎಸ್.ಆಚಾರ್ಯ-ಕಂದಾಯ ಮಂತ್ರಿ ಕರುಣಾಕರ ರೆಡ್ಡಿ ತನಕದ ಪುಢಾರಿ-ಅಧಿಕಾರಿಗಳು ಈ ಭಾನಗಡಿಯಲ್ಲಿ ಭಾಗವಹಿಸಿ ಸ್ವಾಮೀಜಿ ಕೃಪಾಶೀರ್ವಾದಕ್ಕೆ ಪಾತ್ರರಾಗಿದ್ದರು. ಇಂಥ ಧರ್ಮ ದಂಧೆ, ಸ್ವಜಾತಿಮಂದಿಗಷ್ಟೇ ಅನುಕೂಲವಾಗುವ ಪರಿಸರವಾದದಿಂದ ಸ್ವಾಮೀಜಿಯ 'ಪರಿಸರ ಪ್ರಖ್ಯಾತಿ'ಗೆ ಆಗಿರುವ ಡ್ಯಾಮೇಜ್ ಕಂಟ್ರೋಲ್ ಮಾಡಲೆಂದೇ ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಆಶೀಸರನ ಬ್ರಾಹ್ಮಣ ಲಾಬಿ ಈಗಾತನಿಗೆ ಸರ್ಕಾರಿ ಪ್ರಶಸ್ತಿ ಕೊಡಿಸಿದಂತಿದೆ! ಸ್ವಾಮಿ ಜತೆ ಸಣ್ಣ ಮನಸ್ತಾಪ ಮಾಡಿಕೊಂಡಿದ್ದ ಮಂತ್ರಿ ಕಾಗೇರಿ ಈ ಪ್ರಶಸ್ತಿ ಮೂಲಕ ಗುರುವನ್ನು ಒಲಿಸಿಕೊಳ್ಳಲು ಹವಣಿಸಿದ್ದಾರೆ.



ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಆಸೀಸರ

ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪಶ್ಚಿಮ ಘಟ್ಟ ಕಾರ್ಯ ಪಡೆಯ ಭಂಡರಿಗೆ ಸ್ವರ್ಣವಲ್ಲಿ ಸಾಧುಗಿಂತ ಕಾಡು ಮತ್ತದರಲ್ಲಿನ ಜೀವ ವೈವಿಧ್ಯತೆಯನ್ನು ಪ್ರಾಂಜಲ ಮನಸ್ಸಿನಿಂದ ಸಂರಕ್ಷಿಸುತ್ತಿರುವ ನಿಜ ಪರಿಸರವಾದಿಗಳು ಕಾಣಿಸದೇ ಇದ್ದುದು ನಾಚಿಕೆಗೇಡು. ಪ್ರಚಾರ-ಪ್ರಶಸ್ತಿಗೆ ಹಾತೊರೆಯದೆ ಸ್ವರ್ಣವಲ್ಲಿ ಶ್ರೀಗೆ ಮಾದರಿಯಾಗುವಂಥ ಅದೆಷ್ಟೋ ಪರಿಸರ ಕಾಳಜಿಯ ಮಂದಿ ಉತ್ತರ ಕನ್ನಡದ ಕಾಡಿನ ನಡುವೆಯೇ ಇದ್ದಾರೆ. ಸ್ವರ್ಣವಲ್ಲಿ ಸ್ವಾಮಿ ಸಸಿಗಳನ್ನು ವಿತರಿಸಿ ಪರಿಸರ ಪ್ರೇಮಿಯ ಪೋಸು ಕೊಡುತ್ತಾರೆ. ಆದರೆ ಅಂಕೋಲೆಯ ತುಳಸಿಗೌಡ ಎಂಬ ಹಾಲಕ್ಕಿ ಒಕ್ಕಲು ವರ್ಗದ ವೃದ್ಧೆ ಕಳೆದ 40 ವರ್ಷದಿಂದ ಲಕ್ಷಾಂತರ ಸಸಿಗಳನ್ನು ಮಕ್ಕಳಂತೆ ಪೋಷಿಸಿದ್ದಾರೆ. ಯಾವ ಪ್ರಶಸ್ತಿ-ಪ್ರಚಾರದ ಆಸೆಯೂ ಇಲ್ಲದ ಈಕೆ ಇವತ್ತಿಗೂ ತನ್ನ ಇಳಿವಯಸ್ಸಿನಲ್ಲೂ ರಸ್ತೆ ಪಕ್ಕ ಮತ್ತು ಗೋಮಾಳಗಳಲ್ಲಿ ಸಸಿಗಳನ್ನು ನೆಟ್ಟು ಆರೈಕೆ ಮಾಡುತ್ತಿದ್ದಾರೆ.

ಹಾಗೆಯೇ ಕಾರವಾರದ ಸ್ನೇಕ್-ಮಾರ್ಷಲ್ ಎಂಬುವವರು ಜೀವ ವೈವಿಧ್ಯತೆ ಸಂರಕ್ಷಿಸುವ ಕಾಯಕದಲ್ಲಿ ಅರ್ಪಣಾಭಾವದಿಂದ ತೊಡಗಿಸಿಕೊಂಡಿದ್ದಾರೆ. ಈತ ಕಾಡಿನಿಂದ ನಾಡಿಗೆ ಬರುವ ಹಾವುಗಳನ್ನು ಕೊಲ್ಲಲು ಬಿಡದೆ ನಾಜೂಕಾಗಿ ಹಿಡಿದು ಕಾಡಿಗೆ ಬಿಟ್ಟು ಬರುತ್ತಾರೆ. ಅಪಾಯಕಾರಿ ನಾಗರ, ಕೃಷ್ಣ ಸರ್ಪದಿಂದ ನಿರುಪದ್ರವಿ ಜಂತುಗಳನ್ನೂ ಈತ ಹಿಡಿದು ಕಾಡಿಗೆ ಬಿಟ್ಟಿರುವುದಕ್ಕೆ ಲೆಕ್ಕವೇ ಇಲ್ಲ. ಸಾವಿರಾರು ಹಾವು ಹಿಡಿದು ಜನರನ್ನೂ ಸಂರಕ್ಷಿಸಿರುವ ಮಾರ್ಷಲ್, ಎಂದೂ ಯಾರಿಂದಲೂ ಪ್ರತಿಫಲ ಬಯಸಿದವರಲ್ಲ. ಇಂಥ ಬದ್ಧತೆಯ ಸರಳ ನೈಜ ಪರಿಸರ ಪ್ರೇಮಿಗಳೆದುರು ಢೋಂಗಿ ಪರಿಸರವಾದಿ ಸ್ವರ್ಣವಲ್ಲಿ ಸ್ವಾಮಿ ಕುಬ್ಜರಂತೆ ಕಾಣಿಸುತ್ತಾರಲ್ಲವೇ?

ಕೊಡಸಳ್ಳಿ ಜಲವಿದ್ಯುತ್ ಯೋಜನೆಯ ಸಂತ್ರಸ್ತರು ಜೋಯಿಡಾದ ದಟ್ಟ ಅರಣ್ಯದ ಮಧ್ಯದ 'ಶಿವಪುರ' ಎಂಬ ಹಳ್ಳಿಯಲ್ಲಿದ್ದಾರೆ. ಸರ್ಕಾರಿ ಯೋಜನೆಗಳಿಗಾಗಿ ತೋಟ-ಮನೆ-ಸರ್ವಸ್ವವನ್ನೂ ಕಳೆದುಕೊಂಡಿರುವ ಈ ಮಂದಿ ಕಳೆದ 25 ವರ್ಷಗಳಿಂದ ಮೂಲಭೂತ ಸೌಕರ್ಯಕ್ಕಾಗಿ ಹೋರಾಡುತ್ತಲೇ ಇದ್ದಾರೆ. ಹಾಗಂತ ಅವರೆಂದೂ ಸುತ್ತಲಿನ ಕಾಡು-ಪರಿಸರವನ್ನು ಕಾಳಜಿಯಿಂದ ಕಾಪಾಡುವುದನ್ನು ಮರೆತಿಲ್ಲ. "ನಮ್ಮ ನೆಲ-ಜಲ-ಅರಣ್ಯ ರಕ್ಷಣೆ ನಮ್ಮದೇ ಹೊಣೆ" ಎಂಬ ಧ್ಯೇಯೋದ್ದೇಶದಿಂದ ಬದುಕುತ್ತಿದ್ದಾರೆ. ಶಿವಪುರದ ಜನರೆಲ್ಲರೂ ಕಾಡಿಗೆ ಬೆಂಕಿ ಬೀಳದಂತೆ ನಿಗಾವಹಿಸುತ್ತಿದ್ದಾರೆ; ಅಕಸ್ಮಾತ್ ಬೆಂಕಿಬಿದ್ದರೆ ಎಲ್ಲಾ ಒಟ್ಟಾಗಿ ನಂದಿಸುತ್ತಾರೆ.

ಇವರ ಬದುಕು ಸದಾ ಪರಿಸರಕ್ಕೆ ಪೂರಕ. ಒಂದೇ ಒಂದು ಟೊಂಗೆ-ಎಲೆಯನ್ನೂ ಶಿವಪುರದ ಜನರು ತೆಗೆಯುವುದಿಲ್ಲ. ತಮ್ಮ ತೋಟಕ್ಕೆ ಉದುರಿಬಿದ್ದ ತರಗೆಲೆ ಸಂಗ್ರಹಿಸಿ ಒಯ್ಯುತ್ತಾರೆ. ಅರಣ್ಯ ರಕ್ಷಣೆಯ ರೀತಿ-ನೀತಿಗಳನ್ನು ಅರಣ್ಯ ಇಲಾಖೆಗೇ ಕಲಿಸಿದ ಹೆಗ್ಗಳಿಕೆ ಶಿವಪುರದ ಗ್ರಾಮದವರದು. ನೀರನ್ನಿಂಗಿಸುವ ಹೊಂಡ, ಟ್ರೆಂಚಿಂಗ್‌ಗೆ ಅಡ್ಡಬಿಟ್ಟ ಗಿಡ-ಮರ ಅರಣ್ಯ ಅಧಿಕಾರಿಗಳು ಕಡಿಯುತ್ತಿದ್ದುದು ಅದನ್ನು ನಿಲ್ಲಿಸಿದ್ದಾರೆ ಶಿವಪುರದ ಮಂದಿ. ಸರ್ಕಾರಿ ಯೋಜನೆಯಿಂದ ತಮ್ಮ ಬದುಕು ಬರಡಾಗಿದ್ದರೂ ಕಾಡು-ಪರಿಸರ ಸಮೃದ್ಧವಾಗಿರುವಂತೆ ಶಿವಪುರದ ಜನ ನೋಡಿಕೊಳ್ಳುತ್ತಿದ್ದಾರೆ. ಅತ್ತ ಆರ್ಥಿಕ ಮುಗ್ಗಟ್ಟಿನಲ್ಲಿದ್ದರೂ ಅಂಕೋಲೆಯ ತುಳಸಿಗೌಡ, ಕಾರವಾರದ ಸ್ನೇಕ್ ಮಾರ್ಷಲ್, ಪ್ರತಿಫಲಾಪೇಕ್ಷೆಯಿಲ್ಲದೆ ಪರಿಸರ ಸಂರಕ್ಷಿಸುತ್ತಿದ್ದರೆ ಇತ್ತ ಢೋಂಗಿ ಪರಿಸರವಾದಿಗಳು ಯಾವ್ಯಾವುದೋ ಅನುದಾನ, ಏಡ್ಸ್, ಪ್ರಶಸ್ತಿ, ಪುರಸ್ಕಾರ ಗಿಟ್ಟಿಸಿ ಸಾಹುಕಾರರಾಗಿದ್ದಾರೆ.

ಈಗ ಹೇಳಿ ಸ್ವರ್ಣವಲ್ಲಿ ಸ್ವಾಮಿಗೆ ಪರಿಸರ ಪ್ರಶಸ್ತಿ ಕೊಡಬಹುದಾ? ಆತನಿಗೆ ಆ ಪುರಸ್ಕಾರ ಪಡೆಯುವ ಯೋಗ್ಯತೆ ಇದೆಯಾ? ಸ್ವಾಮೀಜಿಗೆ ಪರಿಸರ ಪ್ರಶಸ್ತಿ ಕೊಡಿಸಿ ಅರ್ಹರಿಗೆ ಅನ್ಯಾಯ ಮಾಡಿರುವ ಅಧಿಕಾರಸ್ಥ ಪೈಗರ ಮಾಣೆಗಳಿಗೆ ಮಾನ-ಮರ್ಯಾದೆ-ಆತ್ಮಸಾಕ್ಷಿ ಎಂಬುದಿದೆಯಾ? ಧರ್ಮಕಾರಣದ ಯಡ್ಡಿ ದರ್ಬಾರಿನಲ್ಲಿ ಅನರ್ಹರು-ಅಯೋಗ್ಯರೇ ಮಹಾ ಸಾಧಕರಂತೆ ಮೆರೆಯುತ್ತಿದ್ದಾರಲ್ಲವಾ? ಹೇ..ರಾಮ್... ಕರ್ನಾಟಕಕ್ಕೆಂದು ಮುಕ್ತಿ?!


• ನಹುಷ

ಹುಣಸೂರು ಸೆರೆಸಿಕ್ಕ ಹಂತಕರು



ಅಮಾಯಕ ವಿದ್ಯಾರ್ಥಿಗಳ ಹಂತಕರು ಸಿಕ್ಕಿಬಿದ್ದಿದ್ದಾರೆ. ಈ ಮೂಲಕ ಕರ್ನಾಟಕದಾದ್ಯಂತ ಮಡುಗಟ್ಟಿದ್ದ ಆಕ್ರೋಶ ಭರಿತ ಕುತೂಹಲ, ಯಾರ್‍ಯಾರತ್ತಲೋ ಹೊರಳಿಕೊಂಡಿದ್ದ ಸಂಶಯ ಮತ್ತು ಎಗ್ಗಿಲ್ಲದೆ ಹರಿದಾಡುತ್ತಿದ್ದ ಊಹಾಪೋಹಗಳೆಲ್ಲ ಕೊನೆಗೊಂಡಂತಾಗಿದೆ. ಇದೀಗ ವಿನಾಕಾರಣ ಮಕ್ಕಳನ್ನು ಕಳೆದುಕೊಂಡವರ ನೋವು ಹಾಗೂ ಸೂತಕದ ನಡುವೆಯೂ ಸಂಚು ಹೆಣೆಯುತ್ತಿರುವ ಸರ್ಕಾರದ ದುಷ್ಟತನದ ಹೊರತಾಗಿ ಮತ್ತೆಲ್ಲವೂ ತಿಳಿಯಾಗಿದೆ.

ಹುಣಸೂರಿನಲ್ಲಿ ಮಾಂಸದಂಗಡಿ ಇಟ್ಟುಕೊಂಡಿರುವ ಆದಿಲ್ ಪಾ, ಮೈಸೂರಿನಲ್ಲಿ ಫರ್ನಿಚರ್ ಪಾಲಿಷ್ ಕೆಲಸ ನಡೆಸುತ್ತಿದ್ದ ಸೈಯದ್ ಅಮೀನ್, ಇದೇ ಕೆಲಸದ ರೆಹಮಾನ್, ಹುಣಸೂರಿನ ಟೌನ್ ಕಾರ್ಖಾನೆ ರಸ್ತೆಯಲ್ಲಿರುವ ಶಫಿ ಹೆಸರಿನ ಮೊಬೈಲ್ ಸೆಂಟರ್‌ನ ಮಾಲೀಕ ಅತಾವುಲ್ಲಾ ಖಾನ್ ಹಾಗೂ ಎಲೆಕ್ಟ್ರಿಕಲ್ಸ್ ರಿಪೇರಿ ಅಂಗಡಿ ಮಾಲೀಕ ಮೈಸೂರಿನ ಶಫೀರ್ ಅಹಮದ್ ಈ ರಾಕ್ಷಸ ಕೃತ್ಯದ ರೂವಾರಿಗಳು.



ಈ ಎಲ್ಲಾ ಆರೋಪಿಗಳೂ ಸಹ ಚೆಂದನೆಯ ಬದುಕು ಕಟ್ಟಿಕೊಳ್ಳುವುದಕ್ಕೆ ಯಾವುದೇ ಆರ್ಥಿಕ ಮುಗ್ಗಟ್ಟು ಹೊಂದಿರುವವರಲ್ಲ. ನಿಯತ್ತು, ಮಾನವೀಯತೆ ಅಂತೊಂದು ಇದ್ದಿದ್ದರೆ ಖಂಡಿತವಾಗಿಯೂ ಇಂಥಾ ರಾಕ್ಷಸ ಕೆಲಸಕ್ಕಿಳಿಯುವ ಅವಶ್ಯಕತೆಯಿರುತ್ತಿರಲಿಲ್ಲ. ಆದರೆ ಇವರೆಲ್ಲರಿಗೂ ದಿಢೀರನೆ ದುಡ್ಡು ಮಾಡೋ ಖಯಾಲಿ ವಿಪರೀತವಾಗಿ ಅಂಟಿಕೊಂಡಿತ್ತು.

ಹುಣಸೂರು ಪಟ್ಟಣದಲ್ಲಿ ಮಾಂಸದ ವ್ಯಾಪಾರ ನಡೆಸುತ್ತಿದ್ದ ಆದಿಲ್ ಪಾಷಾ ಎಂಬ ಅಡ್ನಾಡಿ ಈ ಇಡೀ ದುರಂತಕ್ಕೆ ಭೂಮಿಕೆ ರೆಡಿ ಮಾಡಿದಾತ. ಇಲ್ಲೇ ಸಿಮೆಂಟ್ ವ್ಯಾಪಾರ ನಡೆಸುತ್ತಿದ್ದ ಮೋಹನ್ ಕುಮಾರ್‌ರ ವಹಿವಾಟು, ಅವರ ಬಳಿಯಲ್ಲಿದ್ದ ಹಣ-ಆಸ್ತಿಗಳ ಬಗೆಗೆಲ್ಲಾ ಗೊತ್ತಿದ್ದದ್ದು ಈತನಿಗೇ. ಇಲ್ಲೇ ಮೊಬೈಲ್ ಅಂಗಡಿ ಹೊಂದಿರುವ ಅತಾವುಲ್ಲಾ ಖಾನ್‌ಗೆ ಸಹಾ ಮೋಹನ್‌ರ ವ್ಯವಹಾರಗಳ ಬಗ್ಗೆ ಸ್ಪಷ್ಟ ಚಿತ್ರಣವಿತ್ತು. ಇವರಿಬ್ಬರು ಸೇರಿ ನಿಖರವಾದುದೊಂದು ಸ್ಕೆಚ್ ರೆಡಿ ಮಾಡಿ ಇತರೆ ದುಷ್ಟಕೂಟವನ್ನು ಸೇರಿಸಿಕೊಂಡು ಹೀನ ಕೆಲಸಕ್ಕೆ ಕೈಹಾಕಿದ್ದಾರೆ.

ಅದು ಸಾಕಾರಗೊಂಡದ್ದು ಮೊನ್ನೆ 8ರ ಬುಧವಾರ. ಅಂದು ಮೈಸೂರಿನ ಕಾಲೇಜಿಗೆ ಹೊರಟಿದ್ದ ಸುಧೀಂದ್ರ ಮತ್ತು ವಿಘ್ನೇಶ್‌ನನ್ನ ಡ್ರಾಪ್ ಕೊಡುವ ನೆಪದಲ್ಲಿ ಕಾರಿಗೆ ಹತ್ತಿಸಿಕೊಂಡ ರಾಕ್ಷಸರು ಇಂತಹದೊಂದು ದುರಂತಕ್ಕೆ ಮುನ್ನುಡಿ ಬರೆದರು. ಹಾಗೆ ಅಪಹರಿಸಿ ತಂದ ಯುವಕರಿಗೆ ಇವರು ಕೊಟ್ಟ ಚಿತ್ರಹಿಂಸೆ ನಿಜಕ್ಕೂ ಕರುಳು ಕಿವುಚುವಂತಿದೆ. ಮೊದಲ ದಿನದಿಂದ ಕೊಲೆ ಮಾಡುವ ದಿನದವರೆಗೂ ಅವರಿಗೆ ಒಂದಗಳು ಅನ್ನವನ್ನೂ ನೀಡದೆ ಹಿಂಸಿಸಲಾಗಿತ್ತು. ಜೊತೆಗೆ ದೈಹಿಕ ಹಲ್ಲೆಗಳು ಬೇರೆ. ಈ ರೀತಿ ಚಿತ್ರಹಿಂಸೆ ತಾಳಲಾರದೆ ನಿತ್ರಾಣರಾಗಿದ್ದ ಅಮಾಯಕ ಹುಡುಗರನ್ನು ಇಡೀ ದುಷ್ಟಕೂಟ ಚಾಕುವಿನಿಂದ ಇರಿದು ಬರ್ಬರವಾಗಿ ಕೊಂದು ಚಿಕ್ಕಬಳ್ಳಾಪುರ ಸಮೀಪ ಎಸೆದು ಪರಾರಿಯಾಗಿತ್ತು.

ಇಡೀ ಘಟನೆಯನ್ನು ಗಮನಿಸಿದಾಗ ಬಹುತೇಕರಿಗೆ ಇದು ಪರಿಚಿತರದ್ದೇ ಕೆಲಸ ಎಂಬ ವಿಚಾರ ಸ್ಪಷ್ಟವಾಗಿತ್ತು. ಆದರೆ ಇದು ಪಕ್ಕಾ ವೃತ್ತಿಪರರ ಸಹಾಯದೊಂದಿಗೆ ನಡೆದಿರುವ ಕೆಲಸ ಅಂತಲೂ ಅಂದಾಜಿಸಲಾಗಿತ್ತು. ಆದರೆ ಹಣದ ಹುಚ್ಚೆಂಬುದು ಈ ಆರೋಪಿಗಳನ್ನು ಪಕ್ಕಾ ವೃತ್ತಿವಂತರನ್ನಾಗಿ ಮಾಡಿತ್ತು. ಇವರೆಲ್ಲ ಯಾವ ರೀತಿ ತಯಾರಾಗಿದ್ದರೆಂದರೆ, ಆರೋಪಿಗಳಲ್ಲೊಬ್ಬನಾದ ಅತಾವುಲ್ಲಾ ಭರ್ತಿ ಮೂವತ್ತು ಸಿಮ್‌ಗಳನ್ನಿಟ್ಟುಕೊಂಡಿದ್ದ! ಆ ಮೂಲಕವೇ ಪೊಲೀಸರ ತನಿಖೆಯನ್ನು ದಿಕ್ಕೆಡಿಸಿ, ಸುಳಿವೇ ಸಿಗದಂತೆ ನೋಡಿಕೊಳ್ಳುವುದರಲ್ಲಿ ಹಂತಕರು ಸಫಲರಾಗಿದ್ದರು. ಆದರೆ ಪೊಲೀಸರ ವೇಗದ ಕಾರ್ಯಾಚರಣೆಯಿಂದಾಗಿ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದಂತೆ ತಗುಲಿಕೊಂಡಿದ್ದಾರೆ.

ಅಬ್ಬೇಪಾರಿ ಯುವಕರ ಈ ರಾಕ್ಷಸ ಕೆಲಸಕ್ಕೆ ಧರ್ಮಾತೀತವಾಗಿ ಖಂಡನೆಗಳು ವ್ಯಕ್ತವಾಗಿವೆ. ಮತಭೇದವಿಲ್ಲದೆ ಎಲ್ಲರೂ ಘೋರ ಶಿಕ್ಷೆಯಾಗಬೇಕೆಂದು ಬಯಸಿದ್ದಾರೆ. ಎದೆಮಟ್ಟ ಬೆಳೆದ ಮಕ್ಕಳನ್ನು ಕಳೆದುಕೊಂಡಿರುವ ಪೋಷಕರಿಗೆ ತಂತಮ್ಮ ರೀತಿಯಲ್ಲೇ ಸಾಂತ್ವನ ಹೇಳಿದ್ದಾರೆ. ಆದರೆ ಆರೋಪಿಗಳೆಲ್ಲ ಮುಸ್ಲಿಮರಾಗಿರುವುದನ್ನೇ ನೆಪವಾಗಿಸಿಕೊಂಡಿರುವ ಸರ್ಕಾರ ಸೂತಕದ ನಡುವೆಯೂ ಸೇಡು ತೀರಿಸಿಕೊಳ್ಳಲು ಸನ್ನದ್ಧಗೊಂಡಿರುವುದು ನಿಜಕ್ಕೂ ನಾಚಿಕೆಗೇಡಿನ ವಿಚಾರ.




ಪರೀಕ್ಷ್

ಖುದ್ದು ಗೃಹ ಸಚಿವ ಆರ್. ಅಶೋಕ್ ಈ ಪ್ರಕರಣದ ಬಗ್ಗೆ ಭಾರೀ ಆಸ್ಥೆ ತೆಗೆದುಕೊಂಡಿದ್ದಾರೆ. ಪ್ರಕರಣದ ತೀವ್ರತೆ ಹಾಗೂ ಅದನ್ನು ಬೇಗನೆ ಇತ್ಯರ್ಥಗೊಳಿಸಬೇಕಾದ ಅನಿವಾರ್ಯತೆಯ ದೃಷ್ಟಿಯಿಂದ ಇದು ಸ್ವಾಗತಾರ್ಹ. ಆದರೆ ಅವರ ನಡವಳಿಕೆಯ ಹಿಂದೆ ಕೆಎಫ್‌ಡಿ ಎಂಬ ಸಂಘಟನೆ ನಿಷೇಧಿಸುವ ಹುನ್ನಾರವೇ ಎದ್ದು ಕಾಣಿಸುತ್ತಿದೆ.

ಆರೋಪಿಗಳೆಲ್ಲ ಕೆಎಫ್‌ಡಿ ಎಂಬ ಮುಸ್ಲಿಂ ಸಂಘಟನೆಯ ಕಾರ್ಯಕರ್ತರು, ತಮ್ಮ ಸಂಘಟನೆಗೆ ಹಣ ಹೊಂದಿಸುವ ಉದ್ದೇಶದಿಂದಲೇ ಇಂಥ ಕೆಲಸ ಮಾಡಿದ್ದಾರೆಂಬುದು ಅಶೋಕನ ಅಂಬೋಣ. ಆದರೆ 2006 ರಲ್ಲೇ ಕೆಎಫ್‌ಡಿ ಸಂಘಟನೆ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ)ನೊಂದಿಗೆ ವಿಲೀನಗೊಂಡಿದೆ. ಇದರ ಮುಖ್ಯಸ್ಥರುಗಳೇ ಆರೋಪಿಗಳು ತಮ್ಮ ಸಂಘಟನೆಯವರಲ್ಲ ಎಂದು ಖಚಿತವಾಗಿ ಹೇಳಿದ್ದಾರೆ.

ಅದಲ್ಲದೆ ಈ ಸಂಘಟನೆ ಯುವಕರ ಅಪಹರಣ ಮತ್ತು ಕೊಲೆಯನ್ನು ಆರಂಭದಲ್ಲೇ ಖಂಡಿಸಿತ್ತು. ಪ್ರತಿಭಟನೆಯನ್ನೂ ನಡೆಸಿತ್ತು. ಜೊತೆಗೆ ಆರೋಪಿಗಳನ್ನು ಆದಷ್ಟು ಬೇಗ ಹಿಡಿದು ಶಿಕ್ಷೆಗೆ ಗುರಿಪಡಿಸಬೇಕೆಂದೂ ಆಗ್ರಹಿಸಿತ್ತು. ಈಗಲೂ ಕೂಡಾ ಇದರ ಮುಖ್ಯಸ್ಥರು ಆರೋಪಿಗಳಿಗೆ ಘೋರ ಶಿಕ್ಷೆ ನೀಡಬೇಕೆಂದೇ ಉಚ್ಚರಿಸುತ್ತಿದ್ದಾರೆ.

KFD ವಿರುದ್ಧ ಸರ್ಕಾರದ ಸೇಡು



ಆದರೆ ಅಶೋಕ್ ಮಾತ್ರ ಯಾರೋ ಅಬ್ಬೇಪಾರಿಗಳು ಮಾಡಿದ ಕುಕೃತ್ಯವನ್ನು ಇಡೀ ಸಂಘಟನೆಗೆ ಆರೋಪಿಸಿ ನಿಷೇಧಿಸುವ ಮಾತಾಡುತ್ತಿದ್ದಾರೆ. ಇದು ಬಿಜೆಪಿಯ ನಿಜದ ಅಜೆಂಡಾ.

ಭಜರಂಗದಳದಂಥ ಮತೀಯ ಸಂಘಟನೆಗಳ ಬಲದಿಂದಲೇ ಅಧಿಕಾರ ವಹಿಸಿಕೊಂಡ ಬಿಜೆಪಿಯ ಗೃಹ ಸಚಿವನ ಬಾಯಿಂದ ಅನ್ಯಧರ್ಮದ ಸಂಘಟನೆಯೊಂದರ ನಿಷೇಧದ ಮಾತುಗಳು ಬರುತ್ತಿರುವುದು ವಿಷಾದನೀಯ. ಮುತಾಲಿಕನ ಶ್ರೀರಾಮ ಸೇನೆ ಟೈಗರ್ ಗ್ಯಾಂಗ್ ಹೆಸರಲ್ಲಿ ಕೊಲೆ-ದರೋಡೆ ನಡೆಸಿದಾಗ ಬಿಜೆಪಿಯ ಯಾರೊಬ್ಬರೂ ಅದನ್ನ ನಿಷೇಧಿಸುವ ಮಾತಾಡಲಿಲ್ಲ. ಆರೆಸ್ಸೆಸ್-ಭಜರಂಗದಳಗಳ ಬಗೆಗೂ ಇವರದ್ದು ಇದೇ ಧೋರಣೆ.


ನಿಜ, ಈ ದುಷ್ಟರು ಮಾಡಿದ್ದು ನಿಜಕ್ಕೂ ರಾಕ್ಷಸ ಕೆಲಸ. ಅವನು ಯಾವ ಸಂಘಟನೆಯವರಾಗಿದ್ದರೂ, ಯಾವ ಧರ್ಮ, ಕೋಮಿನವರಾಗಿದ್ದರೂ ಘೋರ ಶಿಕ್ಷೆಯಾಗಲೇಬೇಕು. ಆದರೆ ಇದೇ ಭೂಮಿಕೆಯಲ್ಲಿ ಇನ್ನಾರನ್ನೋ ಹಣಿಯ ಹೊರಡುವುದು ಕೊಲೆ-ಸುಲಿಗೆಯಷ್ಟೇ ಕ್ರೂರ ಕೆಲಸವಲ್ಲವೆ?

-ಕೆ. ಕೃಷ್ಣ ಹುಣಸೂರು

ಪ್ರಗತಿಪರ ಚಿಂತಕ ಮತ್ತು ವೈಚಾರಿಕ ಬರಹಗಾರ ಪ್ರೊ.ಬಿ.ವಿ. ವೀರಭದ್ರಪ್ಪ ಅವರಿಗೆ ಇದೇ ಜುಲೈ 27ಕ್ಕೆ 75 ವರ್ಷ ತುಂಬುತ್ತದೆ. ಅಂದು ದಾವಣಗೆರೆಯಲ್ಲಿ ಅವರ ಅಭಿಮಾನಿ ಬಳಗ ಮತ್ತು ಶಿಷ್ಯವರ್ಗ ಒಂದು ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದೆ. ಈ ಸಮಾರಂಭದಲ್ಲಿ ಪ್ರೊ.ಚಂದ್ರಶೇಖರ ಪಾಟೀಲ್, ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಎಸ್.ಎಚ್.ಪಟೇಲ್, ಡಾ.ಕೆ.ಎಸ್.ಭಗವಾನ್, ಪ್ರೊ.ರವೀಂದ್ರ ರೇಷ್ಮೆ, ಡಾ.ವಿಜಯಾ, ಡಾ. ನರೇಂದ್ರ ನಾಯಕ್, ಗಂಗಾಧರ ಕುಷ್ಟಗಿ, ಬಿ.ಸುರೇಶ್, ಗೌರಿ ಲಂಕೇಶ್ ಮತ್ತು ಇತರರು ಭಾಗವಹಿಸುತ್ತಿದ್ದಾರೆ.

ಅಂದಿನ ಸಮಾರಂಭದಲ್ಲಿ ಬಿವಿವಿ ಅವರನ್ನು ಕುರಿತು ವಿವಿಧ ಲೇಖಕರು, ಚಿಂತಕರು ಬರೆದಿರುವ ಅಭಿನಂದನಾ ಗ್ರಂಥ 'ಲೋಕಾಯತ' ಬಿಡುಗಡೆ ಆಗುತ್ತಿದೆ.

ಈ ಗ್ರಂಥದಲ್ಲಿ ಪ್ರೊ. ವೀರಭದ್ರಪ್ಪ ಅವರನ್ನು ಕುರಿತು ಗೌರಿ ಲಂಕೇಶ್ ಬರೆದಿರುವ ಲೇಖನವನ್ನು ಇಲ್ಲಿ ಪ್ರಕಟಿಸುವ ಮೂಲಕ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಲಂಕೇಶ್ ಬಳಗ ಸಲ್ಲಿಸುತ್ತದೆ.



ದ್ರೋಣನಲ್ಲದ ಗುರು ಬಿವಿವಿ

ಪ್ರೊಫೆಸರ್ ಬಿ.ವಿ.ವೀರಭದ್ರಪ್ಪ ಅವರನ್ನು ನಾನು ಇಲ್ಲಿಯತನಕ ಕೇವಲ ಮೂರ್ನಾಲ್ಕು ಬಾರಿ ಮಾತ್ರ ಭೇಟಿ ಆಗಿರಬಹುದಷ್ಟೇ. ಆದರೆ ನನ್ನಲ್ಲಿನ ವೈಚಾರಿಕ ಪ್ರಜ್ಞೆಯನ್ನು ಗಟ್ಟಿಗೊಳಿಸಿದವರಲ್ಲಿ ಬಿವಿವಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರೆ ತಪ್ಪಾಗದು.

ಬಹಳಷ್ಟು ಜನ ಮೇಲ್‌ಸ್ತರದಲ್ಲಿ ಮಾತ್ರ ವೈಚಾರಿಕತೆಯನ್ನು ಅರ್ಥಮಾಡಿಕೊಂಡಿರುತ್ತಾರೆ. ಅಂಥವರು "ಸಾಯಿಬಾಬಾನದ್ದು ಕೇವಲ ಕೈಚಳಕ ಕಣ್ರೀ" ಎಂದೋ, "ಮಕರ ಜ್ಯೋತಿ ಒಂದು ಮೌಢ್ಯ" ಎಂದೋ ಹೇಳಿ ಸುಮ್ಮನಾಗುತ್ತಾರೆ. ಅದರಾಚೆಗಿನ ಸವಾಲು ಎದುರಾದಾಗ ಅದಕ್ಕೆ ಪ್ರತಿಕ್ರಿಯೆ ನೀಡುವಲ್ಲಿ ಅವರು ವಿಫಲರಾಗುತ್ತಾರೆ. ಅಂಥವರಲ್ಲಿ ಸೈದ್ಧಾಂತಿಕ ಪಕ್ವತೆ ಮತ್ತು ವೈಚಾರಿಕ ಸ್ಪಷ್ಟತೆಯನ್ನು ಮೂಡಿಸುವಂತಹ ಕೊಡುಗೆಯನ್ನು ಬಿವಿವಿ ತಮ್ಮ ಬರಹಗಳ ಮೂಲಕ ಮಾಡಿ ದೊಡ್ಡ ಕಾಣ್ಕೆಯನ್ನೇ ನೀಡಿದ್ದಾರೆ.

ಬಿವಿವಿ ಅವರದ್ದು ಸರಳ ವ್ಯಕ್ತಿತ್ವ. ಮೆಲುಮಾತಿನ ಸ್ವಭಾವ. ಆದ್ದರಿಂದ ಮೇಲುನೋಟಕ್ಕೆ ಅವರದ್ದೆಂತಹ ಗಟ್ಟಿ ವ್ಯಕ್ತಿತ್ವವೆಂಬುದು ಗೊತ್ತಾಗುವುದಿಲ್ಲ. ಅವರಿಗೀಗ 75ರ ಪ್ರಾಯ. ಅವರ ಪೀಳಿಗೆಯವರಾದ ಅಥವಾ ಅವರಿಗಿಂತ ವಯಸ್ಸಿನಲ್ಲಿ ಕಿರಿಯವರಾದ ಅದೆಷ್ಟೋ ಜನ ಈಗಾಗಲೇ ತಮ್ಮ ನಿಲುವುಗಳನ್ನು ಸಡಿಲಗೊಳಿಸಿಕೊಂಡಿದ್ದಾರೆ, ತಾವು ಪ್ರತಿನಿಧಿಸುತ್ತಿದ್ದ ಚಳವಳಿ/ಹೋರಾಟಗಳನ್ನು ಕೈಬಿಟ್ಟಿದ್ದಾರೆ ಅಥವಾ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡು ತಮ್ಮ ಅಸ್ತಿತ್ವವನ್ನೇ ಹರಾಜು ಹಾಕಿಕೊಂಡಿದ್ದಾರೆ. ಆದರೆ ಬಿವಿವಿ ಅವರು ಎಲ್ಲೂ, ಯಾರೊಂದಿಗೂ ರಾಜಿ ಮಾಡಿಕೊಳ್ಳದೆ ತಮ್ಮ ನಂಬಿಕೆಗಳಿಗೆ ಬದ್ಧರಾಗಿ consistent ಆಗಿ ಕಾರ್ಯ ನಿರ್ವಹಿಸುತ್ತಾ ಬಂದಿದ್ದಾರೆ. ಇವತ್ತಿನ ಕಲುಷಿತ ರಾಜಕೀಯ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪರಿಸ್ಥಿತಿಯಲ್ಲಿ ಬಿವಿವಿ ಅವರದ್ದು ಈ ನಿಟ್ಟಿನಲ್ಲಿ ದೊಡ್ಡ ಸಾಧನೆಯೇ ಸರಿ. ಆ ಕಾರಣಕ್ಕೂ ಅವರು ಎಲ್ಲರ ಗೌರವಕ್ಕೆ ಅರ್ಹರಾಗುತ್ತಾರೆ.

ಬಿವಿವಿ ಅವರನ್ನು ಓರ್ವ ವೈಚಾರಿಕ ಲೇಖಕ ಎಂದು ಮಾತ್ರ ಬಣ್ಣಿಸಿದರೆ ಅವರ ಕೊಡುಗೆಯನ್ನು ಸಂಕ್ಷಿಪ್ತಗೊಳಿಸಿದಂತಾಗುತ್ತದೆ. ಬದಲಾಗಿ ನಾನು ಅವರನ್ನು ಓರ್ವ ಮಾನವೀಯ ಚಿಂತಕ ಮತ್ತು ಬರಹಗಾರ ಎಂದು ಕರೆಯಲು ಇಷ್ಟಪಡುತ್ತೇನೆ. ಏಕೆಂದರೆ ಅವರು ನಮ್ಮ ಜನರ ಮೌಢ್ಯವನ್ನು ಕುರಿತಂತೆ ಮಾತ್ರ ಚಿಂತಿಸಿ ಬರೆದಿಲ್ಲ, ಬದಲಾಗಿ ನಮ್ಮ ನಾಡಿನಲ್ಲಿ ತಾಂಡವವಾಡುತ್ತಿರುವ ಎಲ್ಲ ರೀತಿಯ ಶೋಷಣೆಗಳ ಬಗ್ಗೆ ಚಿಂತಿಸಿ, ಅಧ್ಯಯನ ಮಾಡಿ, ಅವುಗಳನ್ನು ಆಳವಾಗಿ ವಿಶ್ಲೇಷಿಸಿದ್ದಾರೆ. ಅಂತಹ ಕಾರ್ಯಕ್ಕೆ ಅತ್ಯಗತ್ಯವಾದ ಕಾಳಜಿ, ಅದಕ್ಕೆ ಪೂರಕವಾದ ಓದು, ದೃಷ್ಟಿಕೋನ ಮತ್ತು ಪಾಂಡಿತ್ಯವನ್ನು ಅವರು ತಮ್ಮ ಪ್ರತಿ ಕಣದಲ್ಲೂ ಮೈಗೂಡಿಸಿಕೊಂಡಿದ್ದಾರೆ.


ನಮ್ಮೆಲ್ಲರಿಗೂ ಗೊತ್ತಿರುವಂತೆ 80 ಮತ್ತು 90ರ ದಶಕದಲ್ಲಿ 'ಲಂಕೇಶ್ ಪತ್ರಿಕೆ' ಈ ನಾಡಿನಲ್ಲಿ ದೊಡ್ಡ ಮಟ್ಟದ ಬದಲಾವಣೆಗಳಿಗೆ ಕಾರಣವಾದ ಪ್ರಮುಖ ಪತ್ರಿಕೆಯಾಗಿತ್ತು, ಆಗ ನನ್ನ ತಂದೆ ಪಿ.ಲಂಕೇಶರು ತಮ್ಮ ಬರಹಗಳಲ್ಲಿ ರಾಜಕೀಯ, ಸಾಹಿತ್ಯ ಮತ್ತು ಜೀವನ ಮೌಲ್ಯಗಳ ಬಗ್ಗೆ ವಿಶ್ಲೇಷಿಸುತ್ತಿದ್ದರೆ, ಪೂರ್ಣಚಂದ್ರ ತೇಜಸ್ವಿ ಅವರು ರಾಜಕೀಯ, ಸಾಹಿತ್ಯ ಮತ್ತು ಪರಿಸರ ಕುರಿತು ಚಿಂತಿಸುತ್ತಿದ್ದರೆ, ಬಿವಿವಿ ಅವರು ತಮ್ಮ ನೇರ ಮತ್ತು ಸರಳವಾದ ಬರಹದ ಮೂಲಕ ಒಂದು ತಲೆಮಾರಿನಲ್ಲಿ ವೈಚಾರಿಕ ಜ್ಞಾನ ಮತ್ತು ವಿವೇಕವನ್ನು ಹುಟ್ಟುಹಾಕಿದರು. ನನ್ನ ಪ್ರಕಾರ ಪತ್ರಿಕೆಯ ಅಂದಿಗೆ ವಿಶಿಷ್ಟತೆಗೆ ಬಿವಿವಿ ಅವರದ್ದೂ ದೊಡ್ಡ ಕೊಡುಗೆ ಇತ್ತು.

ಬಿವಿವಿ ಅವರು ನೂರಾರು ಲೇಖನಗಳನ್ನು, ಹತ್ತಾರು ಪುಸ್ತಕಗಳನ್ನು ಬರೆದಿದ್ದಾರೆ. ಅವೆಲ್ಲವೂ ಮುಖ್ಯವಾದ ಕೊಡುಗೆಗಳೇ. ಆದರೂ ನನ್ನ ಪಾಲಿಗೆ 'ಬಿವಿವಿ ಬೈಬಲ್' ತರಹ ಇರುವುದು ಅವರು ಬರೆದಿರುವ 'ವೇದಾಂತ ರೆಜಿಮೆಂಟ್'! ಬಿವಿವಿ ಅವರ ಎಲ್ಲ ಆಸಕ್ತಿಗಳ ಮತ್ತು ಕಾಳಜಿಗಳ ಸಂಗಮದಂತಿದೆ ಈ ಪುಸ್ತಕ. ಅದಕ್ಕಿಂತ ಹೆಚ್ಚಾಗಿ ನನ್ನ ಚಿಂತನೆ, ಬರಹ ಮತ್ತು ಅರಿವನ್ನು ಈ ಪುಸ್ತಕ ಹೆಚ್ಚಿಸಿದೆ. ಆ ಕಾರಣಕ್ಕೇ 'ವೇದಾಂತ ರೆಜಿಮೆಂಟ್' ಪುಸ್ತಕದ ಒಂದು ಪ್ರತಿ ನನ್ನ ಆಫೀಸಿನ ಕೊಠಡಿಯಲ್ಲೂ, ಮನೆಯ ಲೈಬ್ರರಿಯಲ್ಲೂ ಸದಾ ಇದ್ದೇ ಇರುತ್ತದೆ.

ಈ ಪುಸ್ತಕ ಮೊದಲು ಪ್ರಕಟಗೊಂಡು ಇಲ್ಲಿಗೆ ಇಪ್ಪತ್ತು ವರ್ಷಗಳೇ ಆಗಿದ್ದರೂ ಇವತ್ತಿಗೂ ಬಹಳಷ್ಟು ಸಮಕಾಲೀನ ಸವಾಲುಗಳಿಗೆ ಇದರಲ್ಲಿ ಉತ್ತರಗಳು ಸಿಗುತ್ತವೆ. ಆ ಕಾರಣಕ್ಕೇ ನಾನು ಹಲವಾರು ಬಾರಿ ಈ ಪುಸ್ತಕದ ಮೊರೆ ಹೋಗಿದ್ದೇನೆ. ಉದಾಹರಣೆಗೆ ದನದ ಮಾಂಸವನ್ನು ಹಿಂದೂಗಳು, ಅದರಲ್ಲೂ ಪುರೋಹಿತಶಾಹಿಗಳು, ಹಿಂದೊಮ್ಮೆ ತಿನ್ನುತ್ತಿದ್ದರು ಎಂಬುದನ್ನು ನನಗೆ ಮೊದಲು ತಿಳಿಸಿದ್ದೇ ಈ ಪುಸ್ತಕ. ಅಷ್ಟೇ ಅಲ್ಲ, ಗೋವು ಪವಿತ್ರ, ಅವುಗಳ ಹತ್ಯೆಯನ್ನು ನಿಷೇಧಿಸಬೇಕೆಂದು ಚೆಡ್ಡಿಗಳು ಕರ್ನಾಟಕದಲ್ಲಿ ಬೊಬ್ಬೆ ಹಾಕಲಾರಂಭಿಸಿದಾಗ ಈ ವಿಷಯ ಕುರಿತು ನನ್ನ ಲೇಖನವನ್ನು ಬರೆಯಲು ನೆರವಾಗಿದ್ದೂ ಇದೇ ಪುಸ್ತಕದಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಚಿಂತನೆಗಳನ್ನು ಆಧರಿಸಿ ಬಿವಿವಿ ಅವರು ಬರೆದಿರುವ ವಿವಿಧ ಲೇಖನಗಳು.

ನಮ್ಮ ಪ್ರಗತಿಪರ ವಲಯದಲ್ಲಿ ಎಲ್ಲರೂ ಜನಪರವಾದ ನಿಲುವನ್ನೇ ತೆಗೆದುಕೊಳ್ಳುತ್ತಾರಾದರೂ ಕೆಲವರು ತಮ್ಮ ವೈಯಕ್ತಿಕ ಬದುಕಿನಲ್ಲಿ ಅವುಗಳನ್ನು ಅಳವಡಿಸದೆ "ಅದು ವೈಯಕ್ತಿಕ ಆಯ್ಕೆಗೆ ಸೇರಿದ್ದು" ಎನ್ನುತ್ತಾರೆ. ಉದಾಹರಣೆಗೆ ನನ್ನನ್ನೇ ತೆಗೆದುಕೊಳ್ಳಿ. ನಾನು ಹಲವಾರು ವರ್ಷಗಳಿಂದ ಮಾಂಸಾಹಾರಿ ಆಗಿದ್ದರೂ ನಾನು ದನದ ಮತ್ತು ಹಂದಿಯ ಮಾಂಸವನ್ನು ತಿಂದಿರಲಿಲ್ಲ, ಹಂದಿಯ ಮಾಂಸ ತಿಂದರೆ ನನ್ನ ಮುಸಲ್ಮಾನ ಸಹೋದರರಿಗೆ ಮುಜುಗರವಾಗಬಹುದೆಂಬುದು ನನ್ನ ಅನಿಸಿಕೆಯಾಗಿತ್ತು, ಹಾಗೆಯೇ ದನಗಳು ಮುಗ್ಧ ಪ್ರಾಣಿಗಳು ಎಂಬ ನಿಲುವೂ ನನ್ನದಾಗಿತ್ತು, ಹಾಗಾದರೆ ಕೋಳಿ, ಕುರಿ ಇತ್ಯಾದಿಗಳೂ ಯಾವ ರೀತಿಯಲ್ಲಿ ಮುಗ್ಧವಲ್ಲ ಎಂದು ನನ್ನನ್ನು ನಾನೇ ಕೇಳಿಕೊಂಡು ಗೊಂದಲದ ಗೂಡಾಗಿದ್ದೆ. ಹೋದ ವರ್ಷದತನಕ ಕೆಲವು ಗೆಳೆಯರಿಂದಾಗಿ ಹಂದಿ ಮಾಂಸವನ್ನು ತಿಂದಿದ್ದೆನಾದರೂ ದನದ ಮಾಂಸವನ್ನು ತಿಂದಿರಲಿಲ್ಲ, ಆದರೆ ಯಾವಾಗ ಬಿಜೆಪಿ ಸರ್ಕಾರ ಗೋಹತ್ಯೆ ನಿಷೇಧ ಕುರಿತ ಮಸೂದೆಯೊಂದನ್ನು ತರಲು ಸಜ್ಜಾಯಿತೋ ಆಗ ಅಂತಹ ಕಾನೂನನ್ನು ಜಾರಿಗೊಳಿಸುವುದನ್ನು ವಿರೋಧಿಸಿದ ನಾನು "put your money where your mouth is" ಎಂಬ ಧೋರಣೆಯನ್ನು "put your belief where your mouth is"ಎಂದು ಬದಲಾಯಿಸಿಕೊಂಡು ದನದ ಮಾಂಸವನ್ನು ತಿಂದೆ. ಅಂದರೆ ನಾನು ಒಂದು ರಾಜಕೀಯ ನಿಲುವಿಗೆ ಬದ್ಧವಾಗಿರಬೇಕೆಂದು ಕೊನೆಗೂ ದನದ ಮಾಂಸವನ್ನು ತಿಂದಿದ್ದೆ.


ಬಿವಿವಿ ಅವರು ನನ್ನಂಥ ಪ್ರಗತಿಪರರಿಗಿಂತಲೂ ಭಿನ್ನವಾಗುವುದು ಮತ್ತು ಉತ್ತಮರಾಗುವುದು ಯಾವ ಕಾರಣಕ್ಕೆಂದರೆ ಅವರು ಇಂತಹ ನಿರ್ಧಾರಗಳನ್ನು ಯಾವ ರಾಜಕೀಯದ ಹಂಗೂ ಇಲ್ಲದೆ ಸಹಜವಾಗಿ ಅವನ್ನು ತೆಗೆದುಕೊಳ್ಳುವುದರಿಂದ. ಉದಾಹರಣೆಗೆ 'ಕಸಾಯಿ ಖಾನೆಯಲ್ಲಿ ಮಠಾಧೀಶರ ಮೂತಿ' ಎಂಬ ಲೇಖನದಲ್ಲಿ ಬಿವಿವಿ ಅವರು ಹೀಗೆ ದಾಖಲಿಸುತ್ತಾರೆ: "ನಾನು ಸಾಮಾನ್ಯವಾಗಿ ಸಸ್ಯಾಹಾರಿ. ಸಂದರ್ಭ ಒದಗಿದಾಗ



ಹುಟ್ಟುವಾಗಲೇ ಕೈಗಳಿಲ್ಲದೆ ಜನಿಸಿದ ಬಾಲಕಿಯೊಬ್ಬಳು ತನ್ನ ಕಾಲ ಬೆರಳುಗಳಲ್ಲಿ ಚಾಕ್‌ಪೀಸ್ ಹಿಡಿದು ಬರೆಯುತ್ತಾಳೆ. ಮೊಣಕಾಲ ಆಚೆಗೆ ಕಾಲುಗಳಿಲ್ಲದ ಹುಡುಗನೊಬ್ಬ ಜಿಮ್ನಾಸ್ಟಿಕ್ಸ್‌ನ 'ಸೂಪರ್' ಪ್ರದರ್ಶನ ನೀಡುತ್ತಾನೆ. ವಿಶೇಷ ಒಲಂಪಿಕ್ಸ್‌ನಲ್ಲಂತೂ ವಿಕಲಚೇತನರ ಅತ್ಯದ್ಭುತ ಚೇತನ ಸಾಮಾನ್ಯರನ್ನು ನಾಚಿಸುವಂತೆ ಇರುತ್ತದೆ. ಈ ಜೀವನೋತ್ಸಾಹಕ್ಕೆಲ್ಲ ಕಿರೀಟಪ್ರಾಯದಂತೆ ಎರಡೂ ಕೈಗಳಿಲ್ಲದ ಜೆಸ್ಸಿಕಾ ಕಾಕ್ಸ್ ಹಕ್ಕಿಯಂತೆ ಭೂಮಿಯ ಮೇಲೆ ವಿಮಾನ ಹಾರಿಸಿ ಬಂದಿದ್ದಾಳೆ. ತನ್ನ ಕಾಲುಗಳನ್ನೇ ಕೈಗಳನ್ನಾಗಿ ಒಗ್ಗಿಸಿಕೊಂಡು ಸಹಜಜೀವನ ನಡೆಸುತ್ತಿರುವ ಜೆಸ್ಸಿಕಾಳ ಆತ್ಮವಿಶ್ವಾಸ, ಉತ್ಸಾಹ ಎಂಥವರನ್ನೂ ಪುಳಕಗೊಳಿಸುತ್ತದೆ.

ಸೃಜನಶೀಲತೆ, ಶ್ರಮ ಮತ್ತು ಧೈರ್ಯ ಈ ಮೂರು ಗುಣಗಳನ್ನು ಒಟ್ಟಾಗಿ ಬಳಸಿದರೆ ಜೀವನದಲ್ಲಿ 'ಅಸಾಧ್ಯವಾದುದು ಯಾವುದು ಇಲ್ಲ' ಎಂಬುದೇ ಈಕೆಯ ಸಾಧನೆಯ ಏಕೈಕ ಫಾರ್ಮುಲಾ. ಹುಟ್ಟುವಾಗಲೇ ಎರಡೂ ಕೈಗಳಿಲ್ಲದೆ ಹುಟ್ಟಿದ ಜೆಸ್ಸಿಕಾ ಶಾಲೆಯಲ್ಲಿ ತನ್ನ ಸಹಪಾಠಿಗಳೆಲ್ಲಾ ಕಂಬಕ್ಕೆ ನೇತಾಡುತ್ತಾ ಕೋತಿಗಳಂತೆ ಆಡುವಾಗ ದೂರದ ಒಂದು ಉಯ್ಯಾಲೆಯ ಮೇಲೆ ಕೂತು ತಾನು ಹಕ್ಕಿಯಂತೆ ಹಾರುವ ಕನಸು ಕಾಣುತ್ತಿದ್ದಳು. ಅಂದಿನಿಂದ ಪ್ರಾರಂಭವಾದ ಆಕೆಯ 'ಕನಸು ಬೆನ್ನು ಹತ್ತುವ' ಸಾಧಕ ಬದುಕು ವಿಶಿಷ್ಟ ಸಾಧನೆಯೊಂದಿಗೆ ಹಾರಾಡುತ್ತದೆ.

ಅಮೆರಿಕದ ವಿಲಿಯಂ ಮತ್ತು ಇನೆಜ್ ಕಾಕ್ಸ್ ದಂಪತಿಗಳಿಗೆ 1983ರಲ್ಲಿ ಹುಟ್ಟಿದ ಎರಡನೇ ಕೂಸೇ ಜೆಸ್ಸಿಕಾ. ಇನೆಜ್ ಕಾಕ್ಸ್ ತಾನು ಗರ್ಭಿಣಿಯಾಗಿದ್ದಾಗ ಎಲ್ಲಾ ವೈದ್ಯಕೀಯ ಪರೀಕ್ಷೆಗಳಿಗೂ ಒಳಪಟ್ಟಿದ್ದಳು. ಆದರೆ ಇನೆಜ್‌ಗೆ ಕೈಯಿಲ್ಲದ ಮಗುವೊಂದು ಹುಟ್ಟುತ್ತದೆ ಎಂಬುದನ್ನು ಯಾವ ವೈದ್ಯಕೀಯ ಪರೀಕ್ಷೆಯೂ ಸೂಚಿಸಲಿಲ್ಲ, ಎರಡೂ ಕೈಗಳಿಲ್ಲದೆ ಮಗು ಹುಟ್ಟಿದಾಗ ತಂದೆತಾಯಿ ಕುಸಿದುಹೋಗಿದ್ದರು. ಆದರೆ ಧೃತಿಗೆಡಲಿಲ್ಲ, ಪುಟಾಣಿ ಜೆಸ್ಸಿಕಾಳ ಮುಂದೆ ಆಟದ ಸಾಮಾನುಗಳನ್ನು ಹಾಕುತ್ತಿದ್ದರು. ಕೈಗಳಿಲ್ಲದ ಪುಟ್ಟ ಮಗು ತನ್ನ ಕಾಲುಗಳನ್ನೇ ಕೈಗಳಂತೆ ಬಳಸಿ ಆಟಿಕೆಗಳೊಂದಿಗೆ ಆಡುತ್ತಿತ್ತು, ಮಗುವಿನ ಅಂಗನ್ಯೂನತೆಯನ್ನು ಲೆಕ್ಕಿಸದೆ ಆಕೆಯ ಸಾಧನೆಯ ದಾರಿಯಲ್ಲಿ ಸ್ಫೂರ್ತಿಯಾಗಿ ನಿಂತ ಈ ಅಪ್ಪ ಅಮ್ಮ ನಿಟ್ಟುಸಿರು ಬಿಡುವುದಿರಲಿ, ಹರ್ಷದಲ್ಲಿ ಬೀಗುವಂತೆ ಮಾಡಿದ್ದಳು. ಎರಡು ವರ್ಷವಿರುವಾಗ ಜೆಸ್ಸಿಕಾ ಕೃತಕ ಕೈಗಳನ್ನು ಬಳಸಲು ಪ್ರಾರಂಭಿಸಿದಳು. ಆದರೆ ಹದಿನಾಲ್ಕನೇ ವರ್ಷಕ್ಕೆ ಅದನ್ನು ಕಿತ್ತೆಸೆದಳು. ಕೈಗಳಿಲ್ಲದೆಯೂ ಸಾಧಿಸಬೇಕೆಂಬ ಹಠ ಆಗಾಗಲೇ ಅವಳ ಮನಸ್ಸಿನಲ್ಲಿ ಮನೆ ಮಾಡಿದ್ದಿರಬೇಕು.



ಮೂರು ವರ್ಷದವಳಿದ್ದಾಗ ಜಿಮ್ನಾಸ್ಟಿಕ್ಸ್ ತರಗತಿಗಳನ್ನು ಸೇರಿದ ಈಕೆ ಮುಂದೆ ಟೇಕ್‌ವಾಂಡೋ ಕಲೆಯಲ್ಲಿ ಡಬಲ್ ಬ್ಲಾಕ್ ಬೆಲ್ಟ್ ಪಡೆಯುವಷ್ಟು ಪರಿಣತಿಯನ್ನು ಸಾಧಿಸಿದಳು. ಆರು ವರ್ಷವಿದ್ದಾಗ ಹಿತ್ತಲಿನ ಹೊಂಡದಲ್ಲಿ ಈಜಲು ಆರಂಭಿಸಿ ಪ್ರಮಾಣಿತ ಸ್ಕೂಬಾ ಡೈವರ್ ಆದಳು (ಉಸಿರಾಟ ಸಾಧನವನ್ನು ಅಳವಡಿಸಿಕೊಂಡು ಆಳ ಸಮುದ್ರದಲ್ಲಿ ಹೆಚ್ಚು ಹೊತ್ತು ಈಜುವ ಕಲೆ). ಈ ಸಾಧನೆಗಳ ನಡುವೆ ಜೆಸ್ಸಿಕಾ ತನ್ನ ದೈನಂದಿನ ಬದುಕಿನ ಕೆಲಸಗಳಿಗೆ ಯಾರನ್ನೂ ಅವಲಂಬಿಸಿದ್ದಿಲ್ಲ. ತನ್ನ ತಲೆ ಬಾಚಿಕೊಳ್ಳುವುದರಿಂದ ಹಿಡಿದು, ಕಣ್ಣಿಗೆ ಲೆನ್ಸ್ ಹಾಕಿಕೊಳ್ಳುವ ತನಕ ಎಲ್ಲವನ್ನೂ ತಾನೇ ಮಾಡಿಕೊಳ್ಳುತ್ತಾಳೆ. ನಿಮಿಷಕ್ಕೆ 25 ಪದಗಳನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡುವ ಈಕೆ ಪಿಯಾನೋ ಮೇಲೂ ತನ್ನ 'ಕಾಲಚಳಕ' ತೋರಿಸುತ್ತಾಳೆ. ಅಡಿಗೆ ಮಾಡುವುದು, ತಿನ್ನುವುದು, ಪಾತ್ರೆ ತೊಳೆಯುವುದು, ತಲೆ ಬಾಚಿಕೊಳ್ಳುವುದು, ಮೇಕಪ್ ಮಾಡಿಕೊಳ್ಳುವುದು ಯಾವುದರಲ್ಲೂ ಈ ಕಾಲಚಳಕ ಕಡಿಮೆಯಿಲ್ಲ, ಕಾರ್ ಡ್ರೈವ್ ಅಂತೂ ಈಕೆಯ ಕಾಲುಗಳಿಗೆ ಲೀಲಾಜಾಲ. ಕಾರು ಕಲಿಯುವ ಆರಂಭದ ದಿನಗಳಲ್ಲಿ ಆಕೆಯ ಕೈಗಳಿಲ್ಲದ ದೇಹಕ್ಕೆ ಹೊಂದುವಂತೆ ಕೆಲವು ವಿಶೇಷ ಬದಲಾವಣೆಗಳನ್ನು ಕಾರಿಗೆ ಮಾಡಲಾಗಿತ್ತು, ಆದರೆ ನಂತರದ ದಿನಗಳಲ್ಲಿ ಈ ಬದಲಾವಣೆಗಳನ್ನು ತೆಗೆದುಹಾಕಿ ಎಲ್ಲರೂ ಬಳಸುವಂಥ ಕಾರನ್ನೇ ಬಳಸಲಾರಂಭಿಸಿದಳು.

ಅರಿಜೋನಾ ವಿಶ್ವವಿದ್ಯಾಲಯದಲ್ಲಿ ಸೈಕಾಲಜಿ ಪದವಿ ಪಡೆದ ಐದಡಿ ಒಂದಂಗುಲದ, ಕೈಗಳಿಲ್ಲದ ಈ ಯುವತಿ ಜೆಸ್ಸಿಕಾ, ನೀರಿನಲ್ಲಿ ಮೀನಿನಂತೆ ಈಜಿದ್ದಳು, ಟೇಕ್‌ವಾಂಡೋ ಕಲೆಯಿಂದ ಎದುರಾಳಿಯನ್ನು ಬಗ್ಗುಬಡಿಸಿದ್ದಳು, ಮೈ ಕುಲುಕಿಸಿ ಸಂಗೀತಕ್ಕೆ ಹೆಜ್ಜೆ ಹಾಕಿದ್ದಳು, ರಸ್ತೆಯಲ್ಲಿ ನಿರ್ಭೀತಿಯಿಂದ ಕಾರು ಓಡಿಸಿದ್ದಳು. ಆದರೆ ಹಕ್ಕಿಯಂತೆ ವಿಮಾನದಲ್ಲಿ ಹಾರಬೇಕೆಂದಾಗ

ರೆಕ್ಕೆಗಳಿಲ್ಲದೆ ಹಾರಿದ ಹಕ್ಕಿ

ಮಾತ್ರ ಮನಸ್ಸು ತುಸು ಅಳುಕುತ್ತಿತ್ತು. ಈ ಭಯವನ್ನು ಹತೋಟಿಗೆ ತರಲೇಬೇಕೆಂದು ನಿರ್ಧರಿಸಿದ ಜೆಸ್ಸಿಕಾ ಹಗುರ ವಿಮಾನ ಹಾರಾಟದ ಕೋರ್ಸ್ ಸೇರಿಯೇಬಿಟ್ಟಳು. ಆರು ತಿಂಗಳ ಈ ಕೋರ್ಸ್ ಮುಗಿಸಲು ಆಕೆಗೆ ಮೂರು ವರ್ಷ ಹಿಡಿಯಿತು. ಆದರೆ ಛಲ ಬಿಡದ ಜೆಸ್ಸಿಕಾ ಸುಮಾರು [illegible] ಗಂಟೆಗಳ ವಿಮಾನ ಹಾರಾಟದ ಅಭ್ಯಾಸದೊಂದಿಗೆ ಕೊನೆಗೂ ವಿಮಾನ ಹಾರಿಸುವ ಹಕ್ಕಿಯ ಲೈಸೆನ್ಸ್ ಪಡೆದೇಬಿಟ್ಟಳು.

ಮಾಂಸಾಹಾರವನ್ನು ಸೇವಿಸಿದ್ದೇನೆ. ಅಂದು ವಿಜಯವಾಡದ ಸಾಮೂಹಿಕ ಭೋಜನಕೂಟದಲ್ಲಿ ಒಂದೊಂದು ಚಮಚ ಗೋ ಮತ್ತು ಹಂದಿ ಮಾಂಸ ಸೇವಿಸಲು ನನಗೆ ಯಾವ ಸಂಜರಿತವೂ ಆಗಲಿಲ್ಲ. ಬದಲಿಗೆ ಭಿನ್ನ ಸಾಮಾಜಿಕ ಮತ್ತು ಭೌಗೋಳಿಕ ಹಿನ್ನೆಲೆಯ ಹಿಂದೂ, ಮುಸಲ್ಮಾನ್ ಮತ್ತು ಕ್ರೈಸ್ತರೊಡನೆ ಸಹಪಂಕ್ತಿಯಲ್ಲಿ ಬೆರೆಯುವ ಅವಕಾಶ ದೊರಕಿದ್ದಕ್ಕೆ ಪುಲಕಿತನಾಗಿದ್ದೆ." ಇಂತಹ ಹಲವಾರು ಘಟನೆಗಳು ಅವರ ಬದುಕಿನಲ್ಲಿ ಎದುರಾಗಿವೆ ಮತ್ತು ಬಿವಿವಿ ಅವರು ಅವುಗಳನ್ನು ಯಾವುದೇ ಘೋಷಣೆ ಅಥವಾ ಚಳವಳಿಯಂತೆ ಬಿಂಬಿಸದೆ ಸ್ವೀಕರಿಸಿದ್ದಾರೆ ಅಥವಾ ಎದುರಿಸಿದ್ದಾರೆ.

ಮಾನವೀಯತೆಯನ್ನು ಪ್ರತಿಬಿಂಬಿಸುವ ಕವನವಿರಲಿ, ಚಿತ್ರ ಇರಲಿ, ಯಾವುದೋ ತೀರ್ಪಿರಲಿ... ಅವುಗಳನ್ನು ತನ್ನ ಜನರಿಗೆ ತಂದು ಕೊಡುವ; ಜನರ ಆತ್ಮವಿಶ್ವಾಸವನ್ನು ಕುಬ್ಜಗೊಳಿಸುವ ಜ್ಯೋತಿಷ್ಯ ಮತ್ತು ಮೌಢ್ಯಗಳನ್ನು, ರಾಮಾಯಣ ಮತ್ತು ಮಹಾಭಾರತದಂತಹ ಮಹಾನ್ ಕಾವ್ಯಗಳಲ್ಲಿರುವ ಜನವಿರೋಧಿ ಧೋರಣೆಗಳನ್ನೂ ವಿಶ್ಲೇಷಿಸಿ ಜನರ ಮುಂದಿಡುವ; ವಿವಿಧ ಧರ್ಮಗಳಲ್ಲಿರುವ ಮೂಢಾಚಾರವನ್ನು ಯಾವ ಹಿಂಜರಿಕೆಯೂ ಇಲ್ಲದೆ ಖಂಡಿಸುವ ಬಿವಿವಿ ಅದನ್ನೇ ತಮ್ಮ ಬದುಕಿನ ಮುಖ್ಯಗುರಿಯಾಗಿಸಿಕೊಂಡು ಅದರಲ್ಲಿ ಸಾಫಲ್ಯತೆಯನ್ನು ಕಂಡಿರುವುದು ಹೆಮ್ಮೆಯ ಸಂಗತಿಯೇ ಸರಿ.

'ವೇದಾಂತ ರೆಜಿಮೆಂಟ್' ಪುಸ್ತಕದಲ್ಲಿರುವ 'ಮಕ್ಕಳನ್ನು ಧರ್ಮದ ಉರುಳಿಗೆ ಸಿಲುಕಿಸುವ ಪಠ್ಯಪುಸ್ತಕಗಳು' ಎಂಬ ಲೇಖನದ ಕೊನೆಯಲ್ಲಿ ಬಿವಿವಿ ಅವರು ಹೀಗೆ ಬರೆಯುತ್ತಾರೆ: "ನಮ್ಮ ಸಂವಿಧಾನದಲ್ಲಿ 42ನೇ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾದ ಮೂಲಭೂತ ಕರ್ತವ್ಯಗಳಲ್ಲಿ ಒಂದಾದ "ವೈಜ್ಞಾನಿಕ ಪ್ರವೃತ್ತಿ, ಮಾನವೀಯತೆ, ಅನ್ವೇಷಣೆ ಮತ್ತು ಸುಧಾರಣಾ ಮನೋಭಾವ"ಗಳನ್ನು ಬೆಳೆಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಬೇಕು ಎಂಬುದರತ್ತ ನಮ್ಮ ಗಮನಸೆಳೆದು, ಸಂವಿಧಾನ ಬದ್ಧ ಕರ್ತವ್ಯಗಳನ್ನು ತಾತ್ವಿಕವಾಗಿ ಮಾತ್ರ ಒಪ್ಪಿಕೊಂಡು ಆಚರಣೆಯಲ್ಲಿ ತರಲು ಹಿಂಜರಿದರೆ ನಾವು ನಿಜವಾಗಿಯೂ ನೈತಿಕ ಹೊಣೆಗೇಡಿಗಳಾಗುತ್ತೇವೆ."

ಬಿ.ವಿ.ವೀರಭದ್ರಪ್ಪನವರು ಈ ನಿಟ್ಟಿನಲ್ಲಿ ಈ ದೇಶದ ಸರ್ವ ಆದರ್ಶ ಪ್ರಜೆಯಾಗಿದ್ದಾರೆ ಮಾತ್ರವಲ್ಲ ದೂರದಿಂದಲೇ ನನ್ನಂತಹ ಅನೇಕ ಶಿಷ್ಯರನ್ನು ಬೆಳೆಸಿದ್ದಾರೆ. ಅಷ್ಟೇ ಮುಖ್ಯವಾಗಿ ಈ ಗುರುಗಳು ದ್ರೋಣನಂತೆ ನಮ್ಮಂತಹ ಏಕಲವ್ಯರಿಂದ ಗುರುದಕ್ಷಿಣೆಯನ್ನು ಪಡೆಯದೆ ಆಧುನಿಕ ಭಾರತದ ಜಾತ್ಯತೀತ, ಪ್ರಜಾಪ್ರಭುತ್ವವಾದಿ ಪ್ರಜೆಗಳನ್ನಾಗಿ ರೂಪಿಸಿದ್ದಾರೆ.

ಈ ಗುರುಗಳಿಗೆ ಧನ್ಯವಾದಗಳು. ಅವರು ನಮ್ಮೊಂದಿಗೆ ಇನ್ನಷ್ಟು ಕಾಲ ಇದ್ದು ಹೊಸತಲೆಮಾರಿನವರಿಗೂ ಮಾರ್ಗದರ್ಶಿಗಳಾಗಲಿ ಎಂದು ಆಶಿಸುತ್ತೇನೆ.

• ಗೌರಿ ಲಂಕೇಶ್

ಮನುಷ್ಯನಿಗೆ ಇರುವ ಎರಡು ಕೈಗಳು ಕೇವಲ 'ಸ್ಪೇರ್ ಪಾರ್ಟ್ಸ್' ಎಂಬಂತೆ ಪರಿಗಣಿಸುವ ಜೆಸ್ಸಿಕಾಳ ಜೀವನೋತ್ಸಾಹ ಮತ್ತು ಸಾಧನೆಯ ಛಲ ಅದ್ಭುತವಾದುದು. ಈ ಉತ್ಸಾಹ ಮತ್ತು ಛಲವನ್ನು ಆಕೆ ತನ್ನಷ್ಟಕ್ಕೇ ಇಟ್ಟುಕೊಳ್ಳದೆ ತನ್ನ ಆತ್ಮವಿಶ್ವಾಸವನ್ನು ಇತರರಿಗೂ ಹಂಚುತ್ತಿದ್ದಾಳೆ. ಮಾತುಗಾರ್ತಿ ಜೆಸ್ಸಿಕಾ ಕಾಡಹರಟೆಯ ಕಲ್ಲ, ತನ್ನ ಬದುಕಿನ ಏಳುಬೀಳುಗಳ ಕತೆಗಳನ್ನು ಹಾಸ್ಯದ ಚಟಾಕಿಯೊಂದಿಗೆ ವಿವರಿಸುತ್ತಾ ಹತಾಶೆ ಮತ್ತು ನೀರಸ ಬದುಕುಗಳಿಗೆ ಪುಟಿಯುವ ಚೇತನ ತುಂಬಿಸುವ ಸ್ಫೂರ್ತಿಯಾಗಿದ್ದಾಳೆ. ಇದಕ್ಕೊಂದು ಉದಾಹರಣೆ ನೋಡಿ. ಸ್ವತಂತ್ರ ಮಹಿಳೆಯರ ಎರಡು ದಿನಗಳ ಸಭೆಯನ್ನು ಕೌಲಾಲಂಪುರದಲ್ಲಿ ಏರ್ಪಡಿಸಲಾಗಿತ್ತು. ಆ ಸಭೆಯಲ್ಲಿ ಜೆಸ್ಸಿಕಾ ವಿಶೇಷ ಭಾಷಣ ಮಾಡಿದಳು. ಆಕೆ ವಿಮಾನ ಹಾರಾಟದ ಕೋರ್ಸ್ ಮಾಡುವಾಗ ಎದುರಿಸಿದ ಮೊದಲ ಸವಾಲೆಂದರೆ ಸೀಟ್ ಬೆಲ್ಟ್ ಕಟ್ಟಿಕೊಳ್ಳುವುದು. ಇದನ್ನು ಮಾಡುವುದು ಹೇಗೆ? ತಾನು ಕಂಡುಹಿಡಿದಿದ್ದ ವಿಧಾನವನ್ನು ತೋರಿಸಿದಳು – ಒಂದು ಚೇರಿನ ಮೇಲೆ ಜಿಗಿದು, ಇನ್ನೊಂದು ಚೇರ್‌ಗೆ ಮೊದಲೇ ಜೋಡಣೆಯಾಗಿದ್ದ ಬಕಲ್ ಹಾಕಿ ಸಿದ್ಧವಿದ್ದ ಸೀಟ್‌ಬೆಲ್ಟ್ ಒಳಗೆ ಕಾಲಿಳಿಸಿ ದೇಹವನ್ನು ಹೊಂದಿಸಿಕೊಂಡು ಕೂತಳು. ಒಂದು ಕೆಲಸವನ್ನು ಮಾಡಲು ಇರುವುದೊಂದೇ ವಿಧಾನ ಎಂಬಂತೆ ಕೈಚೆಲ್ಲಿ ಕೂರುವ ಅನೇಕರಿಗೆ ಜೆಸ್ಸಿಕಾ ಹತ್ತಾರು ಸೃಜನಶೀಲ ವಿಧಾನಗಳನ್ನು ಪರಿಚಯಿಸುತ್ತಾಳೆ.

"ಅಂಗವೈಕಲ್ಯ ಇರುವವರು ಹಾರಾಡಬೇಕು; ಅಂಗವಿಕಲರು ಶಕ್ತಿಹೀನರು ಎಂಬ ವಿಶ್ವದ ಅನಿಸಿಕೆಯನ್ನು ಬದಲಾಯಿಸಲು ಹಾರಬೇಕು; ಅಂಗವಿಕಲರು ಶಕ್ತಿಹೀನರಲ್ಲ, ಸಶಕ್ತರು, ಉನ್ನತ ಗುರಿಸಾಧಕರು ಎಂಬುದನ್ನು ತೋರಿಸಲು ಹಾರಬೇಕು" ಎಂಬ ಸ್ಫೂರ್ತಿದಾಯಕ ಮಾತುಗಳಿಂದ ಹತಾಶಗೊಂಡ ಅದೆಷ್ಟೋ ವಿಕಲಚೇತನರಲ್ಲಿ ಬದುಕಿನ ಉತ್ಸಾಹವನ್ನು ಚಿಮ್ಮಿಸಿದ ಜೆಸ್ಸಿಕಾ ಸಾಧನೆ ಮತ್ತು ಜೀವನೋತ್ಸಾಹ 'ಎರಡೂ ಕೈಗಳಿರುವ' ಮನುಷ್ಯರ ಜಡತ್ವವನ್ನು ಕಂಡು ಅಣಕಿಸುತ್ತಿರುವಂತೆ ಭಾಸವಾಗುತ್ತದೆ.

• ರೀಟಾ ರೀನಿ

ಮಲಬಾರ್ ಪೈಡ್ ಹಾರ್ನ್ ಬಿಲ್‌ಗಳಿಗೂ ನಶೆ ಏರುತ್ತದೆ!

ಹಾರ್ನ್ ಬಿಲ್ ಹಕ್ಕಿಗೆ ನಶೆ ಏರುತ್ತದೆಯೇ?! ಆಗಾಗ ಏರುತ್ತದೆ! ಏರಿದ್ದು ಇಳಿಯುವವರೆಗೆ ಆಗಸಕ್ಕೆ ಲಗ್ಗೆ ಹಾಕಬಲ್ಲ ಈ ಕೌತುಕದ ಪಕ್ಷಿ ಭೂಮಿಗಿಳಿಯುತ್ತದೆ!

ವನ್ಯಜೀವಿಗಳ ಖ್ಯಾತ ಛಾಯಾಗ್ರಾಹಕ ನರೇಂದ್ರ ಪಾಟೀಲ್ ಕವಳೇಶ್ವರ ಗುಡ್ಡದಲ್ಲಿ ಕ್ಲಿಕ್ಕಿಸಿದ ಅಪರೂಪದ ಫೋಟೋ ಇದು. ಖ್ಯಾತ ಪರಿಸರಪ್ರೇಮಿಗಳಾದ ಪ್ರೊ. ಗಂಗಾಧರ ಕಲ್ಲೂರ ಹಾಗೂ ಪ್ರೊ. ಆಂಟೋನಿ ಅವರೊಂದಿಗೆ ಕವಳೇಶ್ವರ ಗುಡ್ಡದಲ್ಲಿ ಚಾರಣ ಕೈಗೊಂಡಾಗ ನಶೆ ಏರಿದ್ದರಿಂದ ಸುಸ್ತು ಹೊಡೆದು – ಬಳಲಿ, ನೆಲಕ್ಕೊರಗಿದ್ದ ಮಲಬಾರ್ ಪೈಡ್ ಹಾರ್ನ್ ಬಿಲ್ ಪಕ್ಷಿ ಕೈಗೆ ಸಿಕ್ಕಾಗ ತೆಗೆದ ಛಾಯಾಚಿತ್ರವದು. ಆಕಸ್ಮಿಕವಾಗಿ ಕೈಗೆ ಸಿಕ್ಕ ನಿಸರ್ಗದ ಕೌತುಕವೊಂದರ ಆರೈಕೆಯಲ್ಲಿ ಅವರು ತೊಡಗಿದ ಮಾನವೀಯ ಕಳಕಳಿಯ ದೃಶ್ಯವಿದು.

[illegible] 'ಧಾರವಾಡದ ಪಕ್ಷಿ ವೀಕ್ಷಕರ ಕೂಟ'ವನ್ನು ಸ್ಥಾಪಿಸಿದ್ದಾರೆ. ಇವರು 'birdsindharwad' ಎಂಬ ವೆಬ್ ಸೈಟನ್ನು ನಡೆಸುತ್ತ ಅದರಲ್ಲಿ ವಿವಿಧ ಪಕ್ಷಿಗಳ ಬಗ್ಗೆ ಅದ್ಭುತವಾದ ಲೇಖನಗಳನ್ನು ಮತ್ತು ಚಿತ್ರಗಳನ್ನು ಪ್ರಕಟಿಸುತ್ತಿರುತ್ತಾರೆ. ಇತ್ತೀಚಿಗೆ ಮಲಬಾರ್ ಪೈಡ್ ಹಾರ್ನ್ ಬಿಲ್ ಬಗ್ಗೆ ಅವರು ಪ್ರಕಟಿಸಿದ ಲೇಖನ ಇಲ್ಲಿದೆ. ಆಸಕ್ತರು http:// birdsindharwad.in/ index.php ಎಂಬ ವೆಬ್ ಸೈಟನ್ನು ಸಂಪರ್ಕಿಸಬಹುದು.



ಮಲಬಾರ್ ಪೈಡ್ ಹಾರ್ನ್ ಬಿಲ್ (ಮಂಗಟ್ಟೆ ಹಕ್ಕಿ) ಪಶ್ಚಿಮ ಘಟ್ಟದ ಕಾಡುಗಳಿಗೆ ಹೊಂದಿಕೊಂಡಿರುವ ಹಳಿಯಾಳ, ದಾಂಡೇಲಿ ಹಾಗೂ ಅಂಬಿಕಾನಗರಗಳಲ್ಲಿ ಕಾಡಿನ ಆರೋಗ್ಯ ಸೂಚಕ ಪಕ್ಷಿಯಾಗಿ ಗುರುತಿಸಲ್ಪಡುತ್ತದೆ. ಈ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರೆ ಕಾಡು ಆರೋಗ್ಯಪೂರ್ಣವಾಗಿದೆ ಎಂದರ್ಥ. ಸಂಖ್ಯೆ ಕ್ಷೀಣಿಸಿದ್ದರೆ ಕಾಡಿನ ಯಾವುದೋ ಭಾಗದಲ್ಲಿದ್ದ ಹಣ್ಣಿನ ಮರಗಳು ಆಹುತಿಯಾಗಿವೆ; ಹಾಗಾಗಿ ಕಾಡಿನ ಸಮತೋಲನ ತಪ್ಪಿ ಅನಾರೋಗ್ಯ ಅಪ್ಪಳಿಸಿದೆ ಎಂದು ಗಣಿಸಲಾಗುತ್ತದೆ.

ಮಲಬಾರ್ ಪೈಡ್ ಹಾರ್ನ್ ಬಿಲ್ ಹಕ್ಕಿಗೆ ಹಿಂದಿ ಭಾಷೆಯಲ್ಲಿ ಧನ್ ಛಿರಿ, ಬಂಗಾಳಿಯಲ್ಲಿ ಬಾಗ್ಮಾ ಧನೇಶ್, ಓರಿಯಾದಲ್ಲಿ ಕುಛಲಾ ಖಾ, ಮರಾಠಿಯಲ್ಲಿ ವಯೇರಾ, ಕೊಂಕಣಿಯಲ್ಲಿ ಕನಾರಿ, ತಮಿಳಿನಲ್ಲಿ ಇರಟ್ಟಾಯ್ ಛೋಂಡು ಕುರುವಿ, ಮಲಯಾಳಿಯಲ್ಲಿ ವೆಝುಂಬಾಲೆಂದು ಕರೆಯಲಾಗುತ್ತದೆ. ಅಂಜೂರ ಜಾತಿಯ ಅತ್ತಿ, ಆಲ, ಬಸರಿ ಸೇರಿದಂತೆ ಎಲ್ಲ ತರಹದ ಕಾಡಿನ ಹಣ್ಣಿನ ಮರಗಳಲ್ಲಿ ಗುಂಪುಗೂಡಿ ಮಕ್ಕಳಂತೆ ಗಲಾಟೆ ಎಬ್ಬಿಸಿ ಹಣ್ಣುಗಳನ್ನು ಹೆಕ್ಕುವುದು ನಯನಮನೋಹರ ದೃಶ್ಯ. ಅನಿವಾರ್ಯ ಪ್ರಸಂಗಗಳಲ್ಲಿ ಹಲ್ಲಿ, ಓತಿಕ್ಯಾತ, ಇಲಿ, ಮರಿ ಹೆಗ್ಗಣ, ಮರಿ ಪಕ್ಷಿಗಳನ್ನು ಸಹ ಹಾರ್ನ್ ಬಿಲ್ ಕಬಳಿಸಬಲ್ಲುದು ಎನ್ನುತ್ತಾರೆ ಡಾ. ಸಲೀಂ ಅಲಿ. ಮಂಗಟ್ಟೆ ಹಕ್ಕಿ ಕೂಗಿದಾಗ ಕೇಕೆ ಹೊಡೆದು ನಕ್ಕ ಹಾಗೆ ಭಾಸವಾಗುತ್ತದೆ. ಮರದಿಂದ ಮರಕ್ಕೆ ಹಾರುವಾಗ ರೆಕ್ಕೆ ಬಡಿದು ತೇಲುವ ಅವುಗಳ ಕ್ಷಮತೆ ಹೆಲಿಕಾಪ್ಟರ್ ನೆನಪಿಸುವಂತಿರುತ್ತದೆ.

ಮಲಬಾರ್ ಪೈಡ್ ಹಾರ್ನ್ ಬಿಲ್ ತಿನ್ನುವ ಹಣ್ಣುಗಳು ಅತ್ಯಂತ ಮಾಗಿದ್ದು, ಕಳಿತ ಹಾಗೂ ಇನ್ನೇನು ಕೊಳೆಯುವ ಸ್ಥಿತಿ ತಲುಪಿದ್ದರೆ; ಮತ್ತು ಅದು ದೀರ್ಘ ಕಾಲದ ಉಪವಾಸದ ನಂತರ ಏಕಾಏಕಿ ಗರಿಷ್ಠ ಪ್ರಮಾಣದಲ್ಲಿ ಅಂತಹ ಕಳಿತ ಹಣ್ಣುಗಳನ್ನು ತಿಂದಾಗ ಆಯತಪ್ಪಿ ನೆಲಕ್ಕೊರಗುತ್ತದೆ. ಹಾಗೆ ತಲೆ ಸುತ್ತಿದಾಗ ಕೂಡಲೇ ಸುಧಾರಿಸಿಕೊಳ್ಳಲು ಅದಕ್ಕೆ ನೀರು ದೊರಕದೇ ಹೋದಾಗ ಹಕ್ಕಿಯ ಜಠರದಲ್ಲಿ ಕಳಿತ-ಕೊಳೆತ ಹಣ್ಣುಗಳ 'Fermentation' ದಿಂದಾಗಿ ಅಲ್ಕೋಹಾಲ್ ಉತ್ಪತ್ತಿಯ ಪ್ರಮಾಣ ಹೆಚ್ಚಾಗಿ ಐವಳಿ ಬಂದಂತಾಗಿ ಬೃಹತ್ ದೇಹಿ ಧರಾಶಾಯಿ ಆಗುತ್ತದೆ ಎನ್ನುತ್ತಾರೆ ಪ್ರೊ. ಗಂಗಾಧರ ಕಲ್ಲೂರ.


ಹೀಗೆ ಆಯತಪ್ಪಿ ನೆಲಕ್ಕೊರಗಿದ ಸಂದರ್ಭದಲ್ಲಿ ಕಾಡಿನ ಸೀಳುನಾಯಿಗಳಿಗೆ, ನರಿ, ತೋಳಗಳಿಗೆ, ಹೈನಾ ಹಾಗೂ ಈ ಭಾಗದ ಕಪ್ಪು ಚಿರತೆಗಳಿಗೆ ಮಲಬಾರ್ ಪೈಡ್ ಹಾರ್ನ್ ಬಿಲ್ ಆಹುತಿಯಾಗುವ ಸಂಭವ ಹೆಚ್ಚು. ಬೃಹದಾಕಾರದ ಈ ಪಕ್ಷಿ ತನ್ನೆಲ್ಲ ಶಕ್ತಿ ಒಗ್ಗೂಡಿಸಿಕೊಂಡು ಹಾರಲು ಕನಿಷ್ಠ ವಿಶಾಲ ಜಾಗೆಯವರೆಗೆ ತೆವಳಬೇಕಾಗುತ್ತದೆ. ಕವಳೇಶ್ವರ ಗುಡ್ಡದಲ್ಲಿ ಹೀಗೆ ನೆಲಕ್ಕೊರಗಿ ಹಾರಲು ಪ್ರಯಾಸ ಪಡುತ್ತಿದ್ದ ಹಾರ್ನ್ ಬಿಲ್ ಸುದೈವದಿಂದ ಇವರಿಗೆ ಸಿಕ್ಕಿತ್ತು, ಅತ್ಯಂತ ಜಾಗರೂಕತೆಯಿಂದ ಬಂಧಿಸಿದ ಪ್ರೊ. ಕಲ್ಲೂರ್ ಸುಮಾರು 2 ಲೀಟರ್ ನೀರಿನಲ್ಲಿ ಗ್ಲುಕೋಸ್ ಸೇರಿಸಿ ಬಾಟಲಿಯಿಂದ ಕೊಕ್ಕಿನ ಮೂಲಕ ಕುಡಿಸಿ ಪ್ರಥಮ ಚಿಕಿತ್ಸೆ ನೀಡಿದಾಗ ಪ್ರಜ್ಞಾ ಸ್ಥಿತಿಗೆ ಮರಳಿತು. ಒಂದು ಗಂಟೆಯ ನಂತರ ಹಕ್ಕಿಯ ಜಠರದಲ್ಲಿದ್ದ ಎಲ್ಲ 'fermented' ದ್ರವ ಉಚ್ಛಿಷ್ಟ ರೂಪದಲ್ಲಿ ಹೊರಬಂದು ಹಾರ್ನ್ ಬಿಲ್ ತುಸು ಗೆಲುವಾಯಿತು.

ಖುಷಿಯಿಂದ ಚಾರಣ ಪ್ರಿಯರೆಲ್ಲ ಈ ಮಂಗಟ್ಟೆಯನ್ನು ಕವಳೇಶ್ವರದ ಸಾವಿರ ಮೆಟ್ಟಿಲುಗಳ ಮೇಲೆ ಒಯ್ದು ಅಲ್ಲಿಂದ ರೆಕ್ಕೆ ಅಗಲಿಸಿ ಹಾರಿಬಿಟ್ಟರು. ಗೆಲುವಾಗಿದ್ದ ಹಾರ್ನ್ ಬಿಲ್ ತುಸು ದೂರ ಕೆಳಮಟ್ಟದಲ್ಲಿ ಹಾರಿ ನಂತರ ಆಗಸಕ್ಕೆ ಚಿಮ್ಮಿ ಹಾರಿತು!

ರಣ ಹದ್ದಿನ ಗಾತ್ರದ ಈ ಹಕ್ಕಿಗೆ ಅಗಾಧವಾದ ಕೊಕ್ಕಿನ ಮೇಲೆ ಖಡ್ಗ ಮೃಗಕ್ಕಿರುವಂತೆ ಕೊಂಬು. ಕುತ್ತಿಗೆ ಹಾಗೂ ರೆಕ್ಕೆಗಳ ಬಣ್ಣ ಕಪ್ಪು; ಕೆಲವು ಮಂಗಟ್ಟೆಗಳಿಗೆ ಕುತ್ತಿಗೆ ಹಾಗೂ ಎದೆಯ ಮೇಲೆ ಬಿಳಿ ಪಟ್ಟಿಗಳಿರುತ್ತವೆ. ಗಲ್ಲದ ಬಳಿ ಕೆಂಪು ಪಟ್ಟಿ ಸಹ ಇರಬಹುದು. ಉದ್ದವಾದ ಬಿಳಿ ಬಾಲದ ತುದಿಯಲ್ಲಿ ಕಪ್ಪು ಪಟ್ಟಿಗಳು ಹಕ್ಕಿಯ ಸೌಂದರ್ಯಕ್ಕೆ ಕಿರೀಟವಿಟ್ಟಂತೆ ಭಾಸವಾಗುತ್ತದೆ. ರೆಕ್ಕೆಗಳ ಅಂಚಿನಲ್ಲಿರುವ ಬಿಳಿ ಪಟ್ಟಿಗಳು ಹಕ್ಕಿ ಹಾರಿದಾಗ ಸ್ಪಷ್ಟವಾಗಿ ಕಾಣುತ್ತವೆ. ನಮ್ಮ ದೇಶದ ಹಿಮಾಲಯದ ತಪ್ಪಲಿನಲ್ಲಿ, ಕರ್ನಾಟಕದ ಮುಕುಟವಾಗಿರುವ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇವು ಕಂಡುಬರುತ್ತವೆ. ಪರಿಸರ ಹಾನಿ, ಹಣ್ಣಿನ ಮರಗಳ ಕೊರತೆ ಹಾಗೂ ಶಿಕಾರಿಗಳ ದೆಸೆಯಿಂದ ಈ ದೊಡ್ಡ ಮಂಗಟ್ಟೆ ಹಕ್ಕಿಗಳು ವಿನಾಶದ ಅಂಚಿಗೆ ತಲುಪಿವೆ ಎನ್ನುತ್ತಾರೆ ತಜ್ಞರು.

ಪ್ರೊ. ಕಲ್ಲೂರ್ ಅಭಿಪ್ರಾಯ ಪಡುವಂತೆ "ಮಾರ್ಚ್ ತಿಂಗಳಿನಿಂದ ಜೂನ್‌ವರೆಗೆ ಮಂಗಟ್ಟೆಗಳು ಸಂತಾನಾಭಿವೃದ್ಧಿಯಲ್ಲಿ ತೊಡಗಿಕೊಳ್ಳುತ್ತವೆ. ಕೆಲವೊಮ್ಮೆ ಫೆಬ್ರುವರಿ ತಿಂಗಳಿನಲ್ಲಿಯೂ ಅವುಗಳ ಸಂಸಾರ ಆರಂಭಗೊಳ್ಳಬಹುದು. ಆದರೆ, ಕಾಡು ಈಗ ಮೊದಲಿನಂತೆ ಉಳಿದಿಲ್ಲ. ಮಾನವ ನಿರ್ಮಿತ ಮ್ಯಾನ್ ಗ್ರೋವ್ಮಾದರಿ ಪಶ್ಚಿಮ ಘಟ್ಟದ ಅಳಿದು-ಉಳಿದ ಕಾಡಿನಲ್ಲಿ ಸಾಮಾಜಿಕ ಅರಣ್ಯೀಕರಣದ ಹೆಸರಿನಲ್ಲಿ ಸ್ಥಳೀಯ ಜೈವಿಕ ಸಂರಚನೆ ಹಾಗೂ ಸೂಕ್ಷ್ಮತೆ ಅರಿಯದೇ (ಇದು ನಮ್ಮ ಅರಿವಿಗೆ ಮೀರಿದ ವಿಚಾರವೂ ಹೌದು; ಮಿತಿಯೂ ಹೌದು. ಲಕ್ಷಾಂತರ ಸೂಕ್ಷ್ಮ ಕೊಂಡಿಗಳನ್ನು ತನ್ನೊಳಗೆ ಬೆಸೆದುಕೊಂಡಿರುವ ಸಂಕೀರ್ಣ ವ್ಯವಸ್ಥೆ ಅದು.) ವೃಕ್ಷಾರೋಪಣ ಕಾರ್ಯಕ್ರಮ ಮಾಡಿದೆವು. ಫಲವಾಗಿ ಕಾಡಿನ ಹಣ್ಣಿನ ಗಿಡಗಳು ಹೇಳಹೆಸರಿಲ್ಲದಂತಾದವು. ಹಾಗಾಗಿ ಬದುಕಲು ಅನಿವಾರ್ಯವಾಗಿ ಹಣ್ಣಿನ ಗಿಡಗಳನ್ನು ಅರಸಿಕೊಂಡು ನೂರಾರು ಕಿಲೋ ಮೀಟರ್ ಗಂಡು ಮಂಗಟ್ಟೆ ಹಕ್ಕಿ ಕ್ರಮಿಸಬೇಕಾದ ಅನಿವಾರ್ಯತೆ ಇಂದು ಬಂದೊದಗಿದೆ. ಇದು ಕಾಡಿಗೆ ತಗುಲಿರುವ ಅನಾರೋಗ್ಯದ ಸೂಚಕವಲ್ಲದೇ ಮತ್ತೇನು?"

ಮಲಬಾರ್ ಪೈಡ್ ಹಾರ್ನ್ ಬಿಲ್ ಹಕ್ಕಿಯ ವಿಶೇಷವೆಂದರೆ ಸಂತಾನಾಭಿವೃದ್ಧಿ ಕಾಲಕ್ಕೆ ಹೆಣ್ಣು ಹಕ್ಕಿ ಕಾಡಿನ ಮಧ್ಯದ ದೊಡ್ಡ ಮರವನ್ನು ಹುಡುಕುತ್ತದೆ. ಅತ್ಯಂತ ಎತ್ತರದಲ್ಲಿ ಪೊಟರೆ ಕೊರೆದು ತಾನು ಅದರೊಳಗೆ ಇಳಿಯುತ್ತದೆ. ಘೇಂಡಾಮೃಗದಂತೆ ಕೊಕ್ಕಿನ ಮೇಲೆ ದೊಡ್ಡ ಕೊಂಬಿರುವ ಕಾರಣ ಆ ಹದ್ದಿನ ಗಾತ್ರದ ಹಕ್ಕಿಗೆ ಇಡಿಯಾಗಿ ಆ ಬಿಲದೊಳಗೆ ತೂರಿಕೊಳ್ಳುವುದು ಸಾಧ್ಯವಾಗದ ಮಾತು. ಹಾಗಾಗಿ ಹೆಣ್ಣು ಮಂಗಟ್ಟೆ ಸಮರ್ಪಕವಾದ ಆಕಾರಕ್ಕೆ ಗೂಡನ್ನು ತರಲು ಗಂಡಿನ ಸಹಾಯದಲ್ಲಿ ಪೊಟರೆ ಕೊರೆಯುತ್ತ ಹೋಗುತ್ತದೆ. ಗೂಡು ಸಮರ್ಪಕವಾಗಿದೆ ಎನಿಸಿದಾಗ ಹೆಣ್ಣು ಮಂಗಟ್ಟೆ ಒಳಹೊಕ್ಕು, ಕೇವಲ ಒಂದು ಮೊಟ್ಟೆ ಇಡುತ್ತದೆ. (ಕೆಲವೊಮ್ಮೆ 2 ಮೊಟ್ಟೆಗಳನ್ನು ಸಹ ಇಟ್ಟ ಉದಾಹರಣೆಗಳಿವೆ; ನಾಲ್ಕು ಮೊಟ್ಟೆ ಇಟ್ಟ ದಾಖಲೆ ಸಹ ಇದೆ, ಆದರೆ ಮರಿ ಮಾತ್ರ ಒಂದು ಬದುಕಬಹುದು) ಮೊಟ್ಟೆಯ ಬಣ್ಣ ಬಿಳಿ ಹಾಗೂ ಕಟ್ಟಿಗೆ ಕಂದು ಬಣ್ಣ ಹೋಲುತ್ತದೆ.



ಮೊಟ್ಟೆ ಇಟ್ಟ ತಕ್ಷಣ ಕೇವಲ ಕೊಕ್ಕು ಮಾತ್ರ ಹೊರಬರುವಂತೆ ವ್ಯವಸ್ಥೆ ಮಾಡಿಕೊಂಡು ಬಾಯಿಯ ಜೊಲ್ಲು, ಗಿಡದ ರಾಳ ಹಾಗೂ ಅಂಟು ಬಳಸಿ ಇಡೀ ಬಾಗಿಲನ್ನು ಭದ್ರವಾಗಿ ಮುಚ್ಚಿಕೊಂಡು ಬಿಡುತ್ತದೆ. ಗಂಡು ಮಂಗಟ್ಟೆ ತನ್ನ ಪತ್ನಿಗೆ ಆಹಾರ ಒದಗಿಸುವ ಸೇವಕನ ಕೆಲಸಕ್ಕೆ ಅಣಿಯಾಗುತ್ತದೆ. ಇತ್ತ ಪೊಟರೆಯೊಳಗೆ ಹೆಣ್ಣು ಮಂಗಟ್ಟೆ ಮೊಟ್ಟೆಗೆ ಕಾವು ಕೊಡುತ್ತ ತನಗೆ ಹಾಗೂ ಮೊಟ್ಟೆ ಒಡೆದು ಜೀವ ತಳೆಯಲಿರುವ ಮರಿಗೆ ಜಾಗೆ ಸಾಲದು ಎಂಬ ಕಾರಣಕ್ಕೆ ತನ್ನೆಲ್ಲ ಪುಕ್ಕಗಳನ್ನು ಕಿತ್ತು ಹೊರಗೆಸೆದು ಸಂಪೂರ್ಣ ಬೋಳಾಗಿ ಹಾರಲಾಗದ ಸ್ಥಿತಿಗೆ ತಲುಪುತ್ತದೆ. ಹಾಗೆಯೇ, ಚಿಕ್ಕ ಗರಿಗಳನ್ನು ಬಳಸಿ ತನ್ನ ಮರಿಗೆ ಪೊಟರೆಯ ಒಳಗೆ ಬೆಡ್ ಸಹ ನಿರ್ಮಾಣ ಮಾಡುತ್ತದೆ. ಮೊಟ್ಟೆಯೊಡೆದು ಮರಿ ಹೊರಬಂದು ಹಾರುವ ಸ್ಥಿತಿ ತಲುಪುವ ವೇಳೆಗೆ ತಾಯಿ ಹಕ್ಕಿ ಸಹ ತನ್ನ ರೆಕ್ಕೆಯ ಗರಿಗಳನ್ನು ಮರಳಿ ಪಡೆದುಕೊಂಡಿರುತ್ತದೆ. ಈ ಮಧ್ಯೆ, ಗಂಡು ಹಕ್ಕಿ ತನ್ನ ಕೊಕ್ಕಿನಲ್ಲಿ ನೀರನ್ನು ಹಿಡಿದು ತರಲು ಸಾಧ್ಯವಾಗದ್ದರಿಂದ ನೀರಿನ ಅಂಶ ಹೇರಳವಾಗಿರುವ ಹಣ್ಣುಗಳನ್ನೇ ಹುಡುಕಿ ತನ್ನ ಕೊಕ್ಕಿನಲ್ಲಿ ಸಿಕ್ಕಿಸಿಕೊಂಡು ತಂದು ತಾಯಿ ಹಾಗೂ ಮರಿ ಹಕ್ಕಿಗೆ ಉಣಬಡಿಸುತ್ತದೆ. ಸಮಯ ಸಿಕ್ಕಾಗ ತಾನೂ ತನ್ನ ಉದರಂಭರಣ ಮಾಡಿಕೊಳ್ಳುತ್ತದೆ. ಕೆಲವೊಮ್ಮೆ ತಾನು ಉಪವಾಸ ಉಳಿದು ತನ್ನವರಿಗಾಗಿ ಹಣ್ಣನ್ನು ಸಹ ಹೆಕ್ಕಿತರುತ್ತದೆ ಗಂಡು ಮಲಬಾರ್ ಪೈಡ್ ಹಾರ್ನ್ ಬಿಲ್!

ಮರಿ ಹಾರುವ ಹಂತ ತಲುಪಿದಾಗ ತಾಯಿ ಹಕ್ಕಿ ಗೂಡಿನ ಬಾಗಿಲನ್ನು ತನ್ನ ಕೊಕ್ಕಿನಿಂದ ಒಡೆದು ತೆಗೆಯುತ್ತದೆ. ಈ ಹಂತದಲ್ಲಿ ತಾಯಿ ಹಕ್ಕಿ ಹಾಗೂ ಮರಿಯ ರೆಕ್ಕೆಗಳು ಬಲಿತದ್ದರಿಂದ ಪೊಟರೆ ಅತ್ಯಂತ ಚಿಕ್ಕದಾಗುತ್ತ ಸಾಗಿರುತ್ತದೆ. ತಂದೆ ಹಕ್ಕಿಯ ಸುಪರ್ದಿಯಲ್ಲಿ ಮರಿ ತಾನು ಕಾಡಿನ ಬದುಕಿಗೆ ಅಣಿಗೊಳ್ಳುತ್ತದೆ. ತನಗೊಂದು ಸಂಗಾತಿ ಜತೆಯಾಗುವ ವರೆಗೆ ತಂದೆ-ತಾಯಿ ಹಕ್ಕಿಗಳೊಂದಿಗೆ ಮರಿ ಅನ್ಯೋನ್ಯವಾಗಿ ಸ್ವಚ್ಛಂದವಾಗಿ ಹಾರಾಡುತ್ತ ಬಾಳುತ್ತದೆ. ಹತ್ತಾರು ಬಾರಿ ಇದೇ ಗೂಡನ್ನು ಸಂತಾನಾಭಿವೃದ್ಧಿಗೆ ತಂದೆ-ತಾಯಿ ಹಕ್ಕಿಗಳು ಬಳಸಬಹುದು ಅಥವಾ ಆ ಪೊಟರೆಯಲ್ಲಿ ಜೀವ ತಳೆದಿದ್ದ ಮರಿ ಹಕ್ಕಿ ತನ್ನ ಸಂಗಾತಿಯೊಂದಿಗೆ ಇದೇ ಪೊಟರೆಗೆ ಆಗಮಿಸಿ ಹೊಸ ಸಂಸಾರ ಹೂಡಬಹುದು!

ಕಾಡನ್ನು ಬಿಟ್ಟು ಕಾಂಕ್ರೀಟ್ ನಗರಕ್ಕೆ ಹಣ್ಣಿನ ಗಿಡಗಳನ್ನು ಹುಡುಕಿ ದೊಡ್ಡ ಕೊಕ್ಕಿನ ಹಕ್ಕಿ ಹಾರಿಬಂದರೆ? ದೇವರ ದಯೆಯಿಂದ ಕೆಲ ಹಣ್ಣುಗಳನ್ನು ಅದು ಸಂಗ್ರಹಿಸಿದರೂ ತನ್ನ ಪತ್ನಿಯ ಗೂಡಿಗೆ ಮರಳುವವರೆಗೆ ಕೊಕ್ಕಿನಲ್ಲಿ ಕಾಯ್ದಿಟ್ಟುಕೊಳ್ಳಲು ಪಡುವ ಬವಣೆ ಆ ದೇವರಿಗೇ ಪ್ರೀತಿ. ಮಾರ್ಗ ಮಧ್ಯೆ ಗಂಡು ಮಲಬಾರ್ ಪೈಡ್ ಹಾರ್ನ್ ಬಿಲ್ ಹಸಿವೆಯಾಗಿದೆ ಎಂದು ಹಣ್ಣುಗಳನ್ನು ನುಂಗುವಂತಿಲ್ಲ! ಹೈ ಟೆನ್ಶನ್ ವಿದ್ಯುತ್ ವಾಯರ್‌ಗಳ ಬಗ್ಗೆ ಅರಿವಿರದ ಈ ಹಕ್ಕಿ ಅಪ್ಪಿ ತಪ್ಪಿ ಹಾರಿ ಬಂದು ಕುಳಿತಲ್ಲಿ ಅಥವಾ ಆಯ ತಪ್ಪಿ ರೆಕ್ಕೆಗಳು ಬಡಿದಲ್ಲಿ ಅದು ಸತ್ತೇ ಹೋಗುವ ಅಪಾಯವಿದೆ. ನಗರ ಪರಿಸರಕ್ಕೆ ಹೊಂದಿಕೊಂಡಿರುವ ಪಕ್ಷಿಗಳು ಅದನ್ನು ಅಟ್ಟಿಸಿಕೊಂಡು ಹೋಗುವ ಭೀತಿ ಯಾವತ್ತೂ ಆವರಿಸಿರುತ್ತದೆ.

ನಗರ ಭೇಟಿಯ ಸಂದರ್ಭದಲ್ಲಿ ಗಂಡು ಹಕ್ಕಿ ಆಕಸ್ಮಿಕವಾಗಿ ಸಾವನ್ನಪ್ಪುವ ಅವಘಡ ಸಂಭವಿಸಿದರೆ....ರೆಕ್ಕೆ ಕಳೆದುಕೊಂಡು ಪೊಟರೆಯೊಳಗೆ ಬಂಧಿಯಾಗಿರುವ ಹೆಣ್ಣು ಹಕ್ಕಿ, ಜೀವ ತಳೆದಿರುವ ಅಥವಾ ತಳೆಯುತ್ತಿರುವ ಹಕ್ಕಿ ಮರಿ ಹತ್ತಾರು ದಿನಗಳು ಹಸಿವಿನಿಂದ ಬಳಲಿ ಪೊಟರೆಯೊಳಗೆ ಸಾವನ್ನಪ್ಪುತ್ತವೆ. ಆ ಪೊಟರೆ ಸ್ಮಶಾನವಾಗಿ ಪರಿವರ್ತಿತಗೊಳ್ಳುತ್ತದೆ. ಏಕ ಪತಿ ಹಾಗೂ ಪತ್ನಿ ವ್ರತಸ್ಥ ಮಂಗಟ್ಟೆಗಳು ಹಾಗೇನಾದರೂ ಅಕಾಲಿಕವಾಗಿ ಸಾವನ್ನಪ್ಪಿದರೆ ಬದುಕುಳಿದ ಹಕ್ಕಿ ಏಕಾಂಗಿಯಾಗಿ ಜೀವನ ಸವೆಸುತ್ತದೆ. ಬೇರೆ ಯಾವುದೇ ಮಂಗಟ್ಟೆ ದಂಪತಿ ಹಾಗೆ ಸ್ಮಶಾನವಾಗಿ ಪರಿವರ್ತಿತಗೊಂಡ ಪೊಟರೆಯನ್ನು ಸಂತಾನಾಭಿವೃದ್ಧಿಗೆ ಎಂದಿಗೂ ಬಳಸುವುದಿಲ್ಲ. ಅದು ಶಾಶ್ವತವಾಗಿ ತ್ಯಜಿಸಲ್ಪಟ್ಟ ಮನೆಯಾಗುತ್ತದೆ.

ಇತ್ತ ಗೂಡಿನಲ್ಲಿ ಹಾರಲಾಗದ ಸ್ಥಿತಿಯಲ್ಲಿ ಬಂಧಿಯಾದ ಹೆಣ್ಣು ಮಂಗಟ್ಟೆಗೆ ಬೇಟೆಗಾರರ ಕಾಟ ಸಹ ಇಲ್ಲವೆಂದಲ್ಲ. ಕಾಡು ಬೋಳಾಗಿ ಕೆಲವೇ ಎತ್ತರದ ಮರಗಳು ಉಳಿದಿರುವ ಹೆಸರಿಗೆ ಕಾಡುಗಳಲ್ಲಿ ಬೇಟೆಗಾರರ ಹದ್ದಿನ ಕಣ್ಣುಗಳಿಗೆ ಎತ್ತರದ ಮರದ ಮೇಲೆ ಪೊಟರೆಯೊಳಗಿಂದ ತನ್ನ ದೊಡ್ಡ ಕೊಂಬನ್ನು ಹೊರ ಚಾಚಿ ಕುಳಿತ ತಾಯಿ ಹಕ್ಕಿಯನ್ನು ಗುರುತಿಸುವುದು ಕಷ್ಟದ ಕೆಲಸವೇನಲ್ಲ. ಸಹಜವಾಗಿ ಬೇಟೆಗಾರರ ಬಲಿಗೆ ಆಹುತಿಯಾಗುವ ಹೆಣ್ಣು ಹಕ್ಕಿ, ಅದರ ಮರಿ ಅಥವಾ ಮೊಟ್ಟೆ, ಗಂಡು ಹಕ್ಕಿಯನ್ನು ಜೀವನಪರ್ಯಂತ ಏಕಾಂಗಿ ಆಗಿಸಿಬಿಡುತ್ತದೆ.

• ಹರ್ಷವರ್ಧನ್ ವಿ.ಶೀಲವಂತ

ಜಾತಿವಿನಾಶದ ಹಾದಿಯಲ್ಲಿ...



'ಜಾತಿ ಬೇಡ ಎನ್ನುವುದು ಒಂದು ಮರೋಗಾಮಿ ನಿಲುವು. ಜಾತಿ ಇಲ್ಲ ಎನ್ನುವುದು ಆತ್ಮವಂಚನೆ. ನಮ್ಮದು ಆತ್ಮವಂಚಕ ಸಮಾಜ. ಜಾತಿ ನಾಶವಾಗುವುದು ಜಾತಿ ಕುರುಡಿನಿಂದಲ್ಲ. ಅದಕ್ಕೆ ಮುಖಾಮುಖಿಯಾಗುವ ಮೂಲಕ ಜಾತಿಯನ್ನು ಎದುರಿಸಬೇಕು, ತಿಳಿದುಕೊಳ್ಳಬೇಕು. ಇದನ್ನು ಮಾಡುತ್ತಲೇ ಅದರ ನಾಶಕ್ಕೆ ಪ್ರಯತ್ನ ಮಾಡಬೇಕು.' ಇವು ದಿನೇಶ್ ಅಮಿನ್‌ಮಟ್ಟು ಅವರ ಮಾತುಗಳು. ಜಾತಿಯನ್ನು ಒಪ್ಪುವವರು ಜಾತಿ ಚಿಪ್ಪಿನೊಳಗೆ ಅವಿತುಕೊಂಡರೆ; ಈ ದೇಶದಲ್ಲಿ ಜಾತಿಯೇ ಇಲ್ಲ ಎನ್ನುವವರ ದನಿಗಳಲ್ಲಿ ಉಡಾಫೆ ಮಾತ್ರ ತುಂಬಿಕೊಂಡಿರುತ್ತದೆ. ಭಾರತದಲ್ಲಿ ಜನಗಣತಿ ಶುರುವಾಗುವ ಹೊತ್ತಿಗೆ ಜಾತಿ ಗಣತಿಯ ಕುರಿತು ವ್ಯಾಪಕ ಚರ್ಚೆಗಳು ಅಲ್ಲಲ್ಲಿ ನಡೆದವು. ಈ ದೇಶದ ಎಲ್ಲ ಬಗೆಯ ಪ್ರಾಕೃತಿಕ ಸಂಪನ್ಮೂಲಗಳು ಎಲ್ಲರಿಗೂ ಸರಿಸಮವಾಗಿ ಹಂಚಬೇಕಾದರೆ ಅದಕ್ಕೆ ಜಾತಿ ಎಣಿಕೆಯ ಅನಿವಾರ್ಯತೆಯ ಬಗ್ಗೆ ಅನೇಕ ಚಿಂತಕರು ಪ್ರಭುತ್ವಕ್ಕೆ ಮನವರಿಕೆ ಮಾಡಿಕೊಡಲು ಯತ್ನಿಸಿದರು. ಅಂತಹದ್ದೊಂದು ಪ್ರಯತ್ನದ ಭಾಗವಾಗಿ ದಮನಿತ ವರ್ಗಗಳ ಸಮಸ್ಯೆ ಮತ್ತು ಸವಾಲುಗಳನ್ನು 'ಹಿಂದುಳಿದವರು' ಕೃತಿಯಲ್ಲಿ ವಿವರವಾಗಿ ಮಂಡಿಸಲಾಗಿದೆ. 33 ಲೇಖನಗಳನ್ನು ಒಳಗೊಂಡ ಈ ಕೃತಿಯಲ್ಲಿ ಪ್ರೊ.ಶಿವರಾಮಯ್ಯ, ದಿನೇಶ್ ಅಮಿನ್‌ಮಟ್ಟು, ರಂಜಾನ್ ದರ್ಗಾ, ಸನತ್ ಕುಮಾರ್ ಬೆಳಗಲಿ, ವೈ.ಗ.ಜಗದೀಶ್, ಲಕ್ಷ್ಮಣ್, ಡಾ.ಸಿ.ಎಸ್.ದ್ವಾರಕಾನಾಥ್ ಮೊದಲಾದವರು ಶೋಷಿತ ಸಮುದಾಯಗಳ ಎದುರಿಗಿರುವ ಜಾತಿಸಮಸ್ಯೆ, ಜಾತಿಗಣತಿ, ಒಳಮೀಸಲಾತಿ ಅನಿವಾರ್ಯ, ಅಹಿಂದ ವರ್ಗಗಳ ಒಂದಾಗುವಿಕೆ, ಮೀಸಲಾತಿ-ಒಳಮೀಸಲಾತಿ ಕುರಿತ ವಿಶ್ಲೇಷಣಾ ಬರಹಗಳನ್ನು ಮಂಡಿಸಿದ್ದಾರೆ. ಮೀಸಲಾತಿ ಪಡೆಯುವ ಸಂದರ್ಭಗಳಲ್ಲಿ ಎಲ್ಲರೂ ಶೋಷಿತರಾಗುವ, ಹಿಂದುಳಿದ ವರ್ಗಕ್ಕೆ ಸೇರ್ಪಡೆಗೊಳ್ಳಲು ಉತ್ಸಾಹ ತೋರುವ ಜಾತಿಗಳು ಜಾತಿಯನ್ನು ಮೀರುವ, ಜಾತಿ ನಾಶಮಾಡುವ, ರಾಜಕೀಯ ಮತ್ತು ಸಾಮಾಜಿಕ ಸಮಾನತೆಗಾಗಿ ಹಂಬಲಿಸುವ ಗಳಿಗೆಗಳಲ್ಲಿ ಮಾತ್ರ ಪ್ರಬಲ ಕೋಮಿನ ರೂಪ ತೊಡುತ್ತವೆ. ಜಾತಿನಾಶದ ಕುರಿತು ಹೇಳುತ್ತಲೇ ಈ ಕೃತಿ ಮೀಸಲಾತಿ ಹೆಸರಿನಲ್ಲಿ ಪ್ರಭುತ್ವ ಎಸಗಿದ ವಂಚನೆಯನ್ನು ಹಲವು ಬಗೆಗಳಲ್ಲಿ ತೆರೆದಿಡುತ್ತದೆ.


ಹಿಂದುಳಿದವರು

ಸಂಪಾದಕರು: ಬಿ.ಎನ್.ರಮೇಶ್, ಡಾ.ವರದಾ ಶ್ರೀನಿವಾಸ್

ಪ್ರಕಾಶಕರು: ಅನು ಪ್ರಕಾಶನ


ಪುಟಗಳು: 188, ಬೆಲೆ: ರೂ.80, ಪ್ರಕಟಣೆ: 2010

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ತಾರುಣ್ಯ ಕಳೆದುಕೊಂಡವರ ಲೋಕದಲ್ಲಿ...



'ಅಂಥ ಅವಮಾನದ ಕ್ಷಣವನ್ನು ಭಾಷೆಯಲ್ಲಿ ಹಿಡಿದಿಡಬಲ್ಲ ಅಕ್ಷರಗಳಿನ್ನೂ ಆವಿಷ್ಕಾರಗೊಳ್ಳಲಿಲ್ಲ. ತನ್ನ ಸರೀಕರಂತೆ ಗರಿಗರಿ ಬಟ್ಟೆತೊಡಲು ಸಾಧ್ಯವಾಗದಿರುವುದು; ಕಾಲದ ಫ್ಯಾಶನ್ನಿಗೆ ತಕ್ಕಂತೆ ಕಾಲಿಗೆ ಚಪ್ಪಲಿ, ಅಂಗಿಯ ಮುಂದಿನ ಕಿಸೆಯಲ್ಲಿ ಸಿಕ್ಕಿಸಿಕೊಳ್ಳಲು ಹೊಸ ಪೆನ್ನು, ಕಾಸು ಬಿಸಾಕಿ ಕಂಡದ್ದನ್ನು ಕೊಂಡು ಖುಷಿಯಾಗಿರಲು ಆಗದಿರುವುದು. ಕ್ಷಣಕ್ಷಣಕ್ಕೆ ಒದಗಿಬರುವ ಅವಮಾನಗಳಿಗೆ ಹೆದ್ದಾರಿ ಸೃಷ್ಟಿಸುವ ಬಡತನವೆನ್ನುವ ಅನಾದಿಕಾಲದ ಪ್ರೇತ. ಕಾಲಾತೀತವಾಗಿ ಎಲ್ಲ ದೇಶಗಳಲ್ಲಿ, ಎಲ್ಲ ಜನಾಂಗಗಳನ್ನೂ ಕಾಡುವ ಈ ಕಾಯಿಲೆಯಿಂದ ಅರಳದೇ ಕಮರುವ ಎಷ್ಟೋ ತರುಣರನ್ನು ಉಳಿಸುವ ನಿರ್ಣಯದಂತೆ ಆ ಘಳಿಗೆ ಬರುತ್ತದೆ. ಒಂದೋ ಗೋಡೆಗೆ ಗುದ್ದಿ ಕಿಂಡಿ ಒಡಮೂಡುವಂತೆ ಮಾಡುವುದು; ಅಥವಾ ದಾರಿಯೇ ಇಲ್ಲವೆಂದು ಅಲ್ಲಿಯೇ ಅಳುತ್ತ ಕೂರುವುದು. ಇವು ಲೇಖಕ ಕೇಶವ ಮಳಗಿಯವರು ಉತ್ಕಟ ಕಾವ್ಯಾತ್ಮಕ ಭಾಷೆಯಲ್ಲಿ ಹೇಳಲು ಹೊರಟು ಅದು ಸಾಧ್ಯವಾಗದೆ ಗದ್ಯವಾಗಿಸಿರುವ ಮಾತುಗಳಂತೆ ಕೇಳಿಸುತ್ತವೆ. 'ಎಸ್ಸೆಮ್ಮೆಸ್, ಇಮೇಲ್‌ಗಳ ದಾಳಿಗೆ ಕೊಚ್ಚಿಹೋದ ಪ್ರೇಮಪತ್ರಗಳು, ಅಂಚೆಯವನ ಜಾಗಕ್ಕೆ ಬಂದಿಳಿದ ಕೊರಿಯರ್ ಹುಡುಗರು, ಕಿತ್ತುಹೋಗಿರೊ ಖಾಲಿ ಕೋಣೆಯೊಳಗಿನ ಗೆಳೆಯರ ಬದುಕು, ಆ ಕೋಣೆಯ ಗೂಟಕ್ಕೆ ನೇತುಹಾಕಿದ ಇಸ್ತ್ರಿ ಮಾಡಿದ ಅತ್ಯುತ್ತಮ ಪ್ಯಾಂಟು-ಶರಟು, ಜುಬ್ಬಾ ಯಾರದೇ ಆಗಿರಲಿ ಅಂದು ಬೆಳಗ್ಗೆ ಯಾರಿಗೆ ತೀರ ಅಗತ್ಯವಿದೆಯೋ ಅವರಿಗೆ ಮೀಸಲಾಗಿರುತ್ತದೆ. ಯಾರದೇ ಕಿಸೆಯಲ್ಲಿನ ಹಣ ಅವರ ಖಾಸಗಿ ಆಸ್ತಿಯಾಗಿರದೇ ಯಾರು ಬೇಕಾದರೂ ಕೈಹಾಕಿ ತೆಗೆದುಕೊಳ್ಳುವ ಅಘೋಷಿತ ಅಧಿಕಾರ ಪಡೆದಿರುತ್ತದೆ. ಕಾರ್ಲ್ ಮಾರ್ಕ್ಸ್‌ನ ಸಮತಾ ಸಮಾಜದ ನಿಯಮಗಳು ಚಾಚೂ ತಪ್ಪದೆ ಪಾಲನೆಯಾಗುವುದು ಇಂಥ ಖೋಲಿಗಳಲ್ಲಿಯೇ.' ಆಗಷ್ಟೆ ಬಾಲ್ಯ ಕಳೆದುಕೊಂಡು ಹರಯಕ್ಕೆ ಕಾಲಿಟ್ಟ ಹುಡುಗರ ಗೊಂದಲ, ಅವಮಾನ ಕೀಳರಿಮೆಯಲ್ಲಿ ಬೆಂದು ತಾರುಣ್ಯಕ್ಕೆ ವಿದಾಯ ಹೇಳುತ್ತಿರುವ ನಲವತ್ತರ ಆಸುಪಾಸಿನವರ ಡೈರಿ, ಆಟೋಗ್ರಾಫ್ ಪುಸ್ತಕಗಳ ಪುಟಪುಟವೂ ಕೇಶವ ಮಳಗಿಯವರ 'ನೇರಳೆ ಮರ'ದಲ್ಲಿ ನವಿರಾದ ಲೋಕವೊಂದನ್ನು ಓದುಗರಿಗೆ ಪರಿಚಯಿಸುತ್ತವೆ. ಕಡಲ ತೆರೆಗೆ ದಂಡೆ, ಮಾಗಿ ಮೂವತ್ತೈದು, ವೆನ್ನೆಲ ದೊರಸಾನಿಗಳು; ಮೂಲಕ ಕನ್ನಡಕ್ಕೆ ಅತ್ಯುತ್ತಮ ಕಥೆಗಳನ್ನು ಕೊಟ್ಟ ಮಳಗಿಯವರು 'ನೇರಳೆ ಮರ'ದ ಮೂಲಕ ರೂಪಕ ಲೋಕದ ಕಥನವನ್ನು ಸೊಗಸಾದ ನಿರೂಪಣೆಯಲ್ಲಿ ಕನ್ನಡಕ್ಕೆ ತೀರಾ ಹೊಸದೆನ್ನಿಸುವ ಪ್ರಬಂಧ ಶೈಲಿಯ ಬರಹಗಳನ್ನು ನೀಡಿದ್ದಾರೆ. ಇವು ಅಲ್ಲಲ್ಲಿ ಪದ್ಯದ ಸಾಲುಗಳಂತೆಯೂ, ವಿನೀತ ಸ್ವರದ ಮುಗ್ಧ ಹುಡುಗನ ಭಾವುಕ ಕ್ಷಣಗಳ ಏಕಾಂತ ಗೀತೆಯಂತೆಯೂ ಕೇಳಿಸುತ್ತವೆ. ಜಗದ ಪುಸ್ತಕಗಳೆಲ್ಲ ನನಗಿರಲಿ ಗೆಳೆಯ!, ಮಳೆಗಾಲದ ಮೊದಲ ಹಕ್ಕಿಯೊಂದಿಗೆ ಸರಸ-ಸಲ್ಲಾಪ, ನಿನಗೊಂದು ಪ್ರೇಮಪತ್ರ ಬರೆಯಲೇ ಹರಿಣಿ? ಹೋಗಿ ಬಾ ಮಗುವೇ, ನಿನ್ನ ದಾರಿಯನ್ನು ರೂಪಿಸಿಕೊಳ್ಳಲು, ಬರಹ ಎದೆಯ ಮೇಲಿನ ಹೂವಾಗುವುದೇ, ಹೀಗೆ?... ಮೊದಲಾದ ಲೇಖನಗಳು ಕಾವ್ಯದ ಮೇಲಿನ ಕಡುವ್ಯಾಮೋಹದಿಂದಾಗಿ ಇಟ್ಟ ಶೀರ್ಷಿಕೆಗಳಂತೆ ಮೇಲ್ನೋಟಕ್ಕೆ ಕಂಡರೂ ಅವು ಮಳಗಿಯವರ ಬದುಕು ಮತ್ತು ಅಕ್ಷರ ಪ್ರೀತಿಯನ್ನು ಕೋಮಲ ಅಭಿವ್ಯಕ್ತಿಯಲ್ಲಿ ನಿರೂಪಿಸುತ್ತವೆ.

ನೇರಳೆ ಮರ

ಕೇಶವ ಮಳಗಿ

ಪ್ರಕಾಶಕರು: ಕಥನ ಪ್ರಕಾಶನ

ಪುಟಗಳು: 106, ಬೆಲೆ: ರೂ.60, ಪ್ರಕಟಣೆ: 2008

2ನೇ ಪುಟದಿಂದ...

POSCO ಮಾರಿ!



ಆದರೆ ಇದ್ಯಾವುದರಿಂದಲೂ ಹಿಂಜರಿಯದ ಅಲ್ಲಿನ ಜನ ಕಂಪನಿಯ ಅಥವಾ ಸರ್ಕಾರದ ಯಾವುದೇ ಅಧಿಕಾರಿಗಳು ಹಳ್ಳಿಯಲ್ಲಿ ಕಾಲಿಡದಂತೆ ಅಧಿಕಾರಿಗಳ ಮೇಲೆ ಕರ್ಫ್ಯೂವನ್ನು ವಿಧಿಸಿದ್ದಾರೆ! ಹೀಗಾಗಿ ಇಷ್ಟೆಲ್ಲಾ ಪ್ರಭುತ್ವ ದಮನ ನಡೆದರೂ ಸರ್ಕಾರ, ಅಥವಾ ಕಂಪನಿ ಒಂದಿಂಚೂ ಭೂಮಿಯನ್ನು ರೈತರಿಂದ ವಶಪಡಿಸಿಕೊಳ್ಳಲು ಆಗಲಿಲ್ಲ. ಇದರ ಜೊತೆಗೆ ಈ ಜನಹೋರಾಟದ ಕಾರಣದಿಂದಾಗಿಯೇ ಈವರೆಗೆ ಪರಿಸರ ಅನುಮತಿಯನ್ನು ಸರ್ಕಾರ ಕೊಡಲು ಆಗಿರಲಿಲ್ಲ, ಆದರೆ ಇದೇ ಫೆಬ್ರವರಿ 4ರಂದು ಕೇಂದ್ರ ಸರ್ಕಾರ ಈ ಯೋಜನೆಗೆ ಅಧಿಕೃತ ಪರಿಸರ ಅನುಮತಿಯನ್ನು ನೀಡಿದೆ. ಇದನ್ನೇ ಜನರನ್ನು ಎತ್ತಂಗಡಿ ಮಾಡಲು ಪರವಾನಗಿ ಎಂದು ಭಾವಿಸಿಕೊಂಡಿರುವ ಸರ್ಕಾರ ಜನರನ್ನು ಬಲವಂತವಾಗಿ ಒಕ್ಕಲೆಬ್ಬಿಸಲು ಕಳೆದ ತಿಂಗಳಿಂದ ವಿಶೇಷ ಪ್ರಯತ್ನ ನಡೆಸಿದೆ. ಆದರೆ ಅದರ ವಿರುದ್ಧ ಜನಸಂಗ್ರಾಮವೂ ತೀವ್ರಗೊಂಡಿದೆ. ರೈತರು, ಹೆಂಗಸರು, ಮಕ್ಕಳು, ವೃದ್ಧರು ಎಲ್ಲರೂ ಅಭೂತಪೂರ್ವ ಒಗ್ಗಟ್ಟಿನಿಂದ ಎಡೆಬಿಡದೆ ಹೋರಾಟ ನಡೆಸುತ್ತಿದ್ದಾರೆ. ಹೀಗಾಗಿ ಅನಿವಾರ್ಯವಾಗಿ ಕಳೆದ ವಾರದಿಂದ ಸರ್ಕಾರ ಜನರ ಮೇಲೆ ನಡೆಸುತ್ತಿರುವ ಈ ಯುದ್ಧವನ್ನು ನಿಲ್ಲಿಸಲೇ ಬೇಕಾಗಿಬಂದಿದೆ. ಇದು ಒರಿಸ್ಸಾ ಜನತೆಗೆ ಸಿಕ್ಕಿರುವ ಪಾಕ್ಷಿಕ ಜಯ ಮಾತ್ರವಲ್ಲ, ಇಂದು ದೇಶಾದ್ಯಂತ ಸರ್ಕಾರಗಳು ನಡೆಸುತ್ತಿರುವ ಭೂ ಆಕ್ರಮಣಗಳ ವಿರುದ್ಧ ಜನತೆ ನಡೆಸುತ್ತಿರುವ ಹೋರಾಟಗಳಿಗೆ ಸಂದಿರುವ ನೈತಿಕ ವಿಜಯವೂ ಆಗಿದೆ. ಈ ಹೋರಾಟ ಅಲ್ಲಿ ಇನ್ನೂ ಮುಂದುವರೆಯಲಿದೆ. ಈಗಿರುವ ಪರಿಸ್ಥಿತಿಯನ್ನು ನೋಡಿದರೆ ಅಲ್ಲಿನ ಜನರ ಹೋರಾಟ ಎಂತ ಜೀವನ್ಮರಣ ಪರಿಸ್ಥಿತಿಯನ್ನು ತಲುಪಿದೆಯೆಂದರೆ ಪೋಸ್ಕೊ ಕಂಪನಿ ಅಲ್ಲಿ ಕಾರ್ಖಾನೆ ಸ್ಥಾಪಿಸುವುದು ಕಷ್ಟಸಾಧ್ಯ.

ಆದ್ದರಿಂದಲೇ ಈ ಪೋಸ್ಕೋ ಕಂಪನಿ 2009ರಿಂದ ತನ್ನ ಎರಡನೇ ಸ್ಟೀಲ್ ಪ್ಲಾಂಟ್ ಒಂದನ್ನು ಕರ್ನಾಟಕದಲ್ಲಿ ತೆರೆಯಲು ಯೋಚಿಸುತ್ತಿತ್ತು, ಆ ಕುರಿತು ಸಾಕಷ್ಟು ಬಾರಿ ಕರ್ನಾಟಕಕ್ಕೆ ಭೇಟಿಯನ್ನೂ ಕೊಟ್ಟಿತ್ತು, ಆದರೆ ಈ ಕಂಪನಿಗೆ ಸ್ಟೀಲ್ ಪ್ಲಾಂಟಿನಷ್ಟೇ ಮುಖ್ಯವಾದದ್ದು ಅದಿರು ಗಣಿಗಾರಿಕೆ ಲೈಸೆನ್ಸ್. ಏಕೆಂದರೆ 1999-2004ರ ನಡುವೆ ಕಬ್ಬಿಣದ ಅದಿರಿನ ಬೆಲೆ ಗಗನಕ್ಕೆ ಮುಟ್ಟಿ ಅದರಿಂದಾಗಿ ಇಡೀ ಸ್ಟೀಲ್ ಉದ್ಯಮವೇ ಹೊಡೆತ ತಿಂದಿತ್ತು, ಅಲ್ಲದೆ ಇಂದು ಪ್ರಪಂಚದ ಎಲ್ಲಾ ಸ್ಟೀಲ್ ಉದ್ಯಮಕ್ಕೆ ಅದಿರು ಸರಬರಾಜು ಮಾಡುವ ಮೂರು ದೈತ್ಯ ಕಂಪನಿಗಳು ತಮ್ಮೊಡನೆಯೇ ಒಪ್ಪಂದ ಮಾಡಿಕೊಂಡು ಪ್ರತಿ ಮೂರು ತಿಂಗಳಿಗೊಮ್ಮೆ ಅದಿರಿನ ಬೆಲೆಯನ್ನು ಏರಿಸುತ್ತಿವೆ. ಹೀಗಾಗಿ ಸ್ಟೀಲ್ ಉದ್ಯಮಗಳೆಲ್ಲಾ ತಮ್ಮದೇ ಆದ ಪ್ರತ್ಯೇಕ ಅದಿರಿನ ಗಣಿಯಿಲ್ಲದೆ ಉದ್ಯಮ ನಡೆಸಲು ಕಷ್ಟವೆಂದು ಅಭಿಪ್ರಾಯ ಪಡುತ್ತಿವೆ. ಅಲ್ಲದೆ ಸ್ಟೀಲ್ ಉತ್ಪಾದನೆಗಿಂತ ಅದಿರು ರಫ್ತು ಹೆಚ್ಚಿನ ಲಾಭಕಾರಿಯಾಗಿದೆ. ಹೀಗಾಗಿ 2010ರ ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನಕ್ಕೆ ಬಂದಿದ್ದ ಪೋಸ್ಕೋ ಆಗಲೂ ಕರ್ನಾಟಕದಲ್ಲಿ ತನ್ನ ಕಾರ್ಖಾನೆ ತೆರೆಯಬೇಕೆಂದರೆ ತನಗೆ ಗಣಿಗಾರಿಕೆ ಅನುಮತಿ ನೀಡಬೇಕೆಂದು ಶರತ್ತು ವಿಧಿಸಿತ್ತು, ಆಗ ಸರ್ಕಾರ ಪೂರಕವಾಗಿಯೇ ಪ್ರತಿಕ್ರಿಯಿಸಿತ್ತು.

ಈಗ ಒರಿಸ್ಸಾದಲ್ಲಿ ಜನರ ಹೋರಾಟ ಭುಗಿಲೆದ್ದ ನಂತರ ಒರಿಸ್ಸಾ ಯೋಜನೆಗೆ ಪರಿಸರ ಅನುಮತಿ ಸಿಕ್ಕ ಮರುದಿನವೇ ಪೋಸ್ಕೋ ಕಂಪನಿ ಕರ್ನಾಟಕ ಸರ್ಕಾರದೊಂದಿಗೆ ಇಲ್ಲಿಯೂ ಸ್ಟೀಲ್ ಪ್ಲಾಂಟ್ ಒಂದನ್ನು ಸ್ಥಾಪಿಸುವ ಕರಾರಿಗೆ ಸಹಿ ಹಾಕಿದೆ. ಇದಕ್ಕೆ ಪೂರಕವಾಗಿ ಪೋಸ್ಕೋ ಕಂಪನಿ ಖಚಿತ ಗಣಿಗಾರಿಕಾ ಅನುಮತಿಯ ಭರವಸೆ ಅಥವಾ ಪರ್ಯಾಯ ವ್ಯವಸ್ಥೆಯ ಖಾತರಿ (ರೆಡ್ಡಿ ಬ್ರದರ್ಸ್‌ಗಳ ಗಣಿಗಳ ಸಹಯೋಗ) ಯನ್ನೂ ಪಡೆದುಕೊಂಡಿದೆಯೆಂದು ಅನುಮಾನಿಸಲಾಗುತ್ತಿದೆ.


ಸದ್ಯದಲ್ಲೇ ಕರ್ನಾಟಕದ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಬಳಿ ಈ ಪೋಸ್ಕೋ ಕಂಪನಿಯ 6 ಮಿಲಿಯನ್ ಟನ್ ಸಾಮರ್ಥ್ಯದ 32,366 ಕೋಟಿ ರೂ. ಹೂಡಿಕೆಯ ಸ್ಟೀಲ್ ಪ್ಲಾಂಟ್ 3,382 ಎಕರೆ ವಿಸ್ತೀರ್ಣದಲ್ಲಿ ತಲೆ ಎತ್ತಲಿದೆ. ಇದಕ್ಕೆ ಬೇಕಾಗುವ ಜಮೀನು ಮುಂಡರಗಿ ತಾಲ್ಲೂಕಿನ ಹಳ್ಳಿಗುಡಿ, ಹಳ್ಳಿಕೇರಿ, ಲಕ್ಕುಂಡಿ ಇನ್ನಿತ್ಯಾದಿ ಹಳ್ಳಿಗಳ ಜನರಿಂದ ವಶಪಡಿಸಿಕೊಳ್ಳಲಾಗುತ್ತದೆ. ಜನರಿಂದ ಜಮೀನನ್ನು ಕಿತ್ತುಕೊಳ್ಳಲು ಬೇಕಾದ ಹಣದ ಪ್ರಥಮ ಕಂತಾದ 60 ಕೋಟಿ ರೂ. ಅನ್ನು ಪೋಸ್ಕೋ ಕಂಪನಿ ಜನರಿಂದ ಭೂಮಿ ಕಿತ್ತುಕೊಳ್ಳುವುದಕ್ಕಾಗಿಯೇ ರೂಪಿತವಾಗಿರುವ ಸರ್ಕಾರೀ ಸಂಸ್ಥೆಯಾದ KIADB ಯಲ್ಲಿ ಫೆಬ್ರವರಿಯಲ್ಲೇ ಜಮಾ ಮಾಡಿದೆ. ಈ ನಿಟ್ಟಿನಲ್ಲಿ KIADB ಮಾರ್ಚ್ 28ರಂದೇ ಪ್ರಾಥಮಿಕ ಸೂಚನೆಯನ್ನು ಹೊರಡಿಸಿದೆ. ಜೂನ್-ಜುಲೈ ತಿಂಗಳಲ್ಲಿ ಜನರಿಂದ ಭೂಮಿ ವಶಪಡಿಸಿಕೊಳ್ಳುವ ಕ್ರಿಯೆಗೆ ಚಾಲ್ತಿಯನ್ನು ನೀಡಲಾಗುತ್ತದೆ.

ಆದರೆ ಇದ್ಯಾವುದರ ಬಗ್ಗೆಯೂ ಆ ಭಾಗದ ಜನತೆಗೆ ಹೆಚ್ಚಿನ ವಿವರಗಳೇ ಗೊತ್ತಿಲ್ಲ, ಸರ್ಕಾರವೂ ಈ ಬಗ್ಗೆ ಯಾವುದೇ ಮಾಹಿತಿ ಹೊರಹಾಕುತ್ತಿಲ್ಲ, ಮೊದಲನೆಯದಾಗಿ ಇಂಥಾ ಯೋಜನೆಯೇ ಕರ್ನಾಟಕಕ್ಕಾಗಲೀ, ದೇಶಕ್ಕಾಗಲೀ ಅಗತ್ಯವಿಲ್ಲ, ಅದು ರೈತರ ಬದುಕನ್ನು ಕಿತ್ತುಕೊಂಡು ಎಷ್ಟು ಕುಟುಂಬಗಳನ್ನು ಬೀದಿಪಾಲು ಮಾಡುತ್ತದೋ ಅದರ ಕಾಲು ಭಾಗದಷ್ಟು ಉದ್ಯೋಗವನ್ನೂ ಸೃಷ್ಟಿಸುವುದಿಲ್ಲ. ಈ ಯೋಜನೆಗೆ ಬೇಕಿರುವ ಬೃಹತ್ ಪ್ರಮಾಣದ ನೀರನ್ನು ಆಲಮಟ್ಟಿ ಅಥವಾ ತುಂಗಭದ್ರಾದಿಂದ ಕೊಡುವುದಾಗಿ ಈಗಾಗಲೇ ಒಪ್ಪಂದವಾಗಿದೆ. ಈ ಪ್ರಮಾಣದ ಸ್ಟೀಲ್ ಉತ್ಪಾದನೆಗೆ ಬೇಕಿರುವಷ್ಟು ನೀರು ಎಷ್ಟೆಂದರೆ ಒಂದು ಲಕ್ಷಕ್ಕೂ ಹೆಚ್ಚು ರೈತರು ಎರಡು ಬೆಳೆಗೆ ಬಳಸುವಷ್ಟು. ಅಂದರೆ ಅಷ್ಟು ಪ್ರಮಾಣದ ನೀರನ್ನು ರೈತರಿಂದ ಕಿತ್ತು ಈ ಕಂಪನಿಗೆ ಒದಗಿಸಲಾಗುತ್ತದೆ. ಈ ವಿದೇಶಿ ಕಂಪನಿ ನಮ್ಮ ನಾಡಿನ ನೆಲ, ನೀರು ಜನರ ಶ್ರಮ ಎಲ್ಲವನ್ನು ಬಳಸಿಕೊಂಡು ಸ್ಟೀಲ್ ಉತ್ಪಾದನೆ ಮಾಡುತ್ತಾ ವಿದೇಶಕ್ಕೆ ಆಮದು ಮಾಡಿ ಕೋಟಿಗಟ್ಟಲೆ ಲಾಭ ಮಾಡಿಕೊಳ್ಳುತ್ತದೆ. ಈ ಉದ್ಯಮವೇ ವಿಶೇಷ ಆರ್ಥಿಕ ವಲಯದಡಿ ಬರುವುದರಿಂದ ಇದರಿಂದ ಯಾವುದೇ ಬಗೆಯ ತೆರಿಗೆ ಲಾಭವೂ ಸರ್ಕಾರಕ್ಕೆ ಆಗುವುದಿಲ್ಲ, ಆದರೆ ಈ ಯೋಜನೆಗೆ ಇಷ್ಟೆಲ್ಲಾ ಅನುಕೂಲ ಮಾಡಿಕೊಡುತ್ತಿರುವ ಕೇಂದ್ರ ಮತ್ತು ರಾಜ್ಯದ ದಲ್ಲಾಳಿ ಮಂತ್ರಿವರ್ಯರುಗಳಿಗೆ ಮಾತ್ರ ಸಿಕ್ಕಾಪಟ್ಟೆ ಕಿಕ್ ಬ್ಯಾಕುಗಳು ಸಿಗುತ್ತವೆ.

ನಾಡಿನ ರೈತರನ್ನು ಬೀದಿಪಾಲು ಮಾಡುವ, ನಾಡಿನ ನೆಲ-ಜಲ ಸಂಪನ್ಮೂಲವನ್ನು ಲೂಟಿ ಹೊಡೆದು ತಮ್ಮ ಬೊಕ್ಕಸ ತುಂಬಿಕೊಳ್ಳುವ, ರಾಜ್ಯದ ಬೊಕ್ಕಸವನ್ನು ಬರಿದು ಮಾಡುವ, ಪರಿಸರನಾಶ ಮಾಡುವ ಈ ಪೋಸ್ಕೊ ಕಂಪನಿಯ ವಿರುದ್ಧ ನಾಡಿನ ಜನರೆಲ್ಲಾ ಒಕ್ಕೊರಲಿನಿಂದ ಬೀದಿಗೆ ಇಳಿಯಬೇಕಿದೆ. ಪೋಸ್ಕೋವನ್ನು ಕರ್ನಾಟಕದಿಂದ ಮಾತ್ರವಲ್ಲದೇ ಭಾರತದಿಂದಲೇ ಒದ್ದೋಡಿಸಬೇಕಿದೆ. ಅದು ಸಾಧ್ಯ. ಒರಿಸ್ಸಾ ಜನರು ನಡೆಸುತ್ತಿರುವ ಹೋರಾಟ ನಮ್ಮ ಕಣ್ಣಮುಂದೆಯೇ ಇದೆ. ಸಿಂಗೂರು-ನಂದಿಗ್ರಾಮ ದಾರಿ ಸೂಚಿಸುತ್ತಿದೆ. ಗೋವಾದಲ್ಲಿ ರದ್ದಾದ ವಿಶೇಷ ಆರ್ಥಿಕ ವಲಯ ಯೋಜನೆಗಳು ಪಾಠ ಹೇಳುತ್ತಿವೆ.

ಹೋರಾಡಿದರೆ ಜಯ, ಭೂಮಿ, ಬದುಕು. ಸುಮ್ಮನಿದ್ದರೆ ಸುಲಿಗೆ, ಹಸಿವು ಮತ್ತು ಸಾವು. ಇದೇ ಈ ಕಾಲದ ಪ್ರಭುತ್ವಗಳು ನಮಗೆ ಕಲಿಸುತ್ತಿರುವ ಪಾಠ. ಅಲ್ಲವೇ?

ಮರೆಯಬೇಕೆಂದಿದ್ದೇನೆ



ಮರೆಯಬೇಕೆಂದಿದ್ದೇನೆ
ಹೀಗೆ ಸುಮ್ಮನೆ!

ಅವನ್ಯಾಕೋ
ಕಿಸಕ್ಕನೆ ನಕ್ಕದ್ದನ್ನ ಯಾರೋ
ಮೋರೆ ತಿರುವಿದ್ದನ್ನ
ಮೂತಿ ತಿವಿದ್ದದನ್ನ
ನೆತ್ತಿ ಮೇಲೆ ಮೊಟಕಿದ್ದನ್ನ
ಕಪಾಳಕ್ಕೆ ಬಡಿದಿದ್ದನ್ನ
ಏಸುಕ್ರಿಸ್ತ ಹೇಳಿದ ಅಂತಲ್ಲ
ಅಜಾತಶತ್ರು ಎಂಬ
ಹಣೆ ಪಟ್ಟಿಗಾಗಲ್ಲ
ಒಳ್ಳೆಯವನೆನಿಸಿಕೊಂಬೋ
ಒಣಪ್ರತಿಷ್ಠೆಗಲ್ಲ!

ಹಸಿ ಸುಳ್ಳಿನ ಮಲ್ಲರನ್ನ
ಬಿಸಿ ಚಾಡಿಯ ಮಳ್ಳರನ್ನ
ದ್ವೇಷ ಹಬೆಯಾಡುವರನ್ನ
ತಣ್ಣಗೆ ಅಸೂಯೆಪಡುವರನ್ನ
ಒಣ ಮಾತಿನ ಹೇಡಿಗಳನ್ನ
ನಾಚಿಕೆಯಿರದ ಧೂರ್ತರನ್ನ
ಹೇಸದೆ ಬೆನ್ನಲ್ಲಿರಿವರನ್ನ
ಮರೆಯಬೇಕೆಂದಿದ್ದೇನೆ
ಹೀಗೆ ಸುಮ್ಮನೆ!

ಕಾಲ ಸರಿದಂತೆಲ್ಲ ಪಕ್ವಗೊಂಡಿದೆ
ಬಸವಳಿದಿದೆ, ಜೀವ ಅಂತಲ್ಲ
ಬುದ್ಧ ಬಸವ, ಪೈಗಂಬರರ
ತತ್ವದರ್ಶನವಾಯಿತೆಂದಲ್ಲ
ಮಹಾತ್ಮ ಗಾಂಧಿ ಹೇಳಿದರೆಂತಲ್ಲ
ಮರೆಯಬೇಕೆಂದಿದ್ದೇನೆ
ಹೀಗೆ ಸುಮ್ಮನೆ!


ಕೇವಲ ಮನುಷ್ಯನಂತೆ,
ನಮ್ಮಪ್ಪನಂತೆ
ನಮ್ಮ ತಾತನಂತೆ
ಮರೆಯಲೆತ್ನಿಸುತ್ತೇನೆ
ಹೀಗೆ ಸುಮ್ಮನೆ!

• ಡಾ. ನಿತ್ಯಾನಂದ ಸುಂಡವಾಳು

ಧರ್ಮಸ್ಥಳಕ್ಕೋದ್ರೆ ಇಬ್ರಿಗೂ ತಲಿಕೆಟ್ಟು ಬಾಹುಬಲಿಯಂಗೆ ತಿರುಗ್ತರೆ

ಸಾಯಿಬಾಬಾ ಮಲಗುವ ಕೋಣೆಯ ತುಂಬ ಚಿನ್ನ, ಬೆಳ್ಳಿ, ವಜ್ರ ವೈಢೂರ್ಯವನ್ನೆ ತುಂಬಿಕೊಂಡು ಸರ್ಪದಂತೆ ಕಾಯುತ್ತಿದ್ದ ಎಂಬ ಸುದ್ದಿ ಕೇಳಿದ ಕಾಳಮಾವ ದಂಗುಬಡಿದು,

"ಆಟೊಂತರ ಏನು ಮಾಡಕ್ಕೆ ಮಡಿಕಂಡಿದ್ದಾ?" ಎಂದ.



"ನನಿಗೆ ತಿಳದಂಗೆ ಅವುನು ಯಲ್ಲಾ ಮನುಸ್ರು ತರ ಇರಲಿಲ್ಲ ಕಣಮಾವ. ಸುತ್ತುಲೂ ವಡವೆ ರಾಶಿ, ಹಣ ಇದ್ರೆ ಅವುನಿಗೆ ನೆಮ್ಮದಿಯಾಗಿ ನಿದ್ದೆ ಬತ್ತಿತ್ತೇನೊ" ಎಂದ ಉಗ್ರಿ.

"ನೋಟಿನ ಕಂತೆನೇ ಹಾಸಿಗೆ ಮಾಡಿಕಂಡಿದ್ದನಂತಲ್ಲ ಕೇಳು" ಎಂದ ಸೀರ.

"ಅಂಗೇನುಯಿಲ್ಲ ಕಣೊ. ಸುತ್ತುಲೂ ವಡವೆ ವಜ್ರ ಮುಡಿಗಿದಂಗೆ ದುಡ್ಡನೂ ಹೊಟ್ಟಿಗಂಡಿದ್ದ. ಶೆಟ್ರುಗಳು ಅಂಗೆ ಅಲವೆ."

"ಸೆಟ್ರು ಆಟೊಂತರ ಹಣ ವಡವೆ ಮಡೆಗಿದ್ದರ್ಲ?" ಎಂದಳು ಜುಮ್ಮಿ.

"ಅವುರಾದಾಯಕ್ಕೆ ತಕ್ಕಂಗೆ ಮಡಿಗಿರತರೆ ಕಣೆ. ಪೆಟಿಗೆ ತುಂಬ ದುಡ್ಡು ವಡವೆ ಇದ್ರೆ ಮಾತ್ರ ಆ ನನ್ನಮಕ್ಕಳು ನಿದ್ದೆ ಮಾಡ್ತರಂತೆ. ಅದೊಂತರ ವ್ಯಸನ ಅವುರಿಗೆ. ಸಾಯಿಬಾಬಾನೂ ಅಂಗೆ ಇದ್ದ."

"ಇದೊಂತರ ಕ್ವಾರ ಬಿಲದಲ್ಲಿ ತ್ಯನೆ ತುಂಬಿಕಂಡು ಸತ್ತೊದಂಗಾಯ್ತು. ಅದ್ಕೆ ಹೇಳಿಲ್ಲವೆ ಪಾಪಿ ಸೊತ್ತು ಪರಾಧೀನ ಅಂತ."

"ಮುಂಡೆಮಗ ಸಾಯದಕಿಂತ ಮದ್ಲು ಆಂಧ್ರದಲ್ಲಿರೊ ಬಡುವುರಿಗೆ ಮನೆ ಕಟ್ಟಿಸಿ ಕೊಡಬವುದಿತ್ತು ಕಣಮಾವ. ಆಂಧ್ರದಲ್ಲಿ ನಮಿಗಿಂತ ಬಡುವುರು ಜಾಸ್ತಿಯಂತೆ. ಇಡೀ ಕರ್ನಾಟಕದಲ್ಲಿರೊ ಮಣ್ಣೊಡ್ರು, ಕಲ್ವಡ್ರು, ರಸ್ತೆ ಕ್ಯಲಸ ಮಾಡೋರ್ಯಲ್ಲ ಆಂಧ್ರುದೋರೆಯ. ಅಂಥೋರಿಗ್ಯಲ್ಲ ಈ ಸಾಯಿಬಾಬ ಸಾಯದಕ್ಕಿಂತ ಮೊದ್ಲು ಮನೆನಾರ ಕಟ್ಟಿದ್ರೆ ಅವುನೆಸರೇಳಿಕೊಂಡು ಕಾಲಹಾಕೋರು."

"ಈಗವುರ ದುಡ್ಡನ್ಯಲ್ಲ ಏನು ಮಾಡಿದ್ರೂ?"

"ಸಿಕ್ಕಿದೋರಿಗೆ ಸೀರುಂಡ್ಯಾಯ್ತಾ ಅದೆ ಕಣೆ. ಟೆಂಪೋಗಳಲ್ಲಿ ಲಾರಿಗಳಲ್ಲಿ ತುಂಬಿಕಂಡೋಗಿ ಟ್ರಸ್ಟಿಗಳ ಮನಿಗೆ ಸುರಿತಾಯಿದ್ದರಂತೆ."

"ಅಂತೂ ಟ್ರಸ್ಟಿಗಳು ಬದುಕಿಬಿಟ್ರು."

"ಟ್ರಸ್ಟಿಗಳು ಅಂದ್ಯಾರೂ?"

"ಟ್ರಸ್ಟಿಗಳ್ಯಾರು ಅಂದ್ರೆ ಏನ್ವೇಳನ. ಸಾಯಿಬಾಬನ ಟೆಸ್ಟಿಕಲ್ಲುಗಳು, ಅವುನ ವ್ಯವಟ ನೋಡಿಕಳಕೆ ಅಂತ ಒಂದು ಕಮಿಟಿ ಇತ್ತು ಕಣೆ. ಅದೀಗ ಕಳ್ಳರ ಗುಂಪಿನಂಗಾಗ್ಯದೆ."

"ಸಾಯಿಬಾಬ ಸಾಯದ್ಕು ಮದ್ಲು ಅದನ್ಯಲ್ಲ ಬಡುವುರಿಗೆ ಕೊಟ್ಟು ಹೋಗಬವುದಾಗಿತ್ತು ಕಂಡ್ರ" ಎಂದ ಸೀರ.

"ಅದ್ಕೆ ಅಲವೇನೊ ನಾವು ಮಾತಾಡ್ತುಯಿರದು. ಈ ಸಾಯಿಬಾಬನಂತ ಮುಂಡೆ ಮಕ್ಕಳು ಬಾಸಣ ಯಂಗೆ ಮಾಡ್ತರೆ ಅಂತೀ, ಮನುಸನಿಗೆ ದುರಾಸೆ ಒಳ್ಳೆದಲ್ಲಾ, ಸಂಪತ್ತನ್ನ ಕೂಡಿಡ ಬಾರ್ದು, ದೇಶದಲ್ಲಿ ಚಲಾವಣೆಲಿರೊ ಹಣವನ್ನು ಚಲಾಯಿಸಬೇಕೆ ಹೊರತು ಇಟ್ಕೊಗೊಬಾರ್ದು, ಅಂಗೆ ಕೂಡಿಟ್ಟದ್ದು ಕಪ್ಪುಹಣ ಅನ್ನಿಸಿಕೊಳ್ಳುತ್ತೆ ಅಂತ ಬಾಸಣ ಮಾಡ್ತರೆ. ಆದ್ರೆ ಅದೇ ಕ್ಯಲಸ ಅವುರೇ ಮಾಡ್ತರೆ" ಎಂದ ಉಗ್ರಿ.

"ಸಾಯಿಬಾಬಾ ಮಂಡೇವುದಲ್ಲಿ ಹುಟ್ಟುತನೆ ಅಂತಿದ್ರಲ್ಲಾ ಹುಟಿದ್ನೆ?"

"ಇನ್ನು ಇಲ್ಲ ಕಣೊ. ವಳ್ಳೆ ತಂದೆತಾಯಿ ಹುಡುಕಬೇಕಲ್ಲ."

"ಅಂತು ಹುಡುಕ್ತಾ ಅವುನೆ ಅಂತಿಯಾ?"

"ಯಂಗೇಳನಪ್ಪ, ಇಷ್ಟುಮಟ್ಟಿಗೆ ಸರಕಾರಕ್ಕೆ ವಂಚನೆ ಮಾಡಿ, ಪರಾದೀನ ಮಾಡಿ ಹೋಗಿರೋನು ಇಲ್ಲದಂಗೆ ಆದ್ನೊ, ಇದ್ದನೊ ಅನ್ನದೆ ಅನುಮಾನ."

"ಅವುನು ಹುಟ್ಯವುನೆ ಅನ್ನದು ಗೊತ್ತಾದ್ರೆ ತಗಂಡೋಗಿ ಸಾಯಿಬಾಬನ ಆಸ್ರಮಕ್ಕೆ ತಾಪನೆ ಮಾಡಬೇಕಲ್ಲವೆ."

"ಹುಟ್ಟಿದ ಮ್ಯಾಲೆ ನೋಡನ ತಗೊ."

"ಈ ಕುಮಾರಸ್ವಾಮಿ ಎಡೂರಪ್ಪ ಧರ್ಮಸ್ಥಳದಲ್ಲಿ ಆಣೆಮಾಡಕ್ಕೆ ರಡಿಯಾಗಿದ್ರಲ್ಲ ಏನಾಯ್ತದೊ?"

"ಕುಮಾರಣ್ಣ ರಡಿಯಿದ್ರು ಎಡೂರಪ್ಪನೆ ಹಿಂಜರಿತಾ ಅವುನೆ ದ್ವಡಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಎಡೂರಪ್ಪ ಹಿಂಜರಿತನೆ ಅಂದ್ರೆ ಅವುನೆ ಸುಳ್ಳೆಳಿರಬೇಕು."

"ಇವತ್ತಿನ ದಿವಸದಲ್ಲಿ ಕುಮಾರಣ್ಣನ್ನ ನಂಬಂಗಿಲ್ಲ, ಎಡೂರಪ್ಪನ್ನೂ ನಂಬಂಗಿಲ್ಲ ದ್ವಡಪ್ಪ, ಅದ್ಕೆ ದ್ಯಾವೇಗೌಡ್ರು ಬ್ಯಾಡ ಅಂದವುರೆ. ಅತ್ತಗೆ ಸಾಮಿಗಳೂ ಎಡೂರಪ್ಪನಿಗೆ ಬುದ್ದಿ ಹೇಳ್ಯವುರೆ."

"ಅದ್ಯಾಕಾಣೆ ಮಾಡಕ್ಕೆ ಹ್ವಂಟಿದ್ದುರ್ಲ?"

"ಯಾಕೆ ಅನ್ನದಾಗ್ಲೆ ಹಳೆ ಮ್ಯಾಟ್ರಾಗ್ಯದೆ ಕಣಕ್ಕ ಕುಮಾರಣ್ಣ ಎಡೂರಪ್ಪ ಮಾಡಿರೊ ಆಸ್ತಿ ಹಗರಣವ ಡೆಲ್ಲಿಗೋಗಿ ಪೇಪರ್‌ನೋರ ಮುಂದೆ ಹೇಳ್ತಿನಿ ಅಂದನಂತೆ. ಅದ್ಕೆ ಯೆಡೂರಪ್ಪ ಹೆದ್ರಿ ಕಂಡು 'ಅಂಗ್ಯಲ್ಲ ಮಾಡಬ್ಯಾಡಿ, ದುಡ್ಡು ಕೊಡ್ತಿನಿ, ಮುಂದೆ ಇಬ್ರು ಜ್ವತೆಲಿ ರಾಜಕಾರಣ ಮಾಡಿಕಂಡೋಗನ' ಅಂತ ಫೋನ್ ಮಾಡಿದ್ನಂತೆ."

"ಎಡೂರಪ್ಪ ಅಂಗೆ ಮಾಡೋನೆಯ ಅನ್ನದ್ಕೆ ಸಾಕ್ಷಾಧಾರ ಆತಿ" ಎಂದ ಉಗ್ರಿ.

"ನಿನ್ನತ್ರ ಇದ್ದವೆ?"

"ಇರದೇನು ಕಣ್ಣಿಗೆ ಕಾಣ್ತಾವಲ್ಲೋ. ಆ ರೆಡ್ಡಿಗಳ ಜತೆ ಮಾರಾಮಾರಿ ಜಗಳಾಡಿದ. ಇವತ್ತು ಒಂದಾಗ್ಯವುನೆ. ಇನ್ನು ಈಚಿಗೆ ಒಸಿಜನ ಎಮ್ಮೆಲ್ಲೆಗಳು ತಿರುಗಿಬಿದ್ದು ಬಾಯಿಗೆ ಬಂದಂಗೆ ಬೊದ್ರು. ಆದ್ರೂ ಕೂಡ ಎಡೂರಪ್ಪ ಅವುರ ಜೊತೆ ಚನ್ನಾಗ್ಯವುನೆ. ಅಂದ್ರೆ ಏನೇಳನಾ?"

"ಹೇಳದಿನ್ನೇನು. ಅಧಿಕಾರಕ್ಕಾಗಿ ಎಡೂರಪ್ಪ ಏನು ಬೇಕಾದ್ರು ಮಾಡ್ತನೆ, ಯಾರನ್ನ ಬೇಕಾದ್ರು ಮಾತಾಡುಸ್ತಾನೆ ಅಂದಂಗಾಯ್ತು, ಇದನ್ಯಲ್ಲ ನೋಡಿದ್ರೆ ಎಡೂರಪ್ಪನ ಕಡೆನೆ ತಪ್ಪು ಕಾಣ್ತವೆ."



"ಅದಕೆ ಅಲವೇನೊ ಶಿವರಾತ್ರಿ ಸ್ವಾಮಿ ಅನ್ನೊನು ಅಂಗ್ಯಲ್ಲ ಹೋಗಿ ಆಣೆ ಪ್ರಮಾಣ ಮಾಡಬಾಡಿ ಅಂತ ಹೇಳ್ಯವುನೆ."

"ಧರಮುಸ್ಥಳಕ್ಕೋಗಿ ಪ್ರಮಾಣ ಮಾಡದ ತಮಾಸಿ ಅನ್ನಕಂಡವುರೆ ಇವುರು. ಅದೂ ಧರ್ಮಸ್ಥಳ! ವರಗಡಿಂದ ಹೋದೋರು ಅಲ್ಲಿಂದ ಒಂದು ಕಲ್ಲೂ ತರಕ್ಕಾಗದಿಲ್ಲ ಗೊತ್ತೆ" ಎಂದ ಸೀರ.

"ಮಣ್ಣ ತರಬವುದಾ ಚಿಗಪ್ಪ?"

"ಆ ಸನ್ನಿಧಾನದಿಂದ ಯಾವುದೇ ಪದಾರ್ಥ ತರಂಗಿಲವಂತೆ. ಬಾಳ ಹಿಂದೆ ನಮ್ಮ ಕಡಿಯೋರೆ ತೂರೋಗಿದ್ರು. ನೇತ್ರಾವತಿ ಹ್ವಳೆಲಿ ನುಣ್ಣಗಿರೊ ಕಲ್ಲ ತಗಂಡು ಚೀಲಕಾಯ್ಕಂಡ್ರಂತೆ. ಬಸ್ಸೆ ಸಾಟಾಗ್ಲಿಲವಂತೆ. ಆಗ ಡ್ರೈವರು ಯಾರಾರ ಏನಾರ ತಗಂಡಿದ್ರೆ ಇಲ್ಲೆ ಬಿಸಾಕಿ ಅಂದನಂತೆ. ಯಾವನೋ ನನ್ನಂಥೋನು ಚೀಲದಲ್ಲಿದ್ದ ಕಲ್ಲ ಯಸ್ತಮ್ಯಾಲೆ ಬಸ್ಸು ಸಾಟಾಗಿ ಮುಂದಕೆ ಬತ್ತಂತೆ" ಎಂದು ಸೀರ ಅಗಲವಾಗಿ ಕಣ್ಣುಬಿಟ್ಟ.

"ನೀನು ಧರ್ಮಸ್ಥಳ ನೋಡಿದ್ದಿಯ ಚಿಗಪ್ಪ?"

"ಇಲ್ಲ ಕಂಡ್ಯ, ನಾವ್ಯಾರು ನೋಡಿಲ್ಲ, ಅಲ್ಲಿಂದ ಬಂದೋರು ಹೇಳದ ಕೇಳಿದ್ದಿನಿ. ಅಲ್ಲಿ ಒಂದು ಸಾವ್ರರ ಜನಕೆ ಮಾಡಿರೊ ಅಡಿಗೆ ಮೂರು ಸಾವ್ರರ ಜನಕಾದತಂತೆ. ಮಂಜುನಾಥ ಸ್ವಾಮಿ ಹೆಚ್ಚು ಮಾಡ್ತನಂತೆ."

"ಅಂದ್ರೆ ಮಾಡಿರೊ ಅನ್ನ, ಸಾರು, ಪಲ್ಯ ಒಂಟು ಡಬಲ್ಲಾಯ್ತದೆ ಅನ್ನು."

"ಊ ಕಂಡ್ಯ. ಇಲ್ಲಾಂದ್ರೆ ಲಕ್ಷಾಂತರ ಜನಕೆ ಊಟ ಯಂಗಾಕಬೇಕೇಳು?"

"ದೇವರ ಮಯಿಮೆ ಯಿರೊ ಜಾಗಲವೆ" ಎಂದು ಕಾಳಮಾವ ದನಿಗೂಡಿಸಿದ.

"ಒಂದು ಸತಿ ಹೋಗಿ ಬರಣ ಕಂಡ್ಯ ಉಗ್ರಿ" ಎಂದಳು ಜುಮ್ಮಿ.

"ಉಸಾರು ಕಣಕ್ಕ, ಬಾಳ ಹಿಂದೆ ಧರ್ಮಸ್ಥಳದ ಲಾಡಜಲ್ಲಿ ಕ್ವಲೆಯಾಗಿತ್ತು, ಮಂಜುನಾಥ ಆ ಟೈಮಲ್ಲಿ ಇರಲಿಲ್ಲ ಅನ್ಸುತ್ತೆ, ಅವುನಿದ್ದಾಗ ಹೋಗಿ ಬನ್ನಿ" ಎಂದು ವಾಟಿಸ್ಸೆ ನಕ್ಕ.

"ಅದ್ಯಂಗೆ ಗೊತ್ತಾದತ್ಲ?"

"ವೀರೇಂದ್ರ ಹೆಗಡೆ ಕೇಳಿದ್ರೆ ಹೇಳ್ತರೆ. ನೋಡೀಗಾಗ್ಲೆ 27 ನೇ ತಾರೀಖಿಗೆ ಬನ್ನಿ ಪ್ರಮಾಣ ಮಾಡುಸ್ತಿನಿ ಅಂತ ಹೇಳ್ಯವುರೆ. ಅಂತೂ ನಮ್ಮ ರಾಜಕಾರಣಿಗಳು ದೇವರಿಗೆ ಹೆದರತರೇ ವರತೂ ಜನಕ್ಕೆದರರದಿಲ್ಲ ಅಂದಂಗಾಯ್ತು."

"ಈ ಹಿಂದೆ ಯಾರಾರ ಪ್ರಮಾಣ ಮಾಡಿದ್ರೇನ್ಲ?"

"ಇಲ್ಲ ದ್ವಡಪ್ಪ, ಮನುಸುರ ಚೌಕಾಸಿ ವ್ಯವಾರಕೆ ಮಂಜುನಾಥನ ಯಾರೊ ಬಳಸಿಗಂಡಿಲ್ಲ, ಆದ್ರೆ ಈ ಹಾಲಿ ಮಾಜಿಗಳಿಗೆ ಎಷ್ಟು ತಲಿಕೆಟ್ಟದೆ ಅಂದ್ರೆ ಇವುರ ಯೋಗ್ತಿಗೆ ಸರಿಯಾದ ರಾಜಕಾರಣ ಮಾಡ್ತರೆ. ಸುಳ್ಳು ಜ್ಯೋತಿಸಿಯೊಬ್ಬ ಸುಳ್ಳು ಹೇಳೋ ಪ್ರಕಾರ ಪ್ರಮಾಣ ಮಾಡಿದವರಿಗೆ ಬುದ್ಧಿ ಬ್ರಮಣೆ ಆದತಂತೆ. ಅದೀಗಾಗ್ಲೆ ಕುಮಾರಸ್ವಾಮಿಲೂ, ಎಡೂರಪ್ಪನಲ್ಲೂ ಕಾಣ್ತ ಅದೆ. ಧರ್ಮಸ್ಥಳಕ್ಕೆ ಹೋದ್ರೆ ಇಬ್ರಿಗೂ ತಲೆ ಕೆಟ್ಟೊಗದು ಗ್ಯಾರಂಟಿ. ಆಗ ಇಬ್ರೂ ಧರ್ಮಸ್ಥಳದ ಬಾಹುಬಲಿತರ ತಿರುಗಬೇಕಾಯ್ತದೆ" ಎಂದು ವಾಟಿಸ್ಸೆ ನಕ್ಕ.

"ಕುಮಾರಣ್ಣ ಧೈರ್ಯವಾಗ್ಯವುನೆ. ಎಡೂರಪ್ಪನೆ ಹಿಂದೇಟಾಕ್ತಯಿರಂಗವುನೆ."

"ಎಡೂರಪ್ಪನ ಮಕದಲ್ಲಿ ಆಗ್ಲೆ ಪ್ರಮಾಣದ ಯಫೆಕ್ಟು ಕಾಣ್ತ ಅದೆ ಕಣೊ ಉಗ್ರಿ. ಅದ್ಕೆ ಅಡ್ವಾನ್ಸಾಗಿ ಕೇರಳಕ್ಕೋಗಿ ಮಲಿಯಾಳಿ ದೇವರ ಪೂಜೆ ಮಾಡಿಕಂಡು ಬಂದವುನೆ."

"!?"

ಎಣ್ಣೆ, ಹಾಲಿನ ಗೋಳು



ನಿಮಗೆ ಹೊಸ ಐಡಿಯಾ ಅಂದರೆ ಶಾಕ್ ಆಗುತ್ತದೆ. ಸಾವಿರಾರು ವರ್ಷದಿಂದ ಬಂದಿರುವ ಆಚರಣೆಗಳನ್ನು ಪ್ರಶ್ನಿಸುವುದೆಂದರೆ? ಮುದುಕರಿಗೆ ಗೌರವ ಕೊಡಬೇಕು, ಹೆಂಗಸರು ಆದಷ್ಟೂ ಅಡಿಗೆ ಮನೆಯಲ್ಲಿರಬೇಕು, ಹೆಣ್ಣುಮಕ್ಕಳನ್ನೇ ಬೇರೆ ರೀತಿ ಬೆಳೆಸಬೇಕು. ಗಂಡು ಮಗ ವಂಶವನ್ನು ಉದ್ಧಾರಮಾಡುವವನಾದ್ದರಿಂದ ಎಲ್ಲ ಗಮನವೂ ಅವನಿಗೆ. ಹುಡುಗಿಯ 'ತೊಟ್ಟಿಲು ಕಳಿಸುವ' ಸಂಪ್ರದಾಯವನ್ನು ಮುರಿಯಬಾರದು. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ.'

ಇವುಗಳಲ್ಲಿ ಒಂದೊಂದೂ ನಾನ್ಸೆನ್ಸ್ ಎಂದು ತೋರಬಹುದು. ಮುದುಕ ಕೆಟ್ಟವನಾಗಿದ್ದರೆ? ಮಗನಿಗಿಂತ ಮಗಳು ಕ್ರಿಯಾಶಾಲಿಯಾಗಿದ್ದರೆ? 'ತೊಟ್ಟಿಲು ಕಳಿಸಿ' ಕೈತೊಳೆದುಕೊಳ್ಳುವ ಬದಲು ಮಗಳೇ ಮನೆ ನೋಡಿಕೊಂಡರೆ? ಇವೆಲ್ಲ ವಿವಾದಕ್ಕೆ ಒಳಗಾಗಬಹುದಾದ ವಿಷಯಗಳಾದ್ದರಿಂದ ತಲೆಗೆ ಎಣ್ಣೆ ಹಾಕಿಕೊಳ್ಳುವ ನಮ್ಮ ಜನರ ಅಭ್ಯಾಸ ತೆಗೆದುಕೊಳ್ಳುತ್ತೇನೆ. ತಲೆಗೆ ಅಥವಾ ಮೈಗೆ ಎಣ್ಣೆ ಹಾಕಿಕೊಳ್ಳುವುದು ಅನಗತ್ಯ; ನಮ್ಮ ದೇಹಕ್ಕೆ ಬೇಕಾದಷ್ಟು ತೈಲವನ್ನು ನಮ್ಮ ದೇಹವೇ ಉತ್ಪಾದಿಸುತ್ತದೆ. ತಲೆಗೆ ಎಣ್ಣೆ ಹಾಕಿಕೊಂಡರೆ ಮಿದುಳಿಗೆ ಒಳ್ಳೆಯದಾಗುತ್ತದೆ, ತಲೆ ತಣ್ಣಗಿರುತ್ತದೆ- ಇದೆಲ್ಲ ಬೊಗಳೆ. ತಲೆಗೆ ಎಣ್ಣೆ ಹಾಕಿಕೊಳ್ಳುವುದರಿಂದ- ನೀರು ಹಾಕಿದ ಗಿಡದಂತೆ- ಕೂದಲು ಚೆನ್ನಾಗಿ ಬೆಳೆಯುತ್ತದೆ ಎಂಬುದೂ ಸುಳ್ಳು. ಮೈ ನೀವುವಾಗ ಎಣ್ಣೆಯಿಂದ ನೀವಲು ಸಹಾಯವಾಗುತ್ತದೆ ಎಂಬಷ್ಟು ಮಟ್ಟಿಗೆ ಎಣ್ಣೆ ಅಗತ್ಯವಿರಬಹುದು. ಅದರಿಂದ ಮಿದುಳು ತಣ್ಣಗಿರುತ್ತದೆ, ಮಿದುಳು ಅಥವಾ ಕೂದಲು ಬೆಳೆಯುತ್ತದೆ ಎಂಬುದೆಲ್ಲ ಸುಳ್ಳು. ಕರಡಿಗಳಿಗೆ ಅದರ ತಾಯಿ ಎಣ್ಣೆ ಹಾಕಿ ತಟ್ಟುವುದಿಲ್ಲ! ನಾನಂತೂ ಎಂದೂ ತಲೆಗೆ ಎಣ್ಣೆ ಹಾಕಿಕೊಳ್ಳುವುದಿಲ್ಲ. ಕೂದಲು ಉದುರದಂತೆ ನೋಡಿಕೊಳ್ಳಲು ಬಿಲ್ ಕ್ರೀಮ್, ಎಣ್ಣೆ ಕೇಶವರ್ಧಿನಿ ಎಲ್ಲ ನಿರುಪಯುಕ್ತ, ಇರುವ ಕೂದಲು ಉದುರದಂತೆ ನೋಡಿಕೊಳ್ಳುವ ಒಂದೇ ವಿಧಾನ, ಕೂದಲನ್ನು ಚೊಕ್ಕಟವಾಗಿ ಇಟ್ಟುಕೊಳ್ಳುವುದು, ಸ್ನಾನ ಮಾಡುವಾಗ ಕೂದಲನ್ನು ತೊಳೆದುಕೊಳ್ಳುವುದು, ಬರೀ ನೀರಿನಿಂದ.


ನಮ್ಮೂರಲ್ಲಿ ಪಾರ್ವತಜ್ಜಿ ಎಂಬ ಮುದುಕಿ ಇದ್ದಳು. ಈಕೆಯ ಬೆರಳುಗಳೆಲ್ಲ ಸೊಟ್ಟ, ಗೂನುಬೆನ್ನು, ಈಕೆ ಬಾಣಂತಿ ಮತ್ತು ಮಗುವಿನ ಉಸ್ತುವಾರಿಯಲ್ಲಿ ಎಕ್ಸ್‌ಪರ್ಟ್. ಆಗತಾನೇ ಹುಟ್ಟಿದ ಮಗುವನ್ನು ಸುಡುವ ಬಿಸಿನೀರಿನಲ್ಲಿ ತೊಳೆಯುವುದು, ದಿನಾಲು ತಲೆಗೆ, ಮೈಗೆ ಎಣ್ಣೆಹಾಕಿ ಬೆಂಕಿಯಂಥ ನೀರನ್ನು ಅದರ ಮೇಲೆ ಹೊಯ್ಯುವುದು, ಮಗು ಎಷ್ಟು ಅತ್ತರೂ ಅದಕ್ಕೆ ಲಕ್ಷ್ಯ ಕೊಡದಿರುವುದು-ಇದನ್ನು ನೋಡಿ ನಾನು ದಂಗಾಗಿ ಹೋಗುತ್ತಿದ್ದೆ. ಮಗು ಬಿಸಿನೀರಿನಲ್ಲಿ ಕೆಂಪಗೆ ಕೆಂಡದಂತಾಗಿರುತ್ತಿತ್ತು, ಅಳುತ್ತಲೇ ಇರುತ್ತಿತ್ತು. 'ಹೆರಿಗೆಯಲ್ಲಿ ತುಂಬ ಸುಸ್ತಾಗಿರುತ್ತೆ, ಎಣ್ಣೆನೀರು ಬೇಕೇಬೇಕು' ಎಂಬುದು ಹೆಂಗಸರೆಲ್ಲರ ವಾದ. ಅದೆಲ್ಲ ಬರೀ ಮೂರ್ಖತನ. ಮಗುವನ್ನು ಹಾಗೆ ಗೋಳುಹೊಯ್ದುಕೊಳ್ಳುವುದು ಅನಗತ್ಯ.

ಎಲ್ಲಕ್ಕಿಂತ ದೊಡ್ಡ ಮೂರ್ಖ ನಂಬಿಕೆ ಹಾಲನ್ನು ಕುರಿತದ್ದು. ಹಾಲು ಮತ್ತು ಹಣ್ಣು ಪ್ರಕೃತಿ ಮಗುವಿಗಾಗಿ ಮಾಡಿಟ್ಟ ಆಹಾರ. ಬೇರೆ ಆಹಾರ ಸಿಕ್ಕದಿರಬಹುದು ಎಂದು ಪ್ರಕೃತಿ ಬೀಜದ ಜೊತೆಗೇ ಹಣ್ಣನ್ನು ಇಟ್ಟಿರುತ್ತದೆ. ಮಗುವಿನ ಜೊತೆಗೆ ತಾಯಿಯ ಮೊಲೆಯಲ್ಲಿ ಹಾಲು ಸಿದ್ಧವಾಗಿರುತ್ತದೆ. ಹಾಲಿಗೂ ಹಣ್ಣಿಗೂ ಇರುವ ವ್ಯತ್ಯಾಸವೆಂದರೆ, ಹಾಲನ್ನು ಅರಗಿಸಲು ಮಗುವಿನ ಜಠರದಲ್ಲಿ ವಿಶಿಷ್ಟ ರಸವೊಂದು ಒಸರುತ್ತದೆ, ಹಣ್ಣನ್ನು ದೊಡ್ಡವರೂ ಜೀರ್ಣಿಸಿಕೊಳ್ಳಬಲ್ಲರು. ಹಾಲು ಮಗುವಿಗಾಗಿ ಇರುತ್ತದೆ. ದೊಡ್ಡವರ ಪಾಲಿಗೆ ಅದು ಅಜೀರ್ಣವನ್ನು ಮಾಡುವ, ದೇಹ ಸರಿಯಾಗಿ ಸ್ವೀಕರಿಸಲಾರದ ವಸ್ತು. ಹಾಲಿನ ಬಗ್ಗೆ ಮನುಷ್ಯರಿಗೆ ಎಂತೆಂಥ ಕೆಟ್ಟ, ಮೂರ್ಖ ನಂಬಿಕೆ ಬೆಳೆದಿದೆಯೆಂದರೆ ಗಾಂಧೀಜಿ ಕೂಡ ತಾವು ಹಾಲಿಲ್ಲದೆ ಬದುಕುವುದಿಲ್ಲ ಎಂದು ತಿಳಿದಿದ್ದರು. ಎಲ್ಲವನ್ನೂ ಸಿದ್ಧಾಂತಕ್ಕೆ ಕಟ್ಟಿ ಎಳೆದಾಡುವ ಅವರ ಅಭ್ಯಾಸದಂತೆ ತಾಯಿಯ ಹಾಲು, ಹಸುವಿನ ಹಾಲು, ಮೇಕೆಯ ಹಾಲು- ಹೀಗೆ ಅವರ ನೈತಿಕಪ್ರಜ್ಞೆಯ ಲಹರಿ ಸಾಗುತ್ತಿತ್ತು, ಅದೆಲ್ಲ ಬರೀ ಗದ್ದಲ. ಬೆಳೆದ ಮನುಷ್ಯರಿಗೆ ಹಾಲು ಅನಗತ್ಯ. ಬೇರೆ ಆಹಾರವಿದ್ದರೆ ಒಂದು ವರ್ಷವಾದ ಮೇಲೆ ಮಕ್ಕಳಿಗೂ ಹಾಲು ಅನಗತ್ಯ. ಇದು ಅನಗತ್ಯವಷ್ಟೇ ಅಲ್ಲ, ಆರೋಗ್ಯವನ್ನು ಕೆಡಿಸಬಲ್ಲ ವಸ್ತು ಕೂಡ.

ಭಾರತೀಯರಂತೂ ಹಾಲಿನ ಬಗ್ಗೆ ಹುಚ್ಚೆದ್ದು ಕುಣಿಯುತ್ತಾರೆ. ಕೃಷ್ಣ, ದೇವಕಿಯ ಅಥವಾ ಪೂತನಿಯ ಮೊಲೆ ಹೀರುವುದರಿಂದ ಹಿಡಿದು ದೇವತೆಗಳು ಹಾಲಿಗಾಗಿ ಸಮುದ್ರವನ್ನು ಕಡೆಯುತ್ತಾರೆ! ಮಜ್ಜಿಗೆ ಕುಡಿಯದಿದ್ದರೆ ಅನೇಕರಿಗೆ ಊಟ ಮಾಡಿದ ಭಾವನೆಯೇ ಬರುವುದಿಲ್ಲ. ಅದು ಕೂಡ ಗಾಳಿಮಾತಿನಿಂದ ಕಟ್ಟಿಕೊಂಡ ಆಚಾರ. ಚಿಕ್ಕಂದಿನಿಂದ ಬೆಳೆದ ದುರಭ್ಯಾಸ.


ಹಾಲಿಗಾಗಿ ನಾವು ಹಸುಗಳನ್ನು ಹಿಂಸಿಸಿದ್ದು, ಹೊಸಹೊಸ ತಳಿಗಳಿಗಾಗಿ ಬೆಳೆಸಿದ್ದು, ಹಾಲಿನ ಡೈರಿ ಎಂಬ ವಿಷಕೇಂದ್ರವನ್ನು ಸ್ಥಾಪಿಸಿ ಬೀಗಿದ್ದು- ಎಲ್ಲ ನೆನೆದರೆ ನಗೆ ಬರುತ್ತದೆ.

ಒಂದು ಹನಿ ಹಾಲನ್ನು ಕುಡಿಯದಿದ್ದರೂ ಏನೂ ಆಗುವುದಿಲ್ಲ, ಅದಕ್ಕೆ ಬದಲು ಒಂದು ಮೂಸಂಬಿ ಅಥವಾ ಕಿತ್ತಲೆ ತಿನ್ನಿ. ನಾಲ್ಕು ಹನಿ ಹಾಲು ಬೇಕೇ ಬೇಕು ಅನ್ನಿಸಿದರೆ ನನ್ನಂತೆ ಸಕ್ಕರೆ ಇಲ್ಲದ ಕಾಫಿ ಕುಡಿಯಿರಿ.



ಜೂನ್ 14, 1995

ನಿಮ್ಮಾಣೆ ಇದೆಲ್ಲ ನಿಜ ಕಣ್ರೀ



ಎಚ್.ಎಲ್. ಕೇಶವಮೂರ್ತಿ

ಅಣಕ

ಕರ್ನಾಟಕ ವಾರ್ತೆಯವರು ನೀಡುವ ಜಾಹೀರಾತನ್ನು ಎಂದಾದರೂ ಮನನ ಮಾಡಿದ್ದೀರಾ ಎಂದು ಯಾರಾದರೂ ಕೇಳಿದರೆ 'ಮನನ' ಮಾಡೋ ಮಾತು ಹಂಗಿರಲಿ, ಅದರ ಕಡೆ ಕಣ್ಣು ಹಾಯಿಸಲೂ ಮನಸ್ಸು ಒಪ್ಪುವುದಿಲ್ಲ ಎನ್ನುವುದೇ ನನ್ನ ಉತ್ತರ. ಎಂತಹ ಆಕರ್ಷಕ ಸುದ್ದಿಯನ್ನೂ ನೀರಸವಾಗಿ ಓದುಗರಿಗೆ ತಲುಪಿಸುವುದರಲ್ಲಿ ನಿಸ್ಸೀಮರಿವರು. ಆ ಇಲಾಖೆ ಇರುವುದು ಜನರಿಗೆ ಸರ್ಕಾರದ ಕಾರ್ಯಕ್ರಮ ತಲುಪಲೇಬಾರದು ಎಂಬುದಕ್ಕಾಗಿ ಅನ್ನೊ ಅನುಮಾನ ನನಗೆ. ಆದರೆ ಏನು ಆಶ್ಚರ್ಯ ಅಂತೀರಿ. ಯಾರ ಬಾಯಲ್ಲಿ ಕೇಳಿದರೂ ಕರ್ನಾಟಕ ವಾರ್ತೆ ಜಾಹೀರಾತಿನ ಸುದ್ದೀನೆ! ಅಂತಹದ್ದೇನು ವಿಶೇಷ ಅಂತೀರಾ. ಕುಮಾರಸ್ವಾಮಿಗೂ ಯಡ್ಯೂರಪ್ಪಗೂ ಕೋಳಿ ಜಗಳ ನಡೀತಾನೆ ಇರ್ತದಲ್ಲಾ, ಕುಮಾರಸ್ವಾಮಿ ಏನು ಮಾಡಿದ್ರು 'ನನ್ ಮಗ್ನೆ ಥೂ ಅಂದ್ರೆ ಬಾ ಅಂದ್ರು ಅಂತೀಯಾ. ನಿನ್ನ ಬಟ್ಟೆ ಕಳಚಿ ಹಾದಿಬೀದೀಲಿ ಹರಾಜಾಕ್ತೀನಿ' ಅಂದ್ರಂತೆ. ಅದ್ಕೆ ಯಡ್ಯೂರಪ್ನೋರು ಹಂಗೆಲ್ಲ ಆಡಬ್ಯಾಡಪ್ಪ 'ನಾವಿಬ್ರೂ ಒಟ್ಟಿಗೆ ಸಂಸಾರ ನಡಿಸ್ದೋರು. ವಸಿ ದಿನ ಆದ್ರೂ ಸಂಸಾರ ಸಂಸಾರಾನೇ ಅಲ್ವ. ನಮ್ಮ ಜಗಳ ಗಂಡಹೆಂಡಿರ ಜಗಳ ಇದ್ದಂಗೆ. ಅದು ಬಯಲಾಗಬಾರದು. ಹೆಂಗಿದ್ರೂ ಮುಂದಿನ ಚುನಾವಣೇಲಿ ಯಾವ ಪಾರ್ಟೀನೂ ಬಹುಮತ ಗಳಿಸಲ್ಲ. ಆಗ ನಾವು ನೀವು ಹೊಂದಾಣ್ಕೆ ಮಾಡ್ಕೋಬೇಕಾಯ್ತದೆ' ಅಂದ್ರಂತೆ. ಇದರ ಮಧ್ಯಸ್ಥಗಾರಿಕೆಗೆ ಜನಾನೂ ಬಿಟ್ಟಿದ್ರಂತೆ. ಇಂತೋವೆಲ್ಲ ಮುಚ್ಚುಮರೇಲಿ ನಡೆಯೋವೇಯ. ಅದ ತಿಳ್ಕಂಡು ಕುಮಾರಸ್ವಾಮಿ ಗುಟ್ಟು ಗುಟ್ಟಲ್ಲೇ ಇರಬಾರದ. ಹಿಂಗಿಂಗೆ ಮಾಡ್ತ ಅವ್ನೆ ಅಂತಾವ ಊರಲೆಲ್ಲ ಡಂಗೂರ ಹೊಡುದ್ರಂತೆ. ಇದು ಅವರ ಕಿವಿಗೆ ಬಿದ್ದಾಗ, ಕೆರಳ್ಕೊಂಡ್ಗಿ, ಮೈಕೈಗೆ ಎಣ್ಣೆ ತಿಕ್ಕಿಸಿಕೊಂಡು ಪೈಲ್ವಾನ ಆಗಿಬರಾನ ಅಂತಾವ ಇದ್ರಲ್ಲ ಯಡ್ಯೂರಪ್ನೋರು, 'ಹಿಂಗೆಲ್ಲ ಆಡಂಗಾದ್ನ ಅವ್ನು, ಅವ್ನ ಮೊಕ್ಕ ಮಸಿ ಬಳಿಯೋ ಹಂಗೆ ಜಡೀರಿ ಒಂದು ಜಾಹೀರಾತ' ಅಂದಿರಬೇಕು. 'ಚಿಂತನ ಮಂಥನ' ಪಾರ್ಟಿಗಳೆಲ್ಲ ಸೇರಿ ಜಾಹೀರಾತ ಬರ್ದ್ರೊ. ಯಡ್ಯೂರಪ್ನೋರ ಕೈಲಿ ರುಜುಗುದ್ದಿಸಿ ಪತ್ರಿಕೇಲಿ ಬರೋ ಹಂಗೆ ನೋಡ್ಕಂಡ್ರೊ. ಇದ್ನೆ ಜನವಾದ ಜನವೆಲ್ಲ ಮೆಲುಕು ಹಾಕ್ತ ಇರೋದು.

ವಾರ್ತಾ ಇಲಾಖೆ ಅಂತಾನೂ ಒಂದದೆ. ಅದು ಜಾಹೀರಾತನ್ನ ಕೊಡ್ತದೆ ಅನ್ನೋದ ಜನಕೆಲ್ಲ ತಿಳ್ಯೋ ಹಂಗೆ ಮಾಡಿದ್ರಲ್ಲ ಅವರ ತಾರೀಫು ಕೊಡದೆ ಕೆಲವು ತಲೆ ಕೆಟ್ಟೋವು 'ಇದು ಅವರಿಬ್ಬರ ಜಗಳ. ವೈಯಕ್ತಿಕ ವಿಷಯಕ್ಕೆ ಜನಗಳ ತೆರಿಗೆ ದುಡ್ನ ಹೆಂಗೆ ಖರ್ಚು ಮಾಡಿದ್ರಿ' ಅಂತ ಕೊಶ್ಚನ್ ಮಾಡ್ತ ಅವೆ. 'ಕರ್ನಾಟಕದ ಭಾಜಪದಲ್ಲಿ ಅವನೊಬ್ನೆ ಗಂಡಸು ಅಂತ ಇರೋದು. ಅವುನ್ಗೇ ಇದ ಮಾಡಕ್ಕೆ ಹೊಂಟವ್ರೆ ಅಂದ್ರೆ ಸರ್ಕಾರಕ್ಕೇ ಮಾಡಕ್ಕೆ ಹೊಂಟವ್ರೆ ಅಂತಾನೆ ಅರ್ಥ. ಅದ್ಕೆ ಸರ್ಕಾರ ಜಾಹೀರಾತ ಕೊಟ್ಟದೆ' ಅಂತ ಅಶೋಕ ತರದೋರು ಹೇಳ್ತಾ ಇದ್ರೂ ಮೊಕದಲ್ಲಿ ಮಾತ್ರ ಕಳೇನೆ ಇರ್ಲಿಲ್ಲವಂತೆ. ಇವನ ಸಾವಾಸ ಮಾಡಿದ್ದೆ ಇಂತೋವ್ನೆಲ್ಲ ತಲೆ ಒಡ್ಡಬೇಕಾಯ್ತಲ್ಲ ಅಂತ ಪೇಚಾಡೋರ ತರ ಇರ್ತದಂತೆ. ಹಂಗಂತ ಅವರ್ನಂದ್ರೆ ಆಗದವರು ಆಡ್ಕೊಳ್ತಾ ಬಿದ್ದವ್ರೆ. ಆಮಾತ ಬುಡಿ. ಎಲ ಎಲಾ ಇದೇನು ಹಿಂಗೆಲ್ಲ ಆಗೋಯ್ತಲ್ಲ, ಹಗ್ಗ ಅಂತ ಹಿಡ್ಕಂಡ್ರೆ ಹಾವಾಯ್ತ ಅದಲ್ಲ ಅಂತ ಭಾಜಪದೋರು, ಗೊಂಬೆ ರಾಮರ ಆಟದಲ್ಲಿ ನಗ್ಸಾಟ್ಕೆ ಅಂತಾನೆ ಕಿಳ್ಳೆಕ್ಯಾತನ್ನ ಬುಡ್ತಾರಲ್ಲ ಹಂಗೆ ಒಬ್ಬನ್ನ ಸಾಕಿಕೊಂಡಿದ್ದಾರಂತಲ್ಲ, ಅವನ್ನ ಬುಟ್ರಂತೆ. ಅವನೇನಂದ ಅಂದ್ರೆ 'ಜಾಹೀರಾತು ಹಣಾನ ಸರ್ಕಾರ ಕೊಡೋಹಂಗಿಲ್ಲ, ಅದೇನಿದ್ರೂ ಪಕ್ಷಾನೆ ಕಟ್ತದೆ' ಅಂದ. 'ಅದೆಂಗಾಯ್ತದೆ ಮಾರಾಯ ಜಾಹೀರಾತ ಕರ್ನಾಟಕ ವಾರ್ತೆ ಹೆಸರಲ್ಲಿ ಬಂದದಲ' ಅನ್ನೋರ್ಗೆ ಅವರೇನೂ ಮಾಡೋಕಾಗಲ್ಲ ಬುಡಿ. 'ಯಾರು ಯಾವ ಜಾಹೀರಾತು ನೀಡಿದ್ರೂ ಭಾಜಪನೇ ಭರಿಸುತ್ತಾ' ಅಂದ್ರೆ 'ಅದೆಂಗಾಯ್ತದ್ರೀ? ಯಡ್ಯೂರಪ್ನೋರಂಗೆ ಪಕ್ಷದ ಬೊಕ್ಕಸಕ್ಕೂ ರಾಜ್ಯದ ಬೊಕ್ಕಸಕ್ಕೂ ಮನಿ ಲೈನ್ ಎಳ್ದಿರ್ತಾರಾ' ಅಂದ್ರೂ ಅನ್ನಬಹುದು.



ಇದರ ಕತೆ ಹಿಂಗಾಯ್ತು. ಇಷ್ಟಕ್ಕೇ ನಿಂತಿಲ್ಲ. ಯಡ್ಯೂರಪ್ನೋರು 'ನೀವು ಹೇಳ್ತಿರೋದೆಲ್ಲ ಸುಪ್ಪಟ್ಟೆ ಸುಳ್ಳು. ನನ್ನ ತೇಜೋವಧೆ ಮಾಡಕೆ ಅಂತ್ಲೆ ಹಿಂಗ್ಮಾಡ್ತಿದೀರಿ. ಇದರ ತೀರ್ಮಾನಾನೂ ಆಗಿಹೋಗ್ಲಿ. ಬನ್ನಿ ಧರ್ಮಸ್ಥಳಕ್ಕೆ ಮಂಜುನಾಥನ ಮೇಲೆ ಆಣೆ ಮಾಡಿ ಇದೇ ಮಾತ ಹೇಳಿ' ಅಂತ ಕುಮಾರಸ್ವಾಮಿಯವರ್ನ ಕರ್ದದೆ ಮಹಾ ಅಪರಾಧ ಅನ್ನೊ ಹಂಗೆ ಹಾರಾಡ್ತ ಬಿದ್ದಿರೋ ಜನಾನೂ ಅವ್ರೆ. 'ಆಣೆ' ಮೂಲ ಹುಡುಕ್ತಾನೂ ಅವ್ರಂತೆ. ಒಂದು ಮೂಲದ ಪ್ರಕಾರ ಯಡ್ಯೂರಪ್ನೋರ ತಲೆಗೆ ಇಂತ ಸೂಕ್ಷ್ಮ ಎಲ್ಲ ಹೊಳೆಯೋಲ್ಲ, ಅದೇನಿದ್ರೂ ಶೋಭಾ ಕರಂದ್ಲಾಜೆ ಅಂತಹ ಮೀನು ತಿನ್ನೋರ ತಲೇಗೆ ಹೊಳೆಯೋದು. ಆಯಮ್ನೆ ಅಂತ ಮಾತ ಇವರ ಬಾಯಲಿ ಕಡ್ಸವ್ರೆ ಅಂತಾರೆ. ಏನಕ್ಕ ಹಿಂಗಿಂಗಂತಲ್ಲ ವಿಚಾರ ಅಂತ ಕೇಳಿದ್ರೆ ಅವ್ರು ಹೂಂ ಅನ್ನೊ ಒಲ್ರು; ಉಹೂಂ ಅನ್ನೊ ಒಲ್ರು; ಈ ವಿಷಯದಲ್ಲಿ ನಾನು ಮಧ್ಯೆ ತಲೆ ತೂರಿಸೋದಿಲ್ಲ, ಎಲ್ಲ ದೇವ್ರೇ ನೋಡ್ಕೋತಾನೆ ಅಂತ ಅಡ್ಡಗೋಡೆ ಮೇಲೆ ದೀಪ ಇಟ್ಟಂಗೆ ಮಾತಾಡ್ತಾರೆ. ಆಯಮ್ಮ ಹೇಳಿದ್ರು ಅಂತಾನೆ ಇಟ್ಕಳಾನ. ಕುಮಾರಸ್ವಾಮಿಯೋರು 'ಶೋಭಾ ಕರಂದ್ಲಾಜೆ ಕೊಡಗಿನಲ್ಲಿ ನೂರಾರು ಎಕರೆ ಎಸ್ಟೇಟ್ ಮಾಡವ್ರೆ. ಕೋಟಿಗಟ್ಟಲೆ ದುಡ್ಡು ಅವರ್ಗೆಲ್ಲಿಂದ ಬಂತು' ಅಂತ ದೂರಿದಾಗ ಅವ್ರು 'ನನ್ಮೇಲೆ ಇಲ್ಲದ್ದು ಸಲ್ಲದ್ದು ಹೇಳಬ್ಯಾಡಿ. ನಾನು ಸಂಘ ಪರಿವಾರದ ಕೂಸು. ಹಂಗೆಲ್ಲ ಮಾಡೋಳಲ್ಲ' ಅಂತಾವ ಕಣ್ಣೀರು ಹಾಕಿದ್ರು. ನಂತರ ಎಸ್ಟೇಟ್ ಇದ್ದದ್ದು ಸಾಬೀತಾಯ್ತು ಬಿಡಿ. ಅದು ಬೇರೆ ಮಾತು. 'ಬೇಕಾದರೆ ಬನ್ನಿ ಧರ್ಮಸ್ಥಳಕ್ಕೆ ಮಂಜುನಾಥನ ಮೇಲೆ ಆಣೆ ಇಡಾನ' ಅಂದಿದ್ರು. ಆಮೇಲೇನಾಯ್ತು? ಅನ್ನೋದೇನೋ ಹಂಗಂದ್ರು. ಆದ್ರೆ ಅವ್ರು ಬರ್ಲಿಲ್ಲ, ಇವರು ಹೋಗ್ಲಿಲ್ಲ, ಆರೋಪ ಸತ್ಯ ಆಗಿದ್ದಾಗ್ಗೆ ಬರೋಕೆ ಚೆಚ್ಚದ. ಈಗ ಬರೋದುಂಟಾ. ಈಗ್ಲೂ ಹಂಗೆ ಆಯ್ತದೆ ಅಂತ ಇಂತಹ ಸೂಚನೆ ಕೊಟ್ಟಿದ್ದರೂ ಕೊಟ್ಟಿರಬಹುದು-ನೀವು ಹಿಂಗಿಂಗೆ ಅನ್ನಿ, ಅವ್ನು ಬರಾಕಿಲ್ಲ ಅಂತಾನೆ. ಆಗ ಜನ ಏನನ್ನತ್ತದೆ. 'ಅಂತ ನ್ಯಾಯಸ್ತ ಆಗಿದ್ರೆ ಹೋಗ್ಬೇಕಾಗಿತ್ತು ಕನಯ್ಯ ಧರ್ಮಸ್ಥಳಕ್ಕೆ. ಒಲ್ಲೆ ಅಂತ ಯಾಕನ್ನೋನು. ಕುಮಾರಸ್ವಾಮಿ ಬುಡೋದೆಲ್ಲ ಬರೀ ಬುರುಡೇಕನ' ಅಂತದೆ ಅಂದಿರಬೇಕು. ಯಡ್ಯೂರಪ್ನೋರ್ಗೆ ಬಲೇ ಖುಷಿ ಆಗಿರ್ಬೇಕು. ಅದೇ ಹುಮ್ಮಸ್ಸಿನಲ್ಲಿ 'ಬಾ ಮಂಜುನಾಥನ ಸನ್ನಿಧಾನಕ್ಕೆ' ಅಂದಿರಬೇಕು. ಕುಮಾರಸ್ವಾಮಿ ಅವರಲ್ಲ ಅವ್ರು ರಂಗೋಲಿ ಕೆಳಗೆ ನುಸುಳೋರು ಅನ್ನೋದ ಅವ್ರು ಕಾಣ್ರು. ಹಿಂಗಿಂಗಾಬೋದು ಅನ್ನೋದ ತಿಳ್ಕಂಡೆ 'ನಾನು ರೆಡಿ' ಅಂದ್ಬುಟ್ರು. ಇಂತ ದಿನ ಅಂತಾನೂ ಸೆಟ್ಲ್ ಆಯ್ತು.

ಇಲ್ಲಿಗೆ ಬಂದು ಒಬ್ಬೆ ಮುಗೀತು. ಹೆಂಗೋ ಏನೋ ಅಂತೂ ಈ ಹಾಳಾದೋರ ಜಗಳ ಸೆಟ್ಲ್ ಆಯ್ತಲ್ಲ ಅನ್ನಿಲ್ಲ, ಅವಮಾನ ಆಗಿದ್ರೆ ನ್ಯಾಯಾಲಯಕ್ಕೆ ಹೋಗಬೇಕಿತ್ತು ದೇವರ ಹತ್ರ ಅಲ್ಲ, ನ್ಯಾಯಸ್ಥಾನದ ಮೇಲೆ ಇವರಿಗೆ ನಂಬಿಕೆಯೇ ಇಲ್ಲ ಅಂತಾರೆ ಕೆಲವರು. ಅಂತೋರ್ಗೆ ನಾನು ಹೇಳುವುದು ಇಷ್ಟೆ. ಯಡ್ಯೂರಪ್ನೋರು ನ್ಯಾಯಸ್ಥಾನವ ಅರ್ದು ಕುಡ್ದಿದಾರೆ ಕಣ್ರಿ. ಅವರ ಮೇಲೆ ಆರೋಪಗಳ ಕಂತೆಕಂತೇನೆ ಇದ್ರೊ ಅಲ್ವಾ, ನ್ಯಾಯಸ್ಥಾನಕ್ಕೂ ಹೋದವಪ್ಪ ಅಲ್ಲೇನಾಯ್ತು ಅಂತ ಊರಿಗೇ ಗೊತ್ತದೆ. ತಡೆ ಆಜ್ಞೆ ಬಂದದೆ. ಇದೂ ಹಂಗೆ ಆಗಬಾರದು ಅಂತಾವ ಅವರು ಮಂಜುನಾಥನ ಹಿಡ್ದವ್ರೆ. ಇದು ನ್ಯಾಯವೇ ಅಲ್ಲವೇನ್ರಿ. ಅಲ್ಲಿರೋರು ಯಾರು? ಅಣ್ಣಪ್ಪ ದೈವ, ಮಂಜುನಾಥ ದೇವರು, ಹೆಗ್ಗೆ ದೇವರು. ಅಣ್ಣಪ್ಪ ಮಂಜುನಾಥನ ಅತ್ಲಾಗಾಕಿ. ಅವೇನು ಮಾತಾಡೊಲ್ಲೊ, ಮೂರನೆಯದು ಮಾತನಾಡುವ ದೇವರು. ಸಾಕ್ಷಿ ಪುರಾವೆ ಏನೂ ಬ್ಯಾಡ. ಅಹವಾಲು ಒಪ್ಪಿಸಿದರೆ ಆಯಿತು. ನ್ಯಾಯ ಹೇಳುತ್ತೆ! ಅಂತೆಲ್ಲ ಹೇಳಿದ್ರೆ ತಲೆಹರಟೆ ಮುಂಡೇವ್ರು 'ಇದೊಂತರ ಕುರ್ಡ ದೊಣ್ಣೆ ಬೀಸಿದಂಗೆ ಅನ್ನಿ. ತಲೆಗಾದ್ರೂ ಬೀಳಬೋದು ತರ್ಕಿಗಾದ್ರೂ ಬೀಳಬೋದು' ಅಂತಾವೆ. ಈ ಪೋಲಿ ಮುಂಡೇವು ಇಷ್ಟಕ್ಕೇ ನಿಲ್ಲಲ್ಲ ಕಣ್ರಿ 'ನ್ಯಾಯಾಲಯಗಳನ್ನೆಲ್ಲ ಮಂಜುನಾಥನ ದೇವಸ್ಥಾನ ಮಾಡಿಬಿಡಿ' ಅಂತಾವಲ್ಲ ದೈವ ದ್ರೋಹಿಗಳು... ಹೇ ಮಂಜುನಾಥ ನೀನೇ ಕಾಪಾಡಪ್ಪ......

ಯಂತ್ರವೇ ಬರ್ನ್ಸ್ ಆಯ್ತು!

ಯಡ್ಡಿ, ಕುಮಾರ ಘೋರ ತಪಸ್ಸು ಮಾಡಿದರು.

ಯಾರು ಹೇಳಿದ್ದು ಸುಳ್ಳು? ಇದರ ನಿರ್ಧಾರ ಆಗಬೇಕಿತ್ತು.

ದೇವರೇ ಅಂಪೈರು.

ದೇವ ಪ್ರತ್ಯಕ್ಷ ಆದ. ಸುಳ್ಳು ಅಳೆಯುವ ಯಂತ್ರ ನೀಡಿದ.

ಇದು ಖ್ಯಾತ ವ್ಯಂಗ್ಯಚಿತ್ರಕಾರ ಪಿ. ಮಹಮ್ಮದ್ ಅವರ ಇತ್ತೀಚಿನ ವ್ಯಂಗ್ಯ ಚಿತ್ರ.

ಇಲ್ಲಿಗೇ ಅದು ಮುಗಿಯಲಿಲ್ಲ, ಮುಂದಕ್ಕೆ ಇನ್ನೂ ಇದೆ.

ಕುಮಾರ ಕೈಗೆ ಯಂತ್ರ ಬಂತು.

ಯಂತ್ರದ ಮುಳ್ಳು ಚಾಲನೆ ಆಯಿತು. ಏರಿತು, ಏರಿತು ಮುಳ್ಳು ಕೊನೆಯ ಅಂಚಿಗೆ ಬಡಿದು ನಿಂತಿತು.

ಯಡ್ಡಿ ಸರದಿ. ಯಂತ್ರವನ್ನು ತಮ್ಮ ಅಂಗೈ ಮೇಲೆ ಇಟ್ಟುಕೊಂಡರು.

ಸುಳ್ಳುಮಾಪನ ಯಂತ್ರವೇ ಬರ್ನ್ಸ್ ಆಯಿತು!

ಮೂರ್ಛೆ ಹೋದ!

ಜೂನ್ 27 ಬೆಳಗ್ಗೆ ಹನ್ನೊಂದರ ಸಮಯ.

ಧರ್ಮಸ್ಥಳ ಕ್ಷೇತ್ರ.

ಶ್ರೀ ಕ್ಷೇತ್ರ ಅಂದರೆ ಸಾಮಾನ್ಯವೆ?

ಸುಳ್ಳು ಹೇಳಿದವರು ಮೂರ್ಛೆ ಹೋಗುವುದು ಖಚಿತ.

ಯಡ್ಡಿ ಕುಮಾರ ನ್ಯಾಯನಿರ್ಣಯ ಸಮಯ ಬಂದಿತು.

'ನಾನು ಹೇಳಿರುವುದೆಲ್ಲ ಸತ್ಯ' ಅಂದರು ಕುಮಾರ.

'ನೀವು ಹೇಳಿರುವುದೆಲ್ಲ ಸುಳ್ಳು' ಅಂದರು ಯಡ್ಡಿ.

ಯಾರಾದರೂ ಮೂರ್ಛೆ ಹೋಗಲೇಬೇಕಲ್ಲ? ಇಲ್ಲದಿದ್ದಲ್ಲಿ ದೈವ ಸನ್ನಿಧಿಗೇ ಅವಮಾನ!

ಅದೂ ಆಯಿತು. ದೇವರ ಮಹಾತ್ಮೆಯೇ ಅಂತಹದ್ದು.

ಮೂರ್ಛೆ ಹೋದವರು ಯಾರು?

ಯಡ್ಡಿಯೊ? ಕುಮಾರನೊ?

ಇವರ್‍ಯಾರೂ ಅಲ್ಲ,

ಇವರ ಮಾತನ್ನು ಕೇಳಿಸಿಕೊಂಡ ದೈವ!

ಢೋಂಗಿಗಳನ್ನು ಬಯಲು ಮಾಡಿ ಎಚ್ಚರ ನೀಡುವ ಪತ್ರಿಕೆ

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಈಗ ಅಧಿಕಾರದಲ್ಲಿರುವುದು ಬಿಜೆಪಿ ಪಕ್ಷ. ಆದರೆ ಮಂಗಳೂರು ನಗರದ ಬೀದಿ ಬದಿಯ ವೆಂಡರ್‌ಗಳಲ್ಲಿ ಹೆಚ್ಚಿನವರು ಅಲ್ಪ ಸಂಖ್ಯಾತ ಕೋಮಿಗೆ ಸೇರಿದವರು ಹಾಗೂ ದಲಿತರು. ಒಂದು ವೇಳೆ ಈ ವೆಂಡರ್‌ಗಳಲ್ಲಿ ಹೆಚ್ಚಿನವರು ಮೇಲ್ಜಾತಿ ಹಿಂದೂಗಳಾಗಿದ್ದರೆ ಮ.ನ.ಪಾ. ಇಷ್ಟೊಂದು ಆಸ್ಥೆಯಿಂದ ಅವರನ್ನು ತೆರವುಗೊಳಿಸಿ ನಗರದ ಸೌಂದರ್ಯ ಹೆಚ್ಚಿಸುವಲ್ಲಿ ಆಸಕ್ತಿ ವಹಿಸುತ್ತಿತ್ತೇ? ಎಂಬುದು ಹೆಚ್ಚಿನ ಮಂಗಳೂರಿಗರ ಪ್ರಶ್ನೆ.

ಈ ಏಕಾಏಕಿ ಕಾರ್ಯಾಚರಣೆಯ ಹಿಂದೆ ಬೀದಿ ವ್ಯಾಪಾರಿಗಳಿಂದ ತೀವ್ರ ಸ್ಪರ್ಧೆ ಎದುರಿಸುತ್ತಿರುವ ದೊಡ್ಡ ವ್ಯಾಪಾರಿಗಳ ಕೈವಾಡವಿರುವಂತಿದೆ. ಈ ಬಡ ಬೀದಿ ವ್ಯಾಪಾರಿಗಳ ಕುಟುಂಬದವರಿಗೆ ಒಪ್ಪೊತ್ತಿನ ಊಟ ಸಿಗುವುದು ಆಯಾ ದಿನ ವ್ಯಾಪಾರ ಮಾಡಿದರೆನೇ. ಜನರ ಟೀಕೆಗಳಿಗೆ ಹೆದರಿ ಮ.ನ.ಪಾ. ಈಗ ತೋರಿಕೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿದೆ, ಆದರೆ ಯಾರೂ ಗ್ರಾಹಕರು ಓಡಾಡದ ಜಾಗದಲ್ಲಿ! ಅಲ್ಲಿ ಹೇಗೆ ವ್ಯಾಪಾರ ಸಾಧ್ಯ?

ಭಾರತದಲ್ಲಿ ದೇವರು-ಧರ್ಮ-ಯೋಗ-ಸಂಸ್ಕೃತಿಯ ಹೆಸರಲ್ಲಿ ನಡೆಯುವ ವ್ಯಾಪಾರವೀಗ ಬಿಲಿಯನ್ ಡಾಲರ್ ಉದ್ಯಮವಾಗಿ ಬೆಳೆದಿದೆ ಎಂಬುದಕ್ಕೆ ಸಾಕ್ಷಿ ಬೆಂಗಳೂರಿನ ಇಸ್ಕಾನ್, ಬಾಬಾ ರಾಮ್‌ದೇವ್, ರವಿಶಂಕರ ಗುರೂಜಿ, ಅಮೃತಾನಂದಮಯಿ ಅಮ್ಮ ಇತ್ಯಾದಿ. ಇವರೆಲ್ಲಾ ಸರ್ಕಾರದಿಂದ ಎಲ್ಲಾ ಸೌಲಭ್ಯ ಪಡೆದೂ ಒಂದು ಪೈಸೆ ತೆರಿಗೆ ಪಾವತಿಸಬೇಕಾಗಿಲ್ಲ, ಈರುಳ್ಳಿ-ಬೆಳ್ಳುಳ್ಳಿ ತಿನ್ನುವುದರಿಂದ ತಾಮಸಗುಣ ಮನುಷ್ಯರಲ್ಲಿ ಮನೆ ಮಾಡುತ್ತದೆ ಎಂದು ಹೇಳುವ ಹರೇ ಕೃಷ್ಣ-ಹರೇ 'ರಾಮ್' ಕಂಪನಿಯವರು ಈರುಳ್ಳಿ-ಬೆಳ್ಳುಳ್ಳಿ ತಿನ್ನದಿದ್ದರೂ ತಮ್ಮಲ್ಲಿ ಈ ತಾಮಸ ಗುಣ ರಕ್ತಗತವಾಗಿ ಬಂದಿದೆ ಎಂಬುದನ್ನು ತಮ್ಮ ಮುಂಬೈ ಬಂಧುಗಳೊಂದಿಗೆ ಬೀದಿಯಲ್ಲಿ ಹೊಡೆದಾಡಿ ಅವರೇ ಸಾಬೀತುಪಡಿಸಿದರು. ಕೃಷ್ಣಭಕ್ತಿಯ ಹೆಸರಲ್ಲಿ ಲಕ್ಷ್ಮೀಪ್ರೀತಿ ಈ ಕೌರವರದೆಲ್ಲಾ!

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ಗೌರಿ ಲಂಕೇಶ್ ಪತ್ರಿಕೆ ಪ್ರತಿ ಬಾರಿಯೂ ನಮ್ಮನ್ನು ಅವಿವೇಕದಿಂದ ಎಚ್ಚರಿಸುತ್ತಲೇ ಬರುತ್ತಿದೆ. ಇದಕ್ಕೆ ಮತ್ತೊಂದು ಉದಾಹರಣೆ ಈ 420 ಬಾಬಾ ರಾಮದೇವ್ ವಿಚಾರ. ಪತ್ರಿಕೆಯು ಜ್ಯೋತಿಷಿಗಳ ಬಗ್ಗೆ ನಮ್ಮನ್ನು ಎಚ್ಚರಿಸಿತು, ಸತ್ಯ ಸಾಯಿಬಾಬಾನ ವಿಚಾರದಲ್ಲಿ ನಮ್ಮ ಕಣ್ಣು ತೆರೆಸಿತು. ಈ ರಾಮದೇವನ ವಿಚಾರದಲ್ಲಿ ನಿಜಕ್ಕೂ ನಾವು ಪತ್ರಿಕೆ ವರದಿ ಮಾಡಿರುವ ಹಾಗೆ ಪೆದ್ದ ಶಿಖಾಮಣಿಗಳೇ ಆಗಿದ್ದೆವು. ರಾಮದೇವ್ ಟಿವಿಯಲ್ಲಿ ಏನೇ ಬೊಗಳಿದರೂ ಅದನ್ನು ಅಕ್ಷರಶಃ ನಂಬುತ್ತಿದ್ದೆವು. ಇವನ ವಿಚಾರದಲ್ಲೂ ಸಹ ಪತ್ರಿಕೆ ನಮ್ಮನ್ನು ಎಚ್ಚರಿಸಿದೆ. ಅದಕ್ಕಾಗಿ ಪತ್ರಿಕೆಗೆ ಧನ್ಯವಾದಗಳು.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ನಿಜಕ್ಕೂ ದೇಶಕ್ಕಾಗಿ ಹೋರಾಟ ಮಾಡುವವರು ಬಿಸಿಲು ಮಳೆಯನ್ನು ಲೆಕ್ಕಿಸದೆ ಹೋರಾಟ ಮಾಡುತ್ತಾರೆ. (ಉದಾ: ಹಜಾರೆ ಹಾಗೂ ಗಾಂಧೀಜಿಯವರ ಹೋರಾಟ). ಆದರೆ ರಾಮದೇವನ ಹೈಟೆಕ್ ಪ್ರತಿಭಟನೆಯನ್ನು ದೇಶದ ಜನರು ಹಜಾರೆಯವರ ಹೋರಾಟದೊಂದಿಗೆ ತುಲನೆ ಮಾಡಿದರೆ ಈ ಬಾಬಾನ ನಿಜ ಬಣ್ಣ ತಿಳಿಯುತ್ತದೆ. ಆದ್ದರಿಂದ ಈ ಪ್ರತಿಭಟನೆಯನ್ನು ಪ್ರಾಣಾಯಾಮ ಅಥವಾ ಯೋಗಾಸನದ 420(ನೇ) ವಿಧಾನ ಎಂದು ಭಾವಿಸಿದರೆ ಒಳ್ಳೆಯದು.

-ಶಂಕರ ಎಸ್., ಮೈಸೂರು

ಇಂಡಿಯಾದ ಜನಸಮುದಾಯವಿಂದು ಒಂದು ರೀತಿಯ ಶವಾಸನ ಸ್ಥಿತಿಯಲ್ಲಿದೆ. ಉಸಿರಾಟ ಕ್ರಿಯೆ ಮತ್ತು ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ಇನ್ನಾವುದೇ ಜೈವಿಕ ಕ್ರಿಯೆಗಳನ್ನು ಅದು ನಡೆಸುತ್ತಿರುವ ಯಾವ ಲಕ್ಷಣಗಳೂ ಕಂಡುಬರುತ್ತಿಲ್ಲ, ಪ್ರಭುತ್ವಕ್ಕೆ ಯಾವುದೇ ಪ್ರಶ್ನೆಗಳನ್ನೂ ಕೇಳದ ಮತ್ತು ತನ್ನನ್ನು ತಾನು ವಿಮರ್ಶಿಸಿಕೊಳ್ಳಲಾಗದಂತಹ ನಿರ್ಲಜ್ಜ ನಿರಾಸಕ್ತ ಮನಸ್ಥಿತಿಗೆ ನಮ್ಮ ಸಮಾಜ ಬಂದು ನಿಂತಿದೆ. ಸಮುದಾಯವೊಂದರ ಇಂತಹ ನಿದ್ರಾಸ್ಥಿತಿಯನ್ನು ತನ್ನ ಹಿತಕ್ಕೆ ಉಪಯೋಗಿಸಿಕೊಳ್ಳಲು ಧರ್ಮಗುರುಗಳು, ರಾಜಕಾರಣಿಗಳು ಯಾವತ್ತಿಗೂ ಕಾಯುತ್ತಿರುತ್ತಾರೆ.

ಬಾಬಾ ರಾಮದೇವ್ ಎಂಬ ವಂಚಕ ಯೋಗ (ಧರ್ಮ)ಗುರು, ಸಂಘ ಪರಿವಾರದ ಬೆಂಬಲದೊಂದಿಗೆ ನಮ್ಮ ಸಮಾಜದ ನಾಯಕತ್ವವನ್ನು ವಹಿಸಿಕೊಳ್ಳಲು ಪ್ರಯತ್ನಿಸಿದ್ದು ಸಹ ಇದೇ ರೀತಿಯಲ್ಲಿ.

ಇವತ್ತು ನಮ್ಮ ಸಮಾಜದ ಇಂತಹ ದೈನೇಸಿ ಸ್ಥಿತಿಯನ್ನು ಬಳಸಿಕೊಂಡು ಪ್ರಭುತ್ವವನ್ನು ಸ್ಥಾಪಿಸಲು ಸಂಘಪರಿವಾರ ಬಾಬಾ ರಾಮದೇವನಂತಹ ವಂಚಕನನ್ನು ಭ್ರಷ್ಟಾಚಾರದಂತಹ ಸಮಕಾಲೀನ ಸಮಸ್ಯೆಯ ವಿರುದ್ಧ ಹೋರಾಡಲು ಮುಂಚೂಣಿಯಲ್ಲಿ ನಿಲ್ಲಿಸಿದೆ. ಇಂತಹ ವಂಚಕರ ಸತ್ಯಾಗ್ರಹಗಳೆಂಬ ನಾಟಕಗಳು ಯಶಸ್ವಿಯಾಗ ಬಾರದೆಂದರೆ ವ್ಯಕ್ತಿಗತ ಹೋರಾಟವನ್ನು ತಿರಸ್ಕರಿಸಿ, ಸಂಘಟನೆಗಳ ಮೂಲಕ ಹೋರಾಡುವ ಶಕ್ತಿಯನ್ನು ನಮ್ಮ ಮಧ್ಯಮವರ್ಗ ಹೊಂದಲು ಪ್ರಯತ್ನಿಸಬೇಕಿದೆ. ಇಲ್ಲದಿದ್ದಲ್ಲಿ ನಾವು ಸರ್ವಾಧಿಕಾರಿಯೊಬ್ಬನ ಅಥವಾ ಧರ್ಮವೊಂದರ ಗುಲಾಮರಾಗುವ ಅಪಾಯ ತಪ್ಪಿದ್ದಲ್ಲ.

-ಕು.ಸ. ಮಧುಸೂದನ್, ರಂಗನೇಹಳ್ಳಿ, ಚಿಕ್ಕಮಗಳೂರು

ಜೂನ್ 22 ರ ಸಂಚಿಕೆಯಲ್ಲಿ ಮಂಜುನಾಥ್ ಲತಾ ಅವರು ದಲಿತ ಕವಿ ಸಿದ್ದಲಿಂಗಯ್ಯನವರ ಬಗ್ಗೆ ಬರೆಯುತ್ತಾ "ಅವರ ಅಂದಿನ 'ಆಸ್ಫೋಟಕ' ಚಿಂತನೆಗಳನ್ನು ಈಗ ನಾವು ನಿರೀಕ್ಷಿಸಲೂಬಾರದು. ಅವರು ಬಲಪಂಥೀಯ,

'ಐ ಯಾಮ್ ಸಾರಿ ಮತ್ತೆ ಪ್ರೀತ್ಸೋಣ ಬನ್ನಿ' ಎಂಬ ಒಂದು ಫರ್ಲಾಂಗ್ ಉದ್ದದ ಹೆಸರಿನ ಚಿತ್ರ ಒಂದೇ ವಾರಕ್ಕೆ ಥಿಯೇಟರ್‌ನಿಂದ ಎತ್ತಂಗಡಿಯಾಗುತ್ತಿರುವುದು ಈಗ ಗಾಂಧಿ ನಗರದಲ್ಲಿ ಸುದ್ದಿ ಮಾತ್ರವಲ್ಲ, ವಿವಾದವೂ ಆಗಿದೆ!

ಪ್ರೇಮ್ ನಾಯಕನಾಗಿ ನಟಿಸಿರುವ ಈ ಚಿತ್ರ ಚೆನ್ನಾಗಿದೆ. ಹಿಂದಿ ಸೀರಿಯಲ್‌ಗಳಲ್ಲಿ ನಟಿಸುತ್ತಿದ್ದ ಮುಂಬೈನ ಕರಿಷ್ಮಾ ತಮನ್ನ ಎಂಬಾಕೆ ಈ ಚಿತ್ರದ ನಾಯಕಿ. ಆಕೆಗೆ ಬೆಳ್ಳಿ ಪರದೆಯಲ್ಲಿ ಇದೇ ಮೊದಲ ಅನುಭವ. ಜೊತೆಗೆ ಕನ್ನಡದ ಬೆಡಗಿ ಸಂಜನಾ ಪ್ರಮುಖ ಪಾತ್ರದಲ್ಲಿದ್ದಾಳೆ. ವಿಮರ್ಶಕರೆಲ್ಲ ಈ ಚಿತ್ರವನ್ನು ಹಾಡಿಹೊಗಳಿದ್ದಾರೆ. ಆದರೆ ಪ್ರೇಕ್ಷಕ ಮಹಾಪ್ರಭು ಮಾತ್ರ ಮೊದಲ ದಿನದಿಂದಲೇ ಈ ಚಿತ್ರದ ಬಗ್ಗೆ ನಿರಾಸಕ್ತಿ ತೋರಿಸಿದ್ದಾನೆ!

ಈ ಚಿತ್ರದ ನಿರ್ಮಾಪಕ ಮತ್ತು ನಿರ್ದೇಶಕ ರವೀಂದ್ರ. ಇದು ಅವರ ಚೊಚ್ಚಲ ಪ್ರಯತ್ನ. ಚಿತ್ರ ಬಿಡುಗಡೆಯಾದ ಮೊದಲ ದಿನದಿಂದ ಥಿಯೇಟರ್ ಬಿಕೋ ಎನ್ನುತ್ತಿದ್ದದ್ದನ್ನು ನೋಡಿ ರವೀಂದ್ರ ಅಪ್‌ಸೆಟ್ ಆದರು. ಮೂರೇ ದಿನಕ್ಕೆ ತನ್ನ ಚಿತ್ರದ ಪ್ರದರ್ಶನವನ್ನು ನಿಲ್ಲಿಸಿ ಎಂದು ಥಿಯೇಟರ್ ಮಾಲೀಕರಿಗೆ ಪತ್ರಿಕಾಗೋಷ್ಠಿ ಮುಖಾಂತರ ಮನವಿ ಮಾಡಿ ಪತ್ರಕರ್ತರನ್ನು, ಸಿನಿಮಾದವರನ್ನು, ಥಿಯೇಟರ್ ಮಾಲೀಕರನ್ನು ಮತ್ತು ಪ್ರೇಕ್ಷಕರನ್ನು ಗೊಂದಲಕ್ಕೆ ಈಡುಮಾಡಿದರು.

ಹಾಗೆ ನೋಡಿದರೆ ಆರಂಭದಿಂದಲೂ ರವೀಂದ್ರ ಒಂದಲ್ಲ ಒಂದು ಸುದ್ದಿಯನ್ನು ಮಾಡುತ್ತಲೇ ಬಂದವರು. ಚಿತ್ರ ಒಂದೂವರೆ ವರ್ಷದ ಹಿಂದೆ ಆರಂಭವಾದರೂ ವರ್ಷವಿಡೀ ಸುದ್ದಿಯಲ್ಲಿರುತ್ತಿತ್ತು. ಮುಖ್ಯವಾಗಿ ನಾಯಕಿ ಮತ್ತು ನಾಯಕ ಲಿಪ್‌ಲಾಕ್ ಮಾಡಿ ಕಿಸ್ ಮಾಡಿದ್ದಾರೆ ಎಂಬುದು ಈ ಚಿತ್ರಕ್ಕೆ ಭಾರೀ ಪ್ರಚಾರ ನೀಡಿತ್ತು. ಕೊನೆಗೆ ನಾಯಕಿಯೂ ತಾನು ಕಿಸ್ ಮಾಡಿಲ್ಲ, ನಾಯಕನೂ ತಾನು ಕಿಸ್ ಮಾಡಿಲ್ಲ ಎಂದು ಪಟಗಟ್ಟಲೇ ಸಂದರ್ಶನ ಕೊಡಲಾರಂಭಿಸಿದರು.

ವಿಶೇಷವೆಂದರೆ ಈ ಕಿಸ್ಸಿಂಗ್ ಪುರಾಣ ಕೇವಲ ಎರಡು ಇಂಗ್ಲಿಷ್ ಪತ್ರಿಕೆಗಳಿಗೆ ಮಾತ್ರ ಸೀಮಿತವಾಗಿತ್ತು, ಕನ್ನಡ ಪತ್ರಿಕೆಗಳು ಹೆಚ್ಚಾಗಿ ಆ ಬಗ್ಗೆ ಬರೆಯಲೇ ಇಲ್ಲ.

ಇದಾದ ನಂತರ ಚಿತ್ರದ ನಾಯಕಿ ಕರಿಷ್ಮಾಗೂ, ನಿರ್ದೇಶಕ ರವೀಂದ್ರನಿಗೂ ಎರಡನೇ ಸುತ್ತಿನ ಜಗಳ ಆರಂಭವಾಯಿತು. "ನನ್ನನ್ನು ನಾಯಕಿ ಎಂದು ಕರೆದು ಬೇರೆ ಪಾತ್ರಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ನಾನು ಕೋರ್ಟ್ ಮೆಟ್ಟಿಲೇರುವೆ. ನಾನು ಚಿತ್ರ ವೀಕ್ಷಿಸದೆ ಚಿತ್ರ ಬಿಡುಗಡೆಗೆ ಅವಕಾಶ ಕೊಡುವುದಿಲ್ಲ" ಎಂದು ನಾಯಕಿ ಕರಿಷ್ಮಾ ಗುಡುಗಿದಳು. ಇದಕ್ಕೆಲ್ಲ ಕಾರಣ ರವೀಂದ್ರ ತಮ್ಮ ಚಿತ್ರದ ನಾಯಕಿ ಸಂಜನಾ ಎಂದು ಹೇಳಿದ್ದು. ಇವೆಲ್ಲ ನಿರ್ದೇಶಕರ ಪಬ್ಲಿಸಿಟಿ ಸ್ಟಂಟ್ ಎಂದು ಗೊತ್ತಾಗುವ ಹೊತ್ತಿಗೆ ನಾಯಕಿಯ ಜೀವ ಹಾರಿಹೋಗುವುದೊಂದೇ ಬಾಕಿ ಇತ್ತು.



ಚಿತ್ರ ಬಿಡುಗಡೆಯಾಗುವ ಮುನ್ನ ರವೀಂದ್ರ ಮತ್ತೊಂದು ಜಾಹೀರಾತು ನೀಡಿ ಪ್ರೇಕ್ಷಕರಲ್ಲಿ ಗೊಂದಲಹುಟ್ಟಿಸಿದರು. ಅದೇನೆಂದರೆ ಶ್ರೀನಗರ ಕಿಟ್ಟಿ ಈ ಚಿತ್ರದ ಹೀರೋ ಆಗಿದ್ದರೆ ಕಥೆಯೇ ಬೇರೆ ಆಗುತ್ತಿತ್ತು.... ಎಂಬ ಅರ್ಥ ನೀಡುವ ಜಾಹೀರಾತನ್ನು ಪ್ರಕಟಿಸಿದರು. ಕಿಟ್ಟಿ ಅಭಿಮಾನಿಗಳು ಈ ಚಿತ್ರವನ್ನು ನೋಡುವಂತಾಗಲಿ ಎಂಬುದೇ ನಿರ್ದೇಶಕರ ಸೂಪರ್ ಐಡಿಯಾ! ಪಾಪ ಈ ಐಡಿಯಾ ಕೂಡಾ ಸೂಪರ್ ಫ್ಲಾಪ್ ಆಯಿತು.

ಈಗ ಚಿತ್ರ ಬಿಡುಗಡೆಯಾದ ಕೂಡಲೇ ಒಂದು ವಾರ ಕಾಯುವ ಬದಲು ಮೂರೇ ದಿನಕ್ಕೆ ಮತ್ತೊಂದು ವಿವಾದವನ್ನು ರವೀಂದ್ರ ಹುಟ್ಟುಹಾಕಿದರು. ಅದಕ್ಕೆ ಕಾರಣ ಹೀಗಿದೆ...

ಒಟ್ಟು ನಲ್ವತ್ತೆಂಟು ಥಿಯೇಟರ್‌ಗಳಲ್ಲಿ ಚಿತ್ರವನ್ನು ಬಿಡುಗಡೆ ಮಾಡಲಾಗಿತ್ತು, ಈಗ ಒಂಭತ್ತು ಥಿಯೇಟರ್‌ಗಳಲ್ಲಿ ಮಾತ್ರ ಎರಡನೇ ವಾರ ಮುಂದುವರೆಯಲು ಅವಕಾಶವಿದೆ. ಉಳಿದೆಲ್ಲ ಥಿಯೇಟರ್‌ಗಳಲ್ಲಿ ಪ್ರೇಕ್ಷಕರ ಕೊರತೆಯಿಂದಾಗಿ ಚಿತ್ರವನ್ನು ತೆಗೆಯಬೇಕಾಗಿದೆ. ಅದರ ಬದಲಿಗೆ ತತ್‌ಕ್ಷಣವೇ ಎಲ್ಲಾ ಥಿಯೇಟರ್‌ಗಳಲ್ಲಿ ತನ್ನ ಚಿತ್ರದ ಪ್ರದರ್ಶನವನ್ನು ನಿಲ್ಲಿಸಿಬಿಡಿ ಎಂದು ಪತ್ರಿಕಾಗೋಷ್ಠಿ ಕರೆದು ರವೀಂದ್ರ ಸುದ್ದಿ ಮಾಡಿದರು. ಇದೊಂದು ರೀತಿಯಲ್ಲಿ ತಮಾಷೆಯಾಗಿ ಕಂಡಿತೇ ವಿನಃ ಯಾರೂ ಆತನ ಈ ಕ್ರಮದ ಬಗ್ಗೆ ಸಿಂಪಥಿ ತೋರಿಸಲಿಲ್ಲ, ಏಕೆಂದರೆ ಥಿಯೇಟರ್‌ಗಳಿಗೆ ಪ್ರೇಕ್ಷಕ ಬಾರದಿದ್ದಲ್ಲಿ, ಥಿಯೇಟರ್ ಖಾಲಿ ಹೊಡೆಯುತ್ತಿದ್ದಲ್ಲಿ, ಚೇಂಬರ್ ಬೇರೆ ಚಿತ್ರದ ಬಿಡುಗಡೆಗೆ ಅವಕಾಶ ಮಾಡಿಕೊಡಲೇಬೇಕಲ್ಲವೇ?

ತಮಾಷೆಯೆಂದರೆ ಈ ತರಹ ಪತ್ರಿಕಾಗೋಷ್ಠಿ ಕರೆದದ್ದು ನಾಯಕ ನಟ ಪ್ರೇಮ್‌ಗೆ ಗೊತ್ತೇ ಇರಲಿಲ್ಲವಂತೆ! ಹಾಗಂತ ಒಂದು ವೇಳೆ ಚಿತ್ರ ಎತ್ತಂಗಡಿಯಾದರೆ ಪ್ರೇಮ್ ಅಭಿಮಾನಿಗಳಿಗೆ ಬೇಸರವಾಗುತ್ತಿರಲಿಲ್ಲ. ಅದಕ್ಕೆ ಕಾರಣ ಇಷ್ಟೇ: ಅದೇ ಥಿಯೇಟರ್‌ಗಳಲ್ಲಿ ಅದೇ ಪ್ರೇಮ್ ನಟಿಸಿರುವ 'ಧನ್...ಧನಾ...ಧನ್' ಚಿತ್ರ ಬಿಡುಗಡೆಗೆ ಸಕಲ ತಯ್ಯಾರಿ ನಡೆಸಿದೆ. ಈಗ ಈ ಚಿತ್ರ ಮುಂದಿನ ವಾರ ಬಿಡುಗಡೆಯಾಗುವುದು ಶತಸ್ಸಿದ್ಧ.


ಈ ಚಿತ್ರದ ಜಾಹೀರಾತು ಕೂಡಾ ಒಂದು ರೀತಿಯಲ್ಲಿ 'ನೀಲಿ ಚಿತ್ರ'ದ ತರಹ ಇದ್ದದು ಪ್ರೇಕ್ಷಕರಿಗೆ ಇದರ ಬಗ್ಗೆ ಡೌಟ್ ಬಂತು. ಇಡೀ ಪೋಸ್ಟರ್ ಕೆಂಪುಬಣ್ಣ, ಮಧ್ಯೆ ಲವ್‌ಸಿಂಬಲ್. ಅದರೊಳಗೆ ಚಿತ್ರದ ಟೈಟಲ್. ಅದೂ ಅರ್ಧ ಇಂಗ್ಲಿಷ್ ಅರ್ಧ ಕನ್ನಡದಲ್ಲಿ! ಟೈಟಲ್ ಪಕ್ಕದಲ್ಲೇ ನಾಯಕ ಪ್ರೇಮ್‌ನ ಅರೆಬೆತ್ತಲೆ ಫೋಟೊ! ಇದನ್ನೆಲ್ಲ ನೋಡಿದ ಮೇಲೆ ಕುಟುಂಬದ ಯಾವ ಸದಸ್ಯ ತಾನೇ ಥಿಯೇಟರ್‌ಗೆ ಬರುವ ಧೈರ್ಯ ತೋರುತ್ತಾನೇ?

ಇದು 'ಐ ಯಾಮ್....' ಚಿತ್ರದ ಪ್ರಚಾರ ಮತ್ತು ಬಿಡುಗಡೆಗೆ ಸಂಬಂಧಪಟ್ಟ ಗಿಮಿಕ್‌ಗಳ ಕತೆಗಳು. ಹಾಗೆ ನೋಡಿದರೆ ಈ ಚಿತ್ರ ಖಂಡಿತವಾಗಿಯೂ ಕೆಟ್ಟದಾಗೇನೂ ಇರಲಿಲ್ಲ, ಹಿಂದಿ ಚಿತ್ರದ ಪ್ರೇಕ್ಷಕ ಒಪ್ಪುವಂತಹ ಕಥಾವಸ್ತು ಹೊಂದಿರುವ ಈ ಚಿತ್ರ ಬಾಲಿವುಡ್ ಶೈಲಿಯಲ್ಲಿ ಅದ್ದೂರಿಯಾಗಿ ಮತ್ತು ಕಲರ್‌ಫುಲ್ ಆಗಿ ಮೂಡಿ ಬಂದಿದೆ. ಚಿತ್ರದ ನಿರೂಪಣೆಯಲ್ಲಿ ಬಿಗಿಯಾದ ಹಿಡಿತ ಸಾಧಿಸಿದ ರವೀಂದ್ರ ನಿಜಕ್ಕೂ ಚೊಚ್ಚಲ ಪ್ರಯತ್ನದಲ್ಲಿ ಗೆದ್ದಿದ್ದಾರೆ. ಆದರೆ ಬಹುಶಃ ಅವರ ಪ್ರಚಾರದ ವೈಖರಿ, ಗೊಂದಲಗಳೇ ಅವರ ಚಿತ್ರಕ್ಕೆ ಮುಳುವಾಗಿರಬಹುದು. ಅತಿಯಾದ ಪ್ರಚಾರ ಒಂದು ಒಳ್ಳೆಯ ಸಿನಿಮಾಕ್ಕೆ ಹೇಗೆ ಮುಳುವಾಗುತ್ತದೆ ಎಂಬುದಕ್ಕೆ ಈ ಚಿತ್ರ ಸಾಕ್ಷಿ ಎಂಬಂತಿದೆ.

ಐ ಯಾಮ್ ಸಾರಿ ಎತ್ತಂಗಡಿಯ ವಿವಾದ



ರ್ಯಾಂಬೋ ಡೈರೆಕ್ಟರ್



ಕನ್ನಡ ಚಿತ್ರರಂಗಕ್ಕೆ ಶರಣ್ ಎಂಬ ಹೊಸ ನಿರ್ದೇಶಕ ಮತ್ತು ನಾಯಕ ನಟನ ಆಗಮನವಾಗಿದೆ. ಈ ಶರಣ್ ಬೇರೆ ಯಾರೂ ಅಲ್ಲ, ಕಳೆದ ಹಲವಾರು ವರ್ಷಗಳಿಂದ ಹಾಸ್ಯ ಪಾತ್ರಗಳಲ್ಲಿ ನಟಿಸುವ ಮೂಲಕ ಕನ್ನಡ ಪ್ರೇಕ್ಷಕರನ್ನು ರಂಜಿಸಿರುವ ಕಲಾವಿದ.

ಈತ ನಿರ್ದೇಶಿಸುತ್ತಿರುವ ಚಿತ್ರದ ಹೆಸರು 'ರ್ಯಾಂಬೋ'. ಈ ಚಿತ್ರವನ್ನು ಅಟ್ಲಾಂಟ ನಾಗೇಂದ್ರ ಅವರು ನಿರ್ಮಿಸುತ್ತಿದ್ದಾರೆ. ಈಗಾಗಲೇ ಮೈಸೂರಿನಲ್ಲಿ ಮೊದಲ ಹಂತದ ಚಿತ್ರೀಕರಣವನ್ನು ಶರಣ್ ಮಾಡಿ ಮುಗಿಸಿದ್ದಾರೆ.

ಕಲಾವಿದರ ಕುಟುಂಬದಿಂದ ಬಂದಿರುವ ಶರಣ್ ಒಂದೊಂದೇ ಹೆಜ್ಜೆಯಿಡುತ್ತ ಇವತ್ತು ನಾಯಕ ಮತ್ತು ನಿರ್ದೇಶಕನ ಪಟ್ಟವನ್ನಲಂಕರಿಸುತ್ತಿರುವುದು ನಿಜಕ್ಕೂ ಮೆಚ್ಚುವಂತಹದ್ದೆ. ಬಹುಶಃ ಬಹುತೇಕ ಎಲ್ಲಾ ಕಲಾವಿದರು ಒಂದೋ ನಿರ್ದೇಶಕನಾಗುವುದು ಅಥವಾ ನಾಯಕ ನಟನಾಗುವ ಕನಸುಗಳನ್ನು ಕಾಣುತ್ತಿರುತ್ತಾರೆ. ಆದರೆ ಶರಣ್ ಜೀವನದಲ್ಲಿ ಈ ಎರಡೂ ಕನಸುಗಳು ಏಕಕಾಲದಲ್ಲಿ ನನಸಾಗುತ್ತಿರುವುದು ಗಮನಾರ್ಹ. ಆದರೆ ಇಂತಹ ಸಿಹಿಸುದ್ದಿಯನ್ನು ಸಂಭ್ರಮದಿಂದ ಗೆಳೆಯರು, ಹಿತೈಷಿಗಳು ಮತ್ತು ಪತ್ರಕರ್ತರ ಜೊತೆ ಹಂಚಿಕೊಳ್ಳುವ ಬದಲು ಗುಟ್ಟುಗುಟ್ಟಾಗಿ ಯಾಕೆ ಮಾಡುತ್ತಿದ್ದಾರೆಂಬುದೇ ಆಶ್ಚರ್ಯ.

ಈ ಹಿಂದೆ ಶರಣ್ ನಾಯಕನಟನಾಗಿ ಒಂದು ಚಿತ್ರದಲ್ಲಿ ನಟಿಸಿದ್ದರೂ ನಾಯಕ ಕಂ ನಿರ್ದೇಶಕನಾಗಿ ಡಬಲ್ ಆಕ್ಟ್ ಮಾಡುತ್ತಿರುವುದು ಇದೇ ಮೊದಲು.

ಮಾನವೀಯ ವಿರೋಧಿ ಚಿಂತನೆಗಳತ್ತ ತುಡಿಯುತ್ತಿರುವುದನ್ನು ನೋಡುತ್ತಾ ಕುರುಡು, ಕಿವುಡುತನವನ್ನು ಪ್ರದರ್ಶಿಲೂಬಾರದು" ಎಂದು ಹೇಳಿದ್ದಾರೆ. ಸಿದ್ಧಲಿಂಗಯ್ಯನವರ ಬಗ್ಗೆ ಈಗ ಚಿಂತಿಸುವುದು ದುರಂತದ ಸಂಗತಿ. ಯಾಕೆಂದರೆ, ಸಿದ್ಧಲಿಂಗಯ್ಯನವರು ತಮ್ಮ 'ಊರುಕೇರಿ'ಯನ್ನು ಯಾವಾಗ ರಾಮಕೃಷ್ಣ ಹೆಗಡೆಯವರಿಗೆ ಅರ್ಪಿಸಿದರೋ ಆವಾಗಲೇ ಅವರು ತಮ್ಮ ದಲಿತ ಪರ, ಮಾನವೀಯ ಪರ ಚಿಂತನೆಗಳ ಸಾಹಿತ್ಯವನ್ನು 'ಬ್ರಾಹ್ಮಣ್ಯ'ತೆಯಲ್ಲಿ ಲೀನಗೊಳಿಸಿಕೊಂಡಿದ್ದರು.

ಇದರ ಬಗ್ಗೆ ಈ ಹಿಂದೆ ಗೌರಿ ಲಂಕೇಶ್ ಪತ್ರಿಕೆ 'ಪುರೋಹಿತ ಸಿದ್ಧಲಿಂಗಯ್ಯ' ಎಂಬ ತಲೆಬರಹದ ಲೇಖನ ಪ್ರಕಟಿಸಿತ್ತು, ಸಿದ್ಧಲಿಂಗಯ್ಯನವರ ಮಾನವೀಯ ವಿರೋಧಿತನ ಹಾಗೂ ಬಲಪಂಥೀಯ ನಿಲುವನ್ನು ಅನಾವರಣಗೊಳಿಸಿತ್ತು. ಆಗಲೇ ನಾನು ಈ ಲೇಖನಕ್ಕೆ ಸಿದ್ಧಲಿಂಗಯ್ಯನವರ ಬಗ್ಗೆ "ಸವದಿರಿ, ಇಕ್ಕಿರಿ, ಯಾವುದಾದರೂ ಅಧಿಕಾರ ಕೊಡಿ" ಎಂಬ ತಲೆಬರಹದ ಪತ್ರ ಬರೆದಿದ್ದೆ. ಅದು ಪತ್ರಿಕೆಯಲ್ಲಿ ಪ್ರಕಟವೂ ಆಗಿತ್ತು.



ಸ್ವಹಿತದ ಚಟುವಟಿಕೆಗಾಗಿ ತಮ್ಮ ಸೈದ್ಧಾಂತಿಕತೆಯನ್ನೇ ಮಾರಿಕೊಂಡಿರುವ ಸಿದ್ಧಲಿಂಗಯ್ಯನವರ ಬಗ್ಗೆ ಇನ್ನು ಮುಂದೆ ಚಿಂತಿಸುವುದಾಗಲೀ, ಚರ್ಚಿಸುವುದಾಗಲೀ ನಿಷ್ಪ್ರಯೋಜಕ!

-ದೇವೇಂದ್ರ ಶರ್ಮಾ, ಶಹಾಪೂರ- ಬಸವರಾಜ ಹಳ್ಳಿ, ಹಸಮಕಲ್

ಪುಟಪರ್ತಿ ಸಾಯಿಬಾಬರವರು ನಿಧನರಾದ ಬಳಿಕ ಅವರ ಖಾಸಗಿ ಕೊಠಡಿಯನ್ನು ತೆರೆದು ನೋಡಲಾಗಿ ಅದರಲ್ಲಿ ಕೂಡಿಡಲಾಗಿದ್ದ ಬೃಹತ್ ಪ್ರಮಾಣದ 98 ಕಿಜಿ ಚಿನ್ನ, 207 ಕಿಜಿ ಬೆಳ್ಳಿ ಮತ್ತು 12 ಕೋಟಿ ರೂಪಾಯಿ ನಗದು ದೊರಕಿದೆ ಎಂದು ವರದಿಯಾಗಿದೆ. ಈ ರೀತಿಯ ಸಂಗ್ರಹವು ಖಂಡಿತವಾಗಿಯೂ ಕಾನೂನು ಬಾಹಿರ ಮತ್ತು ಅಕ್ರಮದಿಂದ ಕೂಡಿದ್ದಾಗಿರುತ್ತದೆ. ಆದುದರಿಂದ ಈ ಹಣ ಮತ್ತು ಚಿನ್ನಾಭರಣಗಳನ್ನು ಸರಕಾರವು ಕೂಡಲೇ ವಶಪಡಿಸಿಕೊಂಡು ಇದರ ಬಗ್ಗೆ ಒಂದು ಉನ್ನತ ಮಟ್ಟದ ತನಿಖೆಯನ್ನು ನಡೆಸುವ ಅಗತ್ಯವಿದೆ. ಈ ಹಿಂದೆಯೇ ಅಲ್ಲಿ ನಡೆಯುತ್ತಿದ್ದ ಅಕ್ರಮ ವ್ಯವಹಾರಗಳ ಮತ್ತು ಅಂತರರಾಷ್ಟ್ರೀಯ ಕಳ್ಳಸಾಗಣಿಕೆಯ ಬಗ್ಗೆ ದೂರು ದಾಖಲಿಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದೂ ಇದೆ. ಸಾಯಿಬಾಬರ ಸಾವಿನ ಪ್ರಕರಣವು ಮತ್ತು ಈ ಬೃಹತ್ ಪ್ರಮಾಣದ ಧನದ ಶೇಖರಣೆಯು ಅನೇಕ ಸಂಶಯಗಳಿಗೆ ಕಾರಣವಾಗಿದೆ. ಆದುದರಿಂದ ಇವೆಲ್ಲಕ್ಕೂ ಸೂಕ್ತ ಉತ್ತರ ದೊರಕಿ ತಪ್ಪಿತಸ್ಥರನ್ನು ಬಂಧಿಸುವ ಕಾರ್ಯವೂ ಆಗಬೇಕಿದೆ.

- ಬಿ ವಿ ಕಕ್ಕಿಲಾಯ, ಮಾಜಿ ಸಂಸದರು, ಮಂಗಳೂರು

ನಾನು ಬಹಳ ವರ್ಷಗಳಿಂದ ನಿಮ್ಮ ಪತ್ರಿಕೆಯ ಓದುಗನಾಗಿದ್ದೇನೆ. ಅದರಲ್ಲೂ ಬಿ.ಚಂದ್ರೇಗೌಡರ 'ಕಟ್ಟೆಪುರಾಣದ' ಕಟ್ಟಾ ಅಭಿಮಾನಿ. ನೀವು ಮತ್ತು ನಿಮ್ಮ ತಂಡ ಮಾಡುತ್ತಿರುವ ಕೆಲಸವನ್ನು ಮೆಚ್ಚುವ ನಾವು ಆ ಕಾರಣಕ್ಕೆ ಪ್ರತಿ ವಾರ ನಿಮ್ಮ ಪತ್ರಿಕೆಯನ್ನು ಕೊಂಡು ಓದುತ್ತೇನೆ. ಗೌರಿ, ಶಿವಸುಂದರ್, ಪಾರ್ವತೀಶ, ಸೋಮನಾಥ್ ಎಲ್ಲರ ಬರಹಗಳು ನನಗೆ ಇಷ್ಟು ಮತ್ತು ಎಲ್ಲರ ಬಗ್ಗೆ ನನಗೆ ಗೌರವ ಇದೆ.

ಇಷ್ಟೆಲ್ಲ ಹೇಳಿದ ಮೇಲೆ ನನ್ನ ಅಸಮಾಧಾನವನ್ನೂ ಹೇಳಲೇಬೇಕು. ಕಳೆದ ಸಂಚಿಕೆಯಲ್ಲಿ 'ಕೊಲೆಯಾದಳು ರಜನಿ ಅತ್ತಿಗೆ' ಎಂಬ ವರದಿಯನ್ನು ಮುಖಪುಟದಲ್ಲಿ ಪ್ರಕಟಿಸುವ ಅಗತ್ಯವೇನಿತ್ತು? ಆ ವರದಿಗೂ, ಅದಕ್ಕೆ ನೀಡಿದ್ದ ಶೀರ್ಷಿಕೆಗೂ ಎತ್ತಿಂದೆತ್ತಣ ಸಂಬಂಧ? ಇತ್ತೀಚೆಗೆ ಇಂತಹ ಹಲವು ವರದಿಗಳು ಪತ್ರಿಕೆಯಲ್ಲಿ ಪ್ರಕಟಗೊಂಡಿವೆ.

ಪತ್ರಿಕೆಯೂ ಒಂದು ಉದ್ಯಮವಾಗಿದ್ದು ನಿಮ್ಮಂತಹ ಪತ್ರಿಕೆ ಹಣದ ಬಿಕ್ಕಟ್ಟನ್ನು ಎದುರಿಸುತ್ತಿರುತ್ತದೆ ಎಂಬ ಅರಿವು ನನಗಿದೆ. ಆದರೆ ದಯವಿಟ್ಟು ಇಂತಹ ವರದಿಗಳನ್ನು ಪ್ರಕಟಿಸದಂತೆ ಎಚ್ಚರ ವಹಿಸಿ ಎಂದು ಕೇಳಿಕೊಳ್ಳುತ್ತೇನೆ.

- ಅಶ್ವಿನ್, ಇ-ಮೇಲ್ ಮೂಲಕ

ಸುದೀಪ್ ವಿರುದ್ಧ ಸದ್ದು

ಕನ್ನಡ ಚಿತ್ರರಂಗದಲ್ಲಿ ಭಿನ್ನಮತೀಯ ಚಟುವಟಿಕೆ, ಬಂಡಾಯ, ಕಾಲೆಳೆಯುವುದು... ಇವೆಲ್ಲ ಹೊಸ ವಿಷಯವೇನಲ್ಲ, ಈಗ ಮೊನ್ನೆ ಸೆಲೆಬ್ರಿಟಿ ಕ್ರಿಕೆಟ್ ಪಂದ್ಯದ ಫೈನಲ್ಸ್‌ನಲ್ಲಿ ಸೋತ ಕರ್ನಾಟಕ ತಂಡದ ಕ್ಯಾಪ್ಟನ್ ಸುದೀಪ್ ವಿರುದ್ಧ ಇಡೀ ಚಿತ್ರರಂಗ ತಿರುಗಿಬಿದ್ದಿದೆ. ಸುದೀಪ್ ಟಾಸ್ ವಿನ್ ಆದಾಗ ಬ್ಯಾಟಿಂಗ್ ಆರಿಸಬೇಕಿತ್ತು, ವಿಜಯ್ ಅವರನ್ನು ಓಪನಿಂಗ್ ಬ್ಯಾಟ್ಸಮನ್ ಆಗಿ ಕಳುಹಿಸಬಾರದಿತ್ತು, ದಿಗಂತ್‌ಗೆ ಬೌಲಿಂಗ್ ನೀಡಬಾರದಿತ್ತು... ಇತ್ಯಾದಿ ಇತ್ಯಾದಿಯಾಗಿ ಕ್ರಿಕೆಟ್ ಎಕ್ಸ್‌ಪರ್ಟ್‌ಗಳಂತೆ ಮಾತನಾಡುತ್ತಿದ್ದಾರೆ. ಇದೆಲ್ಲ ಒಂದು ತಂಡ ಸೋತ ನಂತರ ಮಾಮೂಲಿ.



ಆದರೆ ಇದಕ್ಕಿಂತಲೂ ದೊಡ್ಡ ರೀತಿಯಲ್ಲಿ ಸುದೀಪ್ ಮೇಲೆ ಗೂಬೆ ಕೂರಿಸುವ ಕೆಲಸವೂ ನಡೆಯುತ್ತಿದೆ. ಅದೇನೆಂದರೆ ಕನಿಷ್ಠ 5 ವರ್ಷವಾದರೂ ನಾಯಕನಟನಾಗಿ ನಟಿಸಿರುವವರನ್ನು ಮಾತ್ರ ಮುಂದಿನ ವರ್ಷ ಆಯ್ಕೆ ಮಾಡಬೇಕು ಎಂಬ ಹೊಸ ವಾದ ತೇಲಿಬಂದಿದೆ. ಕರ್ನಾಟಕ ತಂಡದಲ್ಲಿ ಕಲಾವಿದರಿಗಿಂತ ಕ್ರಿಕೆಟ್ ಆಟಗಾರರೇ ಹೆಚ್ಚು ಜನ ಇದ್ದರೆಂದು ಮುಂಬೈ ತಂಡದ ಸೊಹೆಲ್ ಖಾನ್ ಹೇಳಿದ್ದನ್ನು ನೀವಿಲ್ಲಿ ನೆನಪಿಸಿಕೊಳ್ಳಬಹುದು. ಅದನ್ನೇ ನೆಪವಾಗಿಟ್ಟುಕೊಂಡು ಇದೀಗ ಸುದೀಪ್ ವಿರೋಧಿ ಬಣ ಕಾರ್ಯವೆಸಗುತ್ತಿದೆ. ಅವರ ಪ್ರಕಾರ ಸುದೀಪ್ ನಾಯಕನಾಗಿ ಮುಂದುವರೆಯಲಿ ಆದರೆ ತಂಡದ ಸದಸ್ಯರನ್ನು ಆಯ್ಕೆ ಮಾಡಲು ಇನ್ನೊಂದು ಸಮಿತಿಯನ್ನು ರಚಿಸಬೇಕು ಎಂಬುದು ಅವರ ಮುಖ್ಯವಾದ ಬೇಡಿಕೆ. ಈ ಬೇಡಿಕೆಗೆ ಸುದೀಪ್ ಒಪ್ಪುವ ಸಾಧ್ಯತೆ ಕಡಿಮೆ ಎಂಬುದು ಬೇರೆ ಮಾತು.

ಕ್ರಿಕೆಟ್ ಆಟದಿಂದ ಇಂಡಿಯಾ-ಪಾಕಿಸ್ತಾನದ ನಡುವಿನ ಸಂಬಂಧ ವೃದ್ಧಿಯಾದಂತೆ ಚಿತ್ರರಂಗದಲ್ಲಿರುವವರ ನಡುವಿನ ಸಂಬಂಧ ಗಟ್ಟಿಯಾಗುತ್ತದೆ ಎಂಬ ನಂಬಿಕೆ ಈ ಬೆಳವಣಿಗೆಯಿಂದ ಹುಸಿಯಾಗಿದೆ.

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 6-7-2011 RNI No. KARKAN200

'ರ' ಗಳ ಜೀವನ 'ರಗಳೆ'



ರಾಧಿಕಾ ಭಾರೀ ಸುದ್ದಿ ಮಾಡುತ್ತಾ ಮತ್ತೆ ಚಿತ್ರರಂಗದತ್ತ ಬರುತ್ತಿದ್ದಾರೆ.

ಆದರೆ ಈ ಬಾರಿ ಮುಖಕ್ಕೆ ಬಣ್ಣ ಹಚ್ಚಿ ನಟಿಸುವ ಬದಲು ಆಕೆ ನಿರ್ಮಾಪಕಿಯಾಗಿ ಬರುತ್ತಿದ್ದಾರೆ.

ಈಕೆ ನಿರ್ಮಿಸಲಿರುವ ಚಿತ್ರದ ಹೆಸರು 'ಲಕ್ಕಿ'. ಈ ಚಿತ್ರದ ನಾಯಕಿಯಾಗಿ ರಮ್ಯಾ ಆಯ್ಕೆಯಾಗಿದ್ದಾರೆ. ನಾಯಕನಾಗಿ ಯಶ್ ನಟಿಸಲಿದ್ದಾರೆ. ಹಾಗೆ ನೋಡಿದರೆ ಈ ಸುದ್ದಿಯನ್ನು ಮೊದಲು ಬಹಿರಂಗಗೊಳಿಸಿದ್ದು ರಮ್ಯಾ ವಿನಃ ರಾಧಿಕಾ ಅಲ್ಲ. ರಾಧಿಕಾ ಮಾತ್ರ ಇನ್ನೂ ಈ ಬಗ್ಗೆ ತುಟಿಕ್‌ಪಿಟಿಕ್ ಅಂದಿಲ್ಲ. ರಮ್ಯಾ-ರಾಧಿಕಾ ಕಾಂಬಿನೇಷನ್ ಗಾಂಧಿನಗರದ ಜನರಲ್ಲಿ ಕುತೂಹಲ ಮೂಡಿಸಿದೆ. ಆದಕ್ಕೆ ಕಾರಣ: ರಮ್ಯಾ ಕೇಂದ್ರ ಸರ್ಕಾರದ ಮಂತ್ರಿ ಎಸ್.ಎಂ.ಕೃಷ್ಣರ ನಿಕಟ ಸಂಬಂಧಿ ಆಗಿರುವುದು ಮತ್ತು ರಾಧಿಕಾ ಜನತಾದಳ ನಾಯಕ ಕುಮಾರಸ್ವಾಮಿಯವರ ಪತ್ನಿ ಆಗಿರುವುದು. ಹೀಗಾಗಿ ಈ ಚಿತ್ರ ಕಾಂಗ್ರೆಸ್ ಮತ್ತು ದಳ ಪರಸ್ಪರ ಸ್ನೇಹಹಸ್ತ ಚಾಚಿರುವುದರ ಸಂಕೇತವೇ ಎಂದು ಗಾಂಧಿನಗರಿಗಳು ಲೆಕ್ಕಹಾಕುತ್ತಿದ್ದಾರೆ.

ನಾಲ್ಕೈದು ವರ್ಷಗಳ ಹಿಂದೆ ರಮ್ಯಾ-ರಾಧಿಕಾ-ರಕ್ಷಿತಾ ಎಂಬ 'ರ'ಗಳು ಕನ್ನಡ ಚಿತ್ರರಂಗದಲ್ಲಿ ನಾಯಕಿಯರಾಗಿ ವಿಜೃಂಭಿಸುತ್ತಿದ್ದರು. ಆ ಕಾಲದಲ್ಲಿ ಅತ್ಯಂತ ಬಡ ಹುಡುಗಿಯಾಗಿದ್ದ ರಾಧಿಕಾ ಈಗ ಅತ್ಯಂತ ದುಬಾರಿ ನಟಿ ರಮ್ಯಾಳನ್ನು ಹಾಕಿಕೊಂಡು ಸಿನಿಮಾ ನಿರ್ಮಿಸುತ್ತಿರುವುದು ಆಶ್ಚರ್ಯವೇ ಸರಿ.

ಹಾಗೆ ನೋಡಿದರೆ ಈ ಮೂರೂ 'ರ' ಗಳ ಜೀವನ 'ರಗಳೆ'ಯಂತೆ ಕಾಣಿಸುತ್ತಿದೆ. ರಾಧಿಕಾ ಕುಮಾರಸ್ವಾಮಿಯನ್ನು ಗುಟ್ಟಾಗಿ ಮದುವೆಯಾಗಿ ಕೆಲ ದಿನ ಅಜ್ಞಾತವಾಸದಲ್ಲಿ ಬದುಕಿದ್ದರು. ರಕ್ಷಿತಾ ಡಾಂ-ಡೂಂ ಎಂಬ ನಿರ್ದೇಶಕ ಪ್ರೇಮ್‌ನನ್ನು ವರಿಸಿ ಈಗ ಅವರ ದಾಂಪತ್ಯ ಜೀವನ ಡೈವೋರ್ಸ್ ಹಂತಕ್ಕೆ ತಲುಪಿದೆ. ಆದರೆ ರಮ್ಯಾ ಮಾತ್ರ ಈಗಲೂ ಚಿತ್ರರಂಗದಲ್ಲಿ ಬೇಡಿಕೆ ಹೊಂದಿರುವ ನಟಿಯಾಗಿ ಮುಂದುವರೆದಿದ್ದು ಈಗ ಪೋರ್ಚುಗಲ್ ಯುವಕನೊಬ್ಬನನ್ನು ಪ್ರೀತಿಸಿ ಆತನನ್ನು ಮದುವೆ ಆಗುವ ಸಂಭ್ರಮದಲ್ಲಿದ್ದಾಳೆ.


ಅದೇನೇ ಇರಲಿ, ರಾಧಿಕಾ ಈಗ ನಿರ್ಮಾಪಕಿಯಾಗಿ ಚಿತ್ರರಂಗಕ್ಕೆ ಮತ್ತೆ ಕಾಲಿಡುತ್ತಿರುವುದು ಆಕೆಯ ವೃತ್ತಿಜೀವನದ ಎರಡನೇ ಅಧ್ಯಾಯದ ಆರಂಭ...

ಬಾಬಣ್ಣ ಸಿಂಗ್ ವೇಷ!

ಒಂದಾನೊಂದು ಕಾಲದಲ್ಲಿ 'ಬಂಧನ' ಮತ್ತು 'ಮುತ್ತಿನ ಹಾರ'ದಂತಹ ಶ್ರೇಷ್ಠ ಚಿತ್ರಗಳನ್ನು ಕನ್ನಡದ ಪ್ರೇಕ್ಷಕರಿಗೆ ನೀಡಿದ್ದ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಈಗ ಎಲ್ಲ ರೀತಿಯಲ್ಲೂ ದಿವಾಳಿಯಾಗಿದ್ದಾರೆ.

ಅದಕ್ಕೆ ಸಾಕ್ಷಿ ಎಂಬಂತೆ ಅವರು ಮುಖ್ಯಮಂತ್ರಿ ಯಡಿಯೂರಪ್ಪನ ಜೀವನ ಚರಿತ್ರೆಯನ್ನು ಬೆಳ್ಳಿ ತೆರೆಮೇಲೆ ತರಲು ಹೊರಟಿರುವುದು.

ಪುಟ್ಟಣ್ಣ ಕಣಗಾಲ್ ನಂತರ ಕನ್ನಡ ಚಿತ್ರರಂಗ ಕಂಡ ಶ್ರೇಷ್ಠ ತಂತ್ರಜ್ಞ ಎಂಬ ಗೌರವಕ್ಕೆ ಪಾತ್ರರಾಗಿದ್ದ ಬಾಬುಗೆ ಇಂತಹ ದಯನೀಯ ಸ್ಥಿತಿ ಯಾಕೆ ಬಂತು ಎಂದು ಇಡೀ ಗಾಂಧಿನಗರ ಮಾತನಾಡಿಕೊಳ್ಳುತ್ತಿದೆ. ಆದರೆ ಇದ್ಯಾವುದರ ಬಗ್ಗೆ ತಲೆಕೆಡಿಸಿಕೊಳ್ಳದ ಬಾಬು "ಗಾಂಧಿ, ಬುದ್ಧ, ಅಂಬೇಡ್ಕರ್ ಮೊದಲಾದವರ ಜೀವನ ಚರಿತ್ರೆ ಸಿನಿಮಾವಾಗಿಲ್ಲವೇ?" ಎಂದು ಕೇಳುವ ಮೂಲಕ ನಿರ್ಲಜ್ಜತನವನ್ನು ಪ್ರದರ್ಶಿಸುತ್ತಿದ್ದಾರೆ. ಕರ್ನಾಟಕ ಹಿಂದೆಂದೂ ಕಂಡರಿಯದ ಭ್ರಷ್ಟ ಮುಖ್ಯಮಂತ್ರಿಯನ್ನು ಬೆಳ್ಳಿ ತೆರೆ ಮೇಲೆ ಸೂಪರ್‌ಸ್ಟಾರ್ ತರಹ ತೋರಿಸಲು ಬಾಬು ಮುಂದಾಗಿರುವುದು ನಾಚಿಕೆಗೇಡಿನ ವಿಷಯ. ಒಂದು ಕಾಲದಲ್ಲಿ ಒಳ್ಳೆಯ ವಾಗ್ಮಿ, ಹೋರಾಟಗಾರ, ಚಿತ್ರರಂಗದ ಬುದ್ಧಿಜೀವಿ ಎಂದೆಲ್ಲ ಎನಿಸಿಕೊಂಡಿದ್ದ ಬಾಬು ಈ ಮಟ್ಟ ತಲುಪಿರುವುದು ಒಂದು ದುರಂತ.



ಅಂದಹಾಗೆ ಯಡಿಯೂರಪ್ಪ ಕುರಿತ ಸಿನಿಮಾ ಸ್ವಲ್ಪ ತಡವಾಗಿ ಆರಂಭವಾಗುತ್ತಿದೆಯೋ ಏನೋ? ಆ ಕಾರಣಕ್ಕೆ ಈಗ ದಿಢೀರನೆ ತನ್ನ ಪುತ್ರ ಆದಿತ್ಯನನ್ನು ಹಾಕಿಕೊಂಡು 'ರೆಬೆಲ್' ಎಂಬ ಚಿತ್ರ ಆರಂಭಿಸುತ್ತಿದ್ದಾರೆ. ವಿಶೇಷವೆಂದರೆ ಈ ಚಿತ್ರದ ಮುಹೂರ್ತಕ್ಕೆ ಯಡಿಯೂರಪ್ಪ, ರೇಣುಕಾಚಾರ್ಯ ಮತ್ತು ಶೋಭಾ ಕರಂದ್ಲಾಜೆ ಮುಖ್ಯ ಅತಿಥಿಗಳಾಗಿರುವುದು. ಇನ್ನೊಂದು ವಿಷಯವೆಂದರೆ ಈ ಚಿತ್ರದಲ್ಲಿ 'ಎಸ್.ವಿ.ರಾಜೇಂದ್ರಸಿಂಗ್ ಬಾಬು' ಎಂಬ ತಮ್ಮ ಹೆಸರನ್ನು 'ಎಸ್.ವಿ.ಆರ್. ಸಿಂಗ್' ಎಂದು ಬದಲಾಯಿಸಿದ್ದಾರೆ. ಇದನ್ನು ನ್ಯೂಮರಾಲಜಿಯ ಕಾರಣಕ್ಕೆ ಮಾಡಿದ್ದಾರೋ ಅಥವಾ ಸಾಲಗಾರರಿಗೆ ಹೆದರಿ ಮಾಡಿದ್ದಾರೋ ಗೊತ್ತಿಲ್ಲ, ಅಂತೂ ಎಸ್.ವಿ.ಆರ್.ಸಿಂಗ್ ಎಂಬ 'ಹೊಸ' ನಿರ್ದೇಶಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದ್ದಾನೆ...

ಕಿರಾತಕನ ಕಾಟ!



'ರಾಜಧಾನಿ' ಎಂಬ ಚಿತ್ರ ಹಿಟ್ ಆಗಿದೆ. ಆದರೆ ಆ ಚಿತ್ರಕ್ಕೆ ಈಗ ವಿಲನ್‌ನಂತೆ ವಕ್ಕರಿಸಿಕೊಂಡಿರುವವನು ಬೇರೆ ಯಾರೂ ಅಲ್ಲ, ಆ ಚಿತ್ರದ ಹೀರೋ ಯಶ್ ಎಂಬ ಎಳಸು ನಟ!

ಹೆಸರಾಂತ ನಿರ್ದೇಶಕ ಕೆ.ವಿ.ರಾಜು ನಿರ್ದೇಶಿಸಿರುವ 'ರಾಜಧಾನಿ' ಒಟ್ಟೊಟ್ಟಿಗೇ ವಿಮರ್ಶಕರ ಮತ್ತು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಆರಂಭದಲ್ಲಿ ಕಲೆಕ್ಷನ್‌ನಲ್ಲಿ ಹಿಂದೆ ಬಿದ್ದಿದ್ದ 'ರಾಜಧಾನಿ' ಈಗ ಸುಧಾರಿಸಿಕೊಂಡು ರಾಜ್ಯಾದ್ಯಂತ ಇನ್ನೂ ಇಪ್ಪತ್ತೈದು ಮೂವತ್ತು ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣುತ್ತಿದೆ. ಈ ಚಿತ್ರದಲ್ಲಿ ಯಶ್ ಸೇರಿದಂತೆ ಐದು ಜನ ನಾಯಕರಿದ್ದಾರೆ. ಸಿನಿಮಾ ನೋಡಿದವರೆಲ್ಲಾ 'ಸರ್ದಾರ್ ಸತ್ಯ, ಚೇತನ್‌ಚಂದ್ರ, ರವಿತೇಜ, ಪ್ರಸಾದ್ ಎಲ್ಲಾ ಚೆನ್ನಾಗಿ ನಟಿಸಿದ್ದಾರೆ. ಒಳ್ಳೆ ಭವಿಷ್ಯ ಇದೆ ಹುಡುಗ್ರಿಗೆ...' ಎಂದು ಕಾಮೆಂಟ್ ಮಾಡುತ್ತಿದ್ದಾರೆ. ಜನರ ಈ ಪ್ರತಿಕ್ರಿಯೆ ಯಶ್‌ಗೆ ಉರಿ ತರಿಸಿದೆ. "ಜನ ನನಗಿಂತ ನನ್ನ ಜೊತೆಯಲ್ಲಿ ನಟಿಸಿರುವವರನ್ನೇ ಹೆಚ್ಚು ಹೊಗಳುತ್ತಿದ್ದಾರೆ" ಎಂದು ಸ್ವತಃ ಯಶ್ ಗೊಣಗಿಕೊಂಡು ತಿರುಗುತ್ತಿದ್ದಾನೆ.

ಹಾಗೆ ನೋಡಿದರೆ ಸಿನಿಮಾ ಬಿಡುಗಡೆಗೂ ಮುನ್ನ ಯಶ್ ಇಂಥ ಕಿರಿಕ್ಕುಗಳನ್ನು ಆರಂಭಿಸಿದ್ದ. ಮೊದಮೊದಲು ಈ ಚಿತ್ರದಲ್ಲಿ ಐದೂ ಜನ ಹುಡುಗರು ಹೀರೋಗಳೇ ಎಂದು ಸಿನಿಮಾ ತಂಡದವರು ಹೇಳಿದ್ದರು. ಆದರೆ ಕ್ರಮೇಣ ಅವರ ಮಾತು ಬದಲಾಯಿತು. ಆದಕ್ಕೆ ಕಾರಣ ಇದೇ ಯಶ್. "ಬೇರೆ ಹುಡುಗರನ್ನು ಬೂಸ್ಟ್ ಅಪ್ ಮಾಡಿದರೆ ನಾನು ಸಿನಿಮಾದ ಪ್ರಮೋಷನ್‌ಗೆ ಬರಲ್ಲ" ಎಂದು ಈತ ಹಠ ಹಿಡಿಯುತ್ತಿದ್ದ.

ಯಶ್‌ನ ಇಂತಹ ಅಸಹಕಾರ ಇಲ್ಲಿಗೆ ನಿಂತಿಲ್ಲ, ಇತ್ತೀಚೆಗೆ ಸಮಯ ವಾಹಿನಿಯಲ್ಲಿ 'ರಾಜಧಾನಿ' ಚಿತ್ರದ ಬಗ್ಗೆ ಯಶ್‌ನೊಂದಿಗೆ ಒಂದು ಲೈವ್ ಸಂದರ್ಶನ ನಡೆಯುವುದಿತ್ತು. ಈ ಕಾರ್ಯಕ್ರಮಕ್ಕೆ ಸಂಜೆ ಆರೂವರೆಯ ಪ್ರೈಮ್ ಟೈಮ್‌ಅನ್ನು ನಿಗದಿ ಮಾಡಿ, ಬೆಳಗ್ಗಿನಿಂದಲೇ ಇದರ ಪ್ರೋಮೋಗಳನ್ನು ಪ್ರಸಾರ ಮಾಡಲಾಗಿತ್ತು. ಆದರೆ ಈ ಲೈವ್ ಪ್ರೋಗ್ರಾಮ್‌ಗೆ ಬರಬೇಕಿದ್ದ ಯಶ್ ಮಧ್ಯಾಹ್ನ ಮೂರು ಗಂಟೆ ಆಗುತ್ತಿದ್ದಂತೇ ತನ್ನ ಮೊಬೈಲ್‌ಗೆ ಬಂದ ಕರೆಗಳನ್ನು ಸ್ವೀಕರಿಸುವುದನ್ನೇ ನಿಲ್ಲಿಸಿದ. ಸಂಜೆ ಹೊತ್ತಿಗೆ ವಾಹಿನಿಯ ಮುಖ್ಯಸ್ಥರು ಮತ್ತು ಸಿನಿಮಾದ ಪ್ರೊಡಕ್ಷನ್ ಮ್ಯಾನೇಜರ್ ಎಷ್ಟೇ ಟ್ರೈ ಮಾಡಿದರೂ ಯಶ್ ಮೊಬೈಲ್ ರಿಸೀವ್ ಮಾಡುವ ಮನಸ್ಸೇ ಮಾಡಲಿಲ್ಲ, ಯಶ್‌ನ ಇಂಥ ಅಹಂನಿಂದ ಅಂದು ಕಾರ್ಯಕ್ರಮವೇ ರದ್ದಾಯಿತು.

ಈಗ ಯಶ್ ಸೋಲೋ ಆಗಿ ನಟಿಸಿರುವ 'ಕಿರಾತಕ' ಚಿತ್ರ ಬಿಡುಗಡೆಗೆ ಸಜ್ಜಾಗಿದೆ. 'ರಾಜಧಾನಿ'ಯ ಅಲೆ ಕಮ್ಮಿಯಾದ ಮೇಲೆ ಅದನ್ನು ಬಿಡುಗಡೆ ಮಾಡುವ ಯೋಜನೆ ನಿರ್ಮಾಪಕರದ್ದಾಗಿತ್ತು. ಆದರೆ 'ರಾಜಧಾನಿ'ಯ ಮೇಲಿನ ಅಸೂಯೆಯಿಂದ ಯಶ್ ತಾನೇ ಮುಂದೆ ನಿಂತು 'ಕಿರಾತಕ' ಚಿತ್ರ ಆದಷ್ಟು ಬೇಗ ಬಿಡುಗಡೆ ಕಾಣುವಂತೆ ಪ್ರಯತ್ನಿಸುತ್ತಿದ್ದಾನೆ.. ಅಷ್ಟೇ ಅಲ್ಲ, 'ರಾಜಧಾನಿ' ಪ್ರದರ್ಶನಗೊಳ್ಳುತ್ತಿರುವ ಬೆಂಗಳೂರಿನ ಅಪರ್ಣ ಹಾಗೂ ಮೈಸೂರಿನ ಸಂಜಯ ಚಿತ್ರಮಂದಿರಗಳಿಗೆ ಖುದ್ದಾಗಿ ಭೇಟಿ ಮಾಡಿ 'ರಾಜಧಾನಿ' ಜಾಗಕ್ಕೆ 'ಕಿರಾತಕ' ಸಿನಿಮಾವನ್ನು ಹಾಕಿ ಎಂದು ಹಠ ಮಾಡಿದ್ದಾನೆ. ಆದರೆ ಈ ವಿಚಾರ 'ರಾಜಧಾನಿ' ನಿರ್ಮಾಪಕ ಸತ್ಯನ್ ಕಿವಿಗೆ ಬಿದ್ದು ಅದನ್ನು ತಡೆದಿದ್ದಾರೆ.

ಯಶ್‌ಗೆ ಪ್ರತಿಭೆ ಇದೆ. ಕಷ್ಟಪಟ್ಟು ಮುಂದೆ ಬಂದಿದ್ದಾನೆ. ಆತ ಚಿತ್ರರಂಗದಲ್ಲಿ ಇನ್ನೂ ಬಹಳಷ್ಟು ಕಾಲ ಇದ್ದು ಬೆಳೆಯಬೇಕಿದೆ. ಆದ್ದರಿಂದ ಆತ ಕೂಡಲೆ ಇಂತಹ ತರಲೆಗಳನ್ನು ಬಿಟ್ಟು ತನ್ನ ವೃತ್ತಿಯತ್ತ ಗಮನ ಹರಿಸಿದರೆ ಆತನಿಗೇ ಒಳ್ಳೆಯದು...

• ಅರುಣ್



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44